sub-clause shall be added, namely :—

'(2) It shall come into force at once in the cities of Bangalore, Mysore and Davangere and in the towns of Kolar, Tumkur, Chitaldrug, Shimoga, Chikmagalur, Hassan and Mandya and in the Kolar Gold Fields Sanitary Board Area and the old and new Towns of Bhadravati ; and it shall come into force in such other areas from such dates as the State Government may, by notification in the *Mysore Gazette,* specify in this behalf'."

Mr. SPEAKER.—The question is :

"That (i) for the heading 'Short Title' the heading 'Short Title and Commencement' shall be substituted ;

(ii) the existing clause shall be renumbered as sub-clause (1) of that clause, and after the clause as so renumbered, the following sub-clause shall be added, namely :—

'(2) It shall come into force at once in the cities of Bangalore, Mysore and Davangere and in the towns of Kolar, Tumkur, Chitaldrug, Shimoga, Chikmagalur, Hassan and Mandya and in the Kolar Gold Fields Sanitary Board Area and the old and new Towns of Bhadravati ; and it shall come into force in such other areas from such dates as the State Government may, by notification in the *Mysore Gazette,* specify in this behalf."

The motion was adopted.

Mr. SPEAKER.—The question is :

"The Clause 1, as amended, stand part of the Bill."

The motion was adopted.

Clause 1, as amended, was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri H. SIDDAVEERAPPA.—Sir, I move :

"That the Mysore Police (Amendment) Bill, 1953, as amended, be passed."

Mr. SPEAKER.—The question is :

"That the Mysore Police (Amendment) Bill, as amended, be passed."

The motion was adopted.

MYSORE (PERSONAL AND MISCELLANEOUS) INAMS ABOLITION BILL, 1953.

Motion to consider.

Sri KADIDAL MANJAPPA (Minister for Revenue and Public Works).—Sir, I move :

"That the Mysore (Personal and Miscellaneous) Inams Abolition Bill, 1953, be taken into consideration."

ಸ್ವಾಮಿ, ಈ ಮಸೂದೆಯು ಒಂದು ಬಹಳ ಪ್ರಾಮುಖ್ಯವಾದ ಮಸೂದೆಯೆಂದು ನಾನು ತಿಳಿದು ಕೊಂಡಿದ್ದೇನೆ. ಈ ದಿವಸ ನಮ್ಮ ಸಂಸ್ಥಾನದಲ್ಲಿ ದೇವಾಲಯದ ಇನಾಂತಿ ಬಗ್ಗೆ ಸುಮಾರು ಒಂದು ಲಕ್ಷ ಎಂಬತ್ತುನಾಲ್ಕು ಸಾವಿರ ಚಿಲ್ಲರೆ ಎಕರೆ ಜಮೀನು ಇರುತ್ತದೆ. 2 ಲಕ್ಷ ಎಕರೆ ಬ್ರಹ್ಮಾದಾಯ ದತ್ತಕ್ಕ ಜಮೀನಿದೆ. ಆಮೇಲೆ Personal Inamthi ಜಮೀನು

(ಶ್ರೀ ಕಡಿದಾಳ್ ಮಂಜಪ್ಪ.)

ಗಳೆಂದು 3 ಲಕ್ಷ 37 ಸಾವಿರ ಎಕರೆ ಜಮೀನಿರುತ್ತದೆ. ಪೋಟಿಗೆ ಇನಾಂತಿ ಬಗ್ಗೆ 8 ಸಾವಿರ ಎಕರೆ ಜಮೀನಿರುತ್ತದೆ. ಮಿಸ್‌ಲೇನಿಯಸ್ ಇನಾಂತಿ 9 ಸಾವಿರ ಎಕರೆ. Artisan ಇನಾಂತಿಗಾಗಿ 23 ಸಾವಿರ ಚಿಲ್ಲರೆ ಎಕರೆಗಳು. ಇದರ ಜೊತೆಗೆ Village Service ಇನಾಂತಿ ಬಗ್ಗೆ 2 ಸಾವಿರ ಎಕರೆಗಳು. ಇಷ್ಟೊಂದು ಜಮೀನುಗಳು ಈಗ ಇನಾಂತಿ ಜಮೀನುಗಳಾಗಿವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ಮುಂಚೆಯೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಈ ಮಧ್ಯವರ್ತಿ ಜನರು ಇರಬಾರದು, ಉಳುವವನೇ ಭೂಮಿಗೆ ಮಾಲೀಕನಾಗಬೇಕೆಂಬ ತತ್ವವನ್ನು ಒಪ್ಪಿಕೊಂಡಿತ್ತು. ಆ ಒಂದು ನೀತಿಗನುಸಾರವಾಗಿ ಈಗ ಈ ಭೂಸುಧಾರಣೆಯು ಆಗಬೇಕೆಂಬುದನ್ನು ಅನುಮೋದಿಸಬೇಕಾಗಿ ಬಂತು. 1949ರಲ್ಲಿ ಈ ಭೂಸುಧಾರಣೆಗೆ ಸಂಬಂಧಪಟ್ಟ ಅಂಶಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಶ್ರೀ ಎಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿತ್ತು. ಇವೆಲ್ಲಾ ಮಾನ್ಯ ಸದಸ್ಯರಿಗೂ ಗೊತ್ತಿರತಕ್ಕ ವಿಚಾರವೇ ಆಗಿದೆ. ಆ ಸಮಿತಿಯ ಶಿಫಾರ್ಸಿನ ಆಧಾರದ ಮೇಲೆ 1951ನೇ ಇಸ್ವಿಯಲ್ಲಿ ಒಂದು ಮಸೂದಾಕಾನೂನು ತಯಾರಾಗಿ, ಅದನ್ನು ಆಗಿದ್ದ ಶಾಸನ ಸಭೆಯ ಮುಂದೆ ತರಲಾಗಿತ್ತು. ಆಗ ಆ ಮಸೂದೆ ಅಲ್ಲಿ ವಿಶೇಷ ಚರ್ಚೆಯಾಗಿ ಸೆಲೆಕ್ಟ್ ಸಮಿತಿಯ ಮುಂದೆ ಹೋಯಿತು. ಆಗ ಸೆಲೆಕ್ಟ್ ಸಮಿತಿಯವರೂ ಕೂಡ ತುಂಬ ಚರ್ಚೆಮಾಡಿ ಆ ಬಗ್ಗೆ ಒಂದು ವರದಿಯನ್ನು ತಯಾರಿಸಿ ಅದನ್ನು ಆಗಿದ್ದ ಶಾಸನ ಸಭೆಯ ಮುಂದೆ ಇಡಲಾಗಿತ್ತು. ಆದರೆ ಆಗಿದ್ದ ಶಾಸನಸಭೆಯು ಡಿಸಾಲ್ವ್ ಮಾಡಲ್ಪಟ್ಟಿದ್ದರಿಂದ ಆ ಬಿಲ್ಲೂ ಕೂಡ ಲ್ಯಾಪ್ಸಾಗಿ ಹೋಯಿತು. ಅನಂತರ ಹೊಸದಾಗಿ ಈ ಬಿಲ್ಲನ್ನು ತಯಾರಿಸಿ ಈಗ ಸಭೆಯ ಮುಂದೆ ಇಟ್ಟಿದ್ದೇನೆ. ಆದರೆ ಈ ಬಿಲ್ಲು ಸರ್ವಸಮರ್ಪಕವಾಗಿದೆಯೆಂದು ನಾನು ಹೇಳುವುದಿಲ್ಲ. ಬಹುಶಃ ಈ ಮಸೂದೆ ಸೆಲೆಕ್ಟ್ ಸಮಿತಿಯವರ ಪರಿಶೀಲನೆಗೆ ಹೋಗಬೇಕಾಗಿ ಬರಬಹುದು. ಆದಕಾರಣ ನಾನೀಗ ಎಲ್ಲ ವಿವರಗಳನ್ನು ಈಗ ಚರ್ಚಿಸುವುದಕ್ಕೆ ಹೋಗುವುದಿಲ್ಲ. ಆದರೆ ಬಿಲ್ಲಿನಲ್ಲಿ ಅಡಕವಾಗಿರುವ ಜಮೀನುಗಳು ಯಾವ ಯಾವ ಇನಾಂತಿಗೆ ಸಂಬಂಧಪಟ್ಟಿದೆಯೆಂಬ ಅಂಶವನ್ನು ಸಂಕ್ಷಿಪ್ತವಾಗಿ ಈ ಮಾನ್ಯ ಸಭೆಯವರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈ ಮಸೂದೆಯ ವ್ಯಾಪ್ತಿಗೆ ಪರ್ಸನಲ್ ಸರ್ವೀಸ್ ಇನಾಂತಿಗಳು ಮತ್ತು ರಿಲಿಜಿಯಸ್ ಇನಾಂತಿಗಳು ಸೇರಿರುವುದಿಲ್ಲ. ಈ ಕಾನೂನಿನ ಉದ್ದೇಶವೇನೆಂಬುದನ್ನು ಈ ಕಾನೂನಿನ ಕೊನೆಯ ವಿವರಣೆಯಲ್ಲಿ ವಿವರಿಸಲಾಗಿದೆ. ಈ ಮಸೂದೆಯೊಳಗೆ ಸರ್ವೀಸ್ ಮತ್ತು ರಿಲಿಜಿಯಸ್ ಇನಾಂತಿಗಳನ್ನು ಸೇರಿಸಲು ಕೊಂಚತೊಂದರೆ ಇದೆ. ಈ ಮಸೂದಾಕಾನೂನು ಪ್ರಕಾರ ಪರ್ಸನಲ್ ಮತ್ತು ಮಿಸಲೇನಿಯಸ್ ಇನಾಂತಿಗಳನ್ನು ಮೊದಲು ಸರ್ಕಾರಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಅನಂತರ ಸರ್ಕಾರದವರು ಸದರೀಜಮೀನುಗಳನ್ನು ಸಾಗವಳಿ ಮಾಡತಕ್ಕ ರೈತರಿಗೆ ಹಂಚತಕ್ಕ ಏರ್ಪಾಡುಗಳನ್ನು ಮಾಡಲಾಗುತ್ತದೆ. ಈಗ ಕೆಲವು ಹೀಗೆ ಸರ್ಕಾರಕ್ಕೆ ಸೇರಿಸಿಕೊಳ್ಳತಕ್ಕ ಜಮೀನುಗಳನ್ನು ಖದೀಮು ರೈತರುಗಳು ಸಾಗುವಳಿ ಮಾಡುತ್ತಿದ್ದಾರೆ. ಇಂಥಾ ಖದೀಮ್ ರೈತರುಗಳಿಂದ ಅವರ ಸಾಗುವಳಿ ಮಾಡತಕ್ಕ ಜಮೀನಿನ ಬಗ್ಗೆ ಯಾವ ಕಿಮ್ಮತ್ತನ್ನೂ ತೆಗೆದುಕೊಳ್ಳದೆ ಆ ಜಮೀನುಗಳನ್ನು ಹಾಗೆಯೇ ಅವರಿಗೆ ಬಿಟ್ಟು ಕೊಡಲಾಗುತ್ತದೆ. ಆದರೆ ಅವರು ಸರ್ಕಾರಕ್ಕೆ ಈಗ ಯಾವರೀತಿ ಇತರ ಸರ್ಕಾರಿ ಗ್ರಾಮದಲ್ಲಿರತಕ್ಕ ರೈತರು ಕಂದಾಯ ಕೊಡುತ್ತಿದ್ದಾರೆಯೋ ಹಾಗೆ ಅವರೂ ಕಂದಾಯ ಕೊಡಬೇಕಾಗುತ್ತದೆ. ಜಮೀನನ್ನು ಮುಫತ್ತಾಗಿ ಕೊಟ್ಟರೂ ಅವರು ಕಂದಾಯವನ್ನು ಕೊಡಲೇಬೇಕು. ಇನ್ನೂ ಕೆಲವರು ಪರ್ಮನೆಂಟ್ ಟೆನೆಂಟ್ಸ್‌ಗಳಿದ್ದಾರೆ. ಖದೀಮು ರೈತರುಗಳಿಗೂ ಪರ್ಮನೆಂಟ್ ರೈತರುಗಳಿಗೂ ಅರ್ಥದಲ್ಲಿ ಎಲ್ಲಿಯೋ ಕೊಂಚ ವ್ಯತ್ಯಾಸವಿದೆ. ಆದುದರಿಂದ ಅಂಥ ಪರ್ಮನೆಂಟ್ ರೈತನ ಸುಫರ್ದಿನಲ್ಲಿರತಕ್ಕ ಜಮೀನನ್ನೂ ಕೂಡ ಆತನಿಗೇ ಕೊಡಲಾಗುತ್ತದೆ. ಹಾಗೆ ಕೊಡಲಾಗತಕ್ಕ ಜಮೀನಿಗೆ ಈ ರೈತರು ಸರ್ಕಾರಕ್ಕೆ ಎಲ್ಲರಂತೆ ಕಂದಾಯ ಕೊಡುವುದರ ಜೊತೆಗೆ ಆತನಿಗೆ ಕೊಡಲ್ಪಡುವ ಜಮೀನಿಗೆ ಏನು ಮಾರ್ಕೆಟ್ ಬೆಲೆ ಇರುತ್ತದೆಯೋ ಅದರಲ್ಲಿ ಶೇಕಡಾ 50ರಷ್ಟನ್ನು ಐದು ಕಂತುಗಳಲ್ಲಿ ಪಾವತಿಮಾಡಬೇಕೆಂದು ತಿಳಿಸಲಾಗಿದೆ. ಹೀಗೆ ಈ ಖದೀಂ ರೈತರು ಮತ್ತು ಪರ್ಮನೆಂಟ್ ರೈತರು ಆಗಿಲ್ಲದೆ ಇರತಕ್ಕಂಥ ಯಾವ ರೈತರುಗಳಿರುತ್ತಾರೆಯೋ ಅಂಥ ರೈತರು ಯಾವ ಜಮೀನನ್ನು ಸಾಗುವಳಿ ಚೀಟಿಯಮೂಲಕ ಆರು ವರ್ಷಗಳಿಗೆ ಕಡಮೆ ಇಲ್ಲದೆ ಸಾಗುವಳಿ ಮಾಡುತ್ತಿದ್ದರೆ ಆ ಜಮೀನುಗಳನ್ನು ಅಂಥ ರೈತರುಗಳಿಗೇ ಕೊಡಬೇಕೆಂದು ತಿಳಿಸಲಾಗಿದೆ. ಇವರು ಸರ್ಕಾರಕ್ಕೆ ಎಲ್ಲರಂತೆ ಕಂದಾಯವನ್ನು ಮತ್ತು ಹಾಗೆ ಕೊಡಲ್ಪಡತಕ್ಕ ಜಮೀನಿನ ಮಾರ್ಕೆಟ್ ಬೆಲೆಯಲ್ಲಿ ಶೇಕಡ 75ರಷ್ಟು ಮೊಬಲಗನ್ನು 10 ಕಂತುಗಳಲ್ಲಿ ಪಾವತಿ ಮಾಡಬೇಕೆಂದು ವಿಧಾಯಕಮಾಡಲಾಗಿದೆ. ಹೀಗೆ ಈ ಮೂರು ಬಗೆಯ ರೈತರೇ ಅಲ್ಲದೆ ಇರತಕ್ಕ ಅಂದರೆ ಹಂಗಾಮಿ ಸಾಗುವಳಿ ಮಾಡತಕ್ಕಂಥ ರೈತರು ಇರುತ್ತಾರೆ. ಇಂಥವರಿಗೆ ಕೊಡತಕ್ಕ ಜಮೀನಿಗೆ ಕಿಮ್ಮತ್ತನ್ನು ನಿರ್ಧಾರಮಾಡತಕ್ಕದ್ದನ್ನು ಡೆಪ್ಯುಟಿ ಕಮಿಷನರ ಇಷ್ಟಕ್ಕೆ ಬಿಡಲಾಗಿದೆ. ಇಷ್ಟೇ ಅಲ್ಲವೆ, ಇನಾಂದಾರನು ತನ್ನ ಸ್ವಂತ ಸಾಗುವಳಿಗಾಗಿ ಯಾವುದಾದರೂ ಜಮೀನುಗಳನ್ನಿಟ್ಟು ಕೊಂಡಿದ್ದರೆ ಅಂಥ ಜಮೀನುಗಳನ್ನು ಆತನಿಗೇ ಬಿಟ್ಟುಕೊಡಲಾಗುತ್ತದೆ.

ಶ್ರೀ ಪಿ. ವೆಂಕಟಪ್ಪ (ಚನ್ನಪಟ್ಟಣ).—ಈ ಒಬ್ಬರಿಗೆ ಮಾತ್ರ ಜಮೀನಿನ ಬೆಲೆಯನ್ನು ನಿರ್ಧರಿಸಲು ಡಿ. ಸಿ. ಯವರಿಗೆ ಅವಕಾಶಕೊಟ್ಟಿದ್ದೀರಿ. ಇನ್ನುಳಿದ ರೈತರಿಗೆ ಕೊಡುವ ಜಮೀನುಗಳ ಬೆಲೆಯನ್ನು ಯಾರು ನಿರ್ಧರಿಸುತ್ತಾರೆ !

ಶ್ರೀ ಕಡಿದಾಳ್ ಮಂಜಪ್ಪ.—ಶೇಕಡ 50ರಷ್ಟು, 75ರಷ್ಟು ಎಂಬುದಾಗಿ ಆಕ್ಟಿನಲ್ಲೇ ಅದೆಲ್ಲವನ್ನೂ ತಿಳಿಸಲಾಗಿದೆ. ನಾವು ಈಗ ನಾನು ಡೆಪ್ಯುಟಿ ಕಮಿಷನರವರಿಗೆ ಬಿಟ್ಟಿರತಕ್ಕ ಸಂದರ್ಭದಲ್ಲಿ ಕೂಡ ಶೇಕಡ 75ರಷ್ಟನ್ನು ತೆಗೆದುಕೊಳ್ಳಬೇಕೆಂದು ವಿಧಾಯಕಮಾಡಿದ್ದೇವೆ. ಇನಾಂ ಜಮೀನುಗಳ ಪೈಕಿ ಯಾವವು ಇನಾಂದಾರನ ಖಾಸ್‌ಪೊಸೆಷನ್ನಲ್ಲಿರುತ್ತವೆಯೋ " ಅಂಥ ಜಮೀನುಗಳನ್ನು ಆ ಇನಾಂದಾರನಿಗೇ ಬಿಟ್ಟುಕೊಡಲಾಗುತ್ತದೆ.

ಇನ್ನು ಹೀಗೆ ಸರ್ಕಾರಕ್ಕೆ ಜಮೀನುಗಳನ್ನು ತೆಗೆದುಕೊಳ್ಳತಕ್ಕ ವಿಚಾರವಾಗಿ ಕೊಡತಕ್ಕ ಕಾಂಪೆನ್‌ಸೇಷನ್ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳತಕ್ಕದ್ದು ಅವಶ್ಯಕವೆಂದು ಭಾವಿಸಿದ್ದೇನೆ. ಇನ್ನು ಮೈಸೂರು ಸಂಸ್ಥಾನದಲ್ಲಿ ಇರತಕ್ಕ ಇನಾಂತಿ, ಜೋಡಿ ಇತ್ಯಾದಿಗಳ ಬಗ್ಗೆ ಅವರಿಗೆ ಹಕ್ಕು ಇರತಕ್ಕ ಬಗ್ಗೆ ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿ ಏಲಿನೇಟೆಡ್ ವಿಲೇಜಸ್ ಎಂಬ

ಪದಕ್ಕೆ ಏನು ಅರ್ಥವಿವರಣೆಯನ್ನು ಕೊಟ್ಟಿದ್ದಾರೆಂದರೆ ಅದು ಹೀಗಿದೆ:

> "Alienated means transferred in so far as the rights of Government to payment of the rent or the land revenue are concerned."

So what is transferred to the Inamdar is the right to collect land revenue or rent and not the land itself.

2 P.M.

ಆದ್ದರಿಂದ ಇನಾಂದಾರರಿಗೆ ಪರಿಹಾರ ದ್ರವ್ಯ ಸಲ್ಲತಕ್ಕದ್ದು ಸೂಕ್ತ. ಆದರೆ ಈಗಿನ market valueಗೆ ಅವರು ಹಕ್ಕುದಾರರಲ್ಲವೆಂದು ಸರ್ಕಾರದವರ ಅಭಿಪ್ರಾಯ.

ಒಬ್ಬ ಸದಸ್ಯರು.—ಹಿಂದಿನ ಬಿಲ್ಲಿನಲ್ಲಿ ಏನಿತ್ತು?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿಯೂ ಕಂಪೆನ್ಸೇಷನ್ ಕೊಡಬೇಕೆಂದು ವಿಧಾಯಕವಾಗಿತ್ತು. ಇದರಲ್ಲಿ ಸ್ವಲ್ಪ ಅದು ವ್ಯತ್ಯಾಸವಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಏನು ವ್ಯತ್ಯಾಸ?

ಶ್ರೀ ಕಡಿದಾಳ್ ಮಂಜಪ್ಪ.—ಕಾಂಪೆನ್ಸೇಷನ್ ಮೊಬಲಗನ್ನು ನಿರ್ಧರ ಮಾಡುವುದರಲ್ಲಿ ಸ್ವಲ್ಪ ವ್ಯತ್ಯಾಸವಿದೆ. ವಿವರಗಳನ್ನು ಅನಂತರ ಹೇಳುತ್ತೇನೆ.

ಆಮೇಲೆ, compensationನನ್ನು ಯಾವರೀತಿ ನಿರ್ಧರಿಸಬೇಕೆಂಬುದಕ್ಕೆ 21ನೆಯ ಸೆಕ್ಷನ್ನಿನಲ್ಲಿ Basic value ಎಂದು ಹೇಳಿ, ಅದು ನಿರ್ಧರವಾದ ನಂತರ compensation ತೀರ್ಮಾನವಾಗುತ್ತದೆ. ಈ compensation ನನ್ನು ಹನ್ನೆರಡು ಕಂತುಗಳಲ್ಲಿ ಇನಾಂದಾರರಿಗೆ ಕೊಡುವುದಕ್ಕೆ ಅವಕಾಶವಿದೆ.

Compensation ಕೊಡುವುದನ್ನು ಡೆಪ್ಯುಟಿ ಕಮಿಷನರ್‌ರವರು ನಿರ್ಧರಿಸುತ್ತಾರೆ. ಈ ವಿಚಾರದಲ್ಲಿ ಕೆಲವು ರೂಲ್ಸ್‌ಗಳು ಆಗಬೇಕಾಗಿದೆ. ಡೆಪ್ಯುಟಿ ಕಮಿಷನರ ತೀರ್ಮಾನದ ಮೇಲೆ ಅಪೀಲು ಹೋಗುವುದಕ್ಕೂ ಅವಕಾಶವಿದೆ.

ಒಟ್ಟಿನಲ್ಲಿ ಈ ಮಸೂದೆ ಎಲ್ಲ ದೃಷ್ಟಿಯಿಂದಲೂ ಕೂಡ ತೃಪ್ತಿಕರವಾಗಿದೆಯೆಂದು ನಾನು ಭಾವಿಸುತ್ತೇನೆ. ಈ ಬಿಲ್ಲನ್ನು ತಯಾರುಮಾಡಬೇಕಾದರೆ ಗುಂಡಪ್ಪಗೌಡರ ಸಮಿತಿಯ ವರದಿಯನ್ನು ಗಮನದಲ್ಲಿಟ್ಟುಕೊಂಡು ಜೊತೆಗೆ ಭಾರತದ ಇತರ ಸಂಸ್ಥಾನಗಳಲ್ಲಿ ಜಾರಿಯಲ್ಲಿರತಕ್ಕ ಇಂಥ ಕಾನೂನುಗಳನ್ನೂ ಕೂಡ ಪರಿಶೀಲಿಸಿ, ಈ ಮಸೂದೆಯನ್ನು ತಯಾರಿಸಲಾಗಿದೆ. ಈ ಮಸೂದೆಯನ್ನು ಆದಷ್ಟು ಜಾಗ್ರತೆ ಕಾನೂನಾಗಿ ಮಾಡುವುದು ಅತ್ಯಾವಶ್ಯಕವೆಂದು ನಾನು ಅರಿಕೆ ಮಾಡಿಕೊಂಡು ಮಾನ್ಯ ಸದಸ್ಯರೆಲ್ಲರೂ ಈ ಮಸೂದೆಗೆ ಬೆಂಬಲಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Sri M. RAJASEKHARA MURTHY (Yelandur).—One information I should like to seek from the Hon'ble Minister. He has not pointed out the mode of payment of compensation, whether it is cash payment or payment through bond; if it is through bond, whether it is a negotiable instrument or non-negotiable.

Sri KADIDAL MANJAPPA.—It is clearly mentioned in the Bill itself:

> "The compensation payable under this Act may, in accordance with rules made in this behalf, be paid in one or more of the following modes, namely:—
>
> (i) in cash in full or in annual instalments not exceeding twelve . . . . ."

With interest we are paying.

Mr. SPEAKER.—Motion moved:

> "That the Mysore (Personal and Miscellaneous) Inams Abolition Bill be taken into consideration."

*ಶ್ರೀ ಸಿಂಗಾರಿಗೌಡ (ನಾಗಮಂಗಲ).—ಈ ಇನಾಂ ಮತ್ತು ಜೋಡಿಗ್ರಾಮಗಳನ್ನು ರದ್ದುಮಾಡುವ ಮಸೂದೆ, ಹಾಗೂ ಈ ವಿಷಯ ಅನೇಕ ವರ್ಷಗಳಿಂದ ನಮ್ಮ ಮುಂದಿದೆ. ಬಹಳ ಕಾಲ ತಡವಾದರೂ ಸರ್ಕಾರದವರು ಇಂಥ ಒಂದು ಮಸೂದೆಯನ್ನು ನಮ್ಮ ಮುಂದೆ ಇಟ್ಟಿದ್ದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ ನಾನಿದನ್ನು ಸ್ವಾಗತಿಸುತ್ತೇನೆ. ಈಗ ಒಂದು ವರ್ಷದ ಕೆಳಗೆ ಜೋಡಿ ಪದ್ಧತಿಯನ್ನೂ ಜಹಗೀರಿ ಪದ್ಧತಿಯನ್ನೂ ರದ್ದುಮಾಡುವ ಮಸೂದೆಯನ್ನು ಹಿಂದಿನ ಶಾಸನ ಸಭೆಯ ಮುಂದೆ ಆಗಿನ ಸರ್ಕಾರದವರು ಇಟ್ಟಿದ್ದರು. ಹಿಂದಿನ ಆ ಮಸೂದೆಯಲ್ಲಿ ಅಡಕವಾಗಿದ್ದಂಥ ಜಹಗೀರಿ ಪದ್ಧತಿ ಮತ್ತು ಮತಧರ್ಮಗಳಿಗೆ ಸಂಬಂಧಪಟ್ಟ ಇನಾಂತಿಗಳ ವಿಷಯ ಈ ಮಸೂದೆಯಲ್ಲಿ ಅಡಕವಾಗಿಲ್ಲ. ಇದನ್ನು ಯಾವ ಕಾರಣದಿಂದ ಬಿಟ್ಟರೆಂಬುದು ನನ್ನ ಅರಿವಿಗೆ ಬಂದಿಲ್ಲ. ಈ ಬಗ್ಗೆ ಅವರ ಉದ್ದೇಶ ವಿವರಣೆ ಅಷ್ಟು ಸಮರ್ಪಕವಾಗಿಲ್ಲ. ಅವುಗಳನ್ನು ಕೈಬಿಡಲು ಅಂಥ ಪ್ರಬಲವಾದ ಕಾರಣಗಳು ಯಾವುವೂ ಇಲ್ಲವೆಂದು ನಾನು ಹೇಳಬಯಸುತ್ತೇನೆ.

ಈ ಮಸೂದೆಯಲ್ಲಿ ಮೂರು ಅಂಶಗಳು ಮಾತ್ರ ಎದ್ದು ಕಾಣುತ್ತವೆ. ಅದು ರೈತರು ಯಾರು ಯಾರು ಯಾವ ಯಾವ ರೀತಿಗಳಲ್ಲಿ ಈ ಜಮೀನುಗಳಲ್ಲಿ ಒಂದು ಒಂದು ಹಕ್ಕನ್ನು ಹೊಂದುತ್ತಾರೆ. ಮತ್ತು ಇನಾಂ ಗ್ರಾಮ ಮತ್ತು ಜೋಡಿ ಗ್ರಾಮಗಳನ್ನು ಸರ್ಕಾರವು ತೆಗೆದುಕೊಳ್ಳುವ ಕಾಲದಲ್ಲಿ ಎಷ್ಟರಮಟ್ಟಿಗೆ ಆ ಇನಾಂದಾರರುಗಳಿಗೆ ಮತ್ತು ಜೋಡಿದಾರರುಗಳಿಗೆ ಪರಿಹಾರವನ್ನು ಕೊಡುತ್ತಾರೆ ಮತ್ತು ಪರಿಹಾರವನ್ನು ಕೊಡಬೇಕೆಂದಮೇಲೆ ಆ ಪರಿಹಾರವನ್ನು ಯಾವ ಮಾರ್ಗದಲ್ಲಿ ಮತ್ತು ಯಾವಯಾವ ರೀತಿಯಲ್ಲಿ ನಿರ್ಧರ ಮಾಡಬೇಕು ಎಂಬುದು. ಇವುಗಳನ್ನು ಬಿಟ್ಟರೆ ಬಾಕಿ ವಿಷಯಗಳಲ್ಲಿ ಈ ಮಸೂದೆ ಮೌನವಾಗಿದೆಯೆಂದು ಭಾವಿಸುತ್ತೇನೆ.

---

* Asterisk indicates that the speech has not been revised by the Member concerned.

(ಶ್ರೀ ಸಿಂಗಾರಿಗೌಡ.)

ಪ್ರಕೃತ, ಇಲ್ಲಿ ಅಡಕವಾಗಿರುವ ಕೆಲವು ವಿಷಯುಗಳನ್ನು ಪ್ರಸ್ತಾಪಿಸುವುದಾದರೆ, ಈ ಮಸೂದೆಯು 5ನೆಯ ವಿಧಿಯಲ್ಲಿ ಒಟ್ಟು ವಾರ್ಷಿಕ ವರಮಾನ ಯಾವ ರೀತಿ ನಿರ್ಧಾರವಾಗಬೇಕೆಂದು ಹೇಳಿದ್ದಾರೆ, ಅದರಲ್ಲಿ ಖಾಯಂ ಸಾಗುವಳಿದಾರರಿಗೆ ಯಾವರೀತಿ ಪರಿಹಾರವಾಗಬೇಕು, ಆಮೇಲೆ ಟೆನೆಂಟ್‌ಗೆ ಯಾವರೀತಿ ಪರಿಹಾರವಾಗಬೇಕೆಂಬುದನ್ನೂ ತಿಳಿಸಿದ್ದಾರೆ. ಇಲ್ಲಿ ಮಾರ್ಕೆಟ್ value ಎಂಬುದಕ್ಕೆ ಒಂದು ಉದಾಹರಣೆ ಕೊಟ್ಟು, ಅದರ ಶೇಕಡ 50ರಷ್ಟು ಬೆಲೆಯನ್ನು ಕೊಟ್ಟು, ಅವನು ಜಮೀನಿನ ಮೇಲೆ ಒಡೆತನ ಪಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಆ ಜಮೀನು ಅವನ ವಶಕ್ಕೆ ಬಂದಮೇಲೆ ಅವನು ಎಷ್ಟು ಶ್ರಮಪಟ್ಟು ಆಬಾದಿಗೆ ತಂದಿದ್ದಾನೆ, ಅವನ ವ್ಯಯದಿಂದ, ಅವನ ಶ್ರಮದಿಂದ ವಿಷ್ಟರಮಟ್ಟಿಗೆ ಆ ಜಮೀನಿನ ಬೆಲೆ ಏರಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಆ ಜಮೀನಿನ ಒಡೆತನವನ್ನು ಅವನಿಗೆ ಕೊಡಬೇಕೇ ಬೇಡವೇ ಎಂಬುದನ್ನೂ ಹೇಳಬೇಕಾಗಿತ್ತು. ಮಾನ್ಯ ಸಚಿವರು ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆಂದು ಹೇಳಿದ್ದಾರೆ; ಹೋದಾಗ ಮಾರ್ಕೆಟ್ value ಏನು ಎಂಬುದನ್ನು ನಿರ್ಧರಿಸಿದ್ದರಮೇಲೆ ಈ ರೀತಿ 50% ಹಣ ತೆಗೆದುಕೊಂಡು ಒಡೆತನ ಕಲ್ಪಿಸುವುದಕ್ಕಿಂತ ಒಂದು nominal price ತೆಗೆದುಕೊಂಡು ಒಡೆತನ ಕೊಡುವುದು ಸೂಕ್ತವೆಂದು ಹೇಳುತ್ತೇನೆ.

ಎರಡನೆಯದಾಗಿ, ವಾರ್ಷಿಕ ವರಮಾನವನ್ನು ಇನಾಂದಾರ್ ಮತ್ತು ಜೋಡಿದಾರರುಗಳಿಗೆ ಯಾವ ರೀತಿ ಲೆಕ್ಕಾಚಾರ ಹಾಕಬೇಕೆಂದು ಕೆಲವು ಅಂಶಗಳನ್ನು 18ನೆಯ ಸೆಕ್ಷನ್ನಿನಲ್ಲಿ ನಮ್ಮ ಮುಂದಿಟ್ಟಿದ್ದಾರೆ. ಅಲ್ಲಿ ಸೆಕ್ಷನ್ 1 (a) ಪ್ರಕಾರ ಏನು ಕಂದಾಯ ಠರಾವು ಮಾಡಿದ್ದಾರೆ ಆ ಒಟ್ಟು ಕಂದಾಯವನ್ನು ನಿರ್ಧರಿಸಿ ಅದನ್ನು gross income ಎಂದು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈಗ ಸಾಮಾನ್ಯವಾಗಿ assessed waste lands ನಿಂದ ಜೋಡಿದಾರರುಗಳಿಗೆ ಏನೂ ಉತ್ಪತ್ತಿ ಸಲ್ಲುತ್ತಿಲ್ಲ. ಹಾಗೆ ಉತ್ಪತ್ತಿ ಸಲ್ಲದೇಹೋದರೂ ಅವರಿಗೆ ಇದನ್ನೂ ಗಣನೆಗೆ ತೆಗೆದುಕೊಂಡು ಪರಿಹಾರ ಕೊಡುವುದು ನ್ಯಾಯವೇ, ಸೂಕ್ತವೇ ಎಂಬುದನ್ನೂ ಕೂಡ ನೋಡಬೇಕೆಂದು ಹೇಳುತ್ತೇನೆ. ಇದನ್ನು ಗಣನೆಗೆ ತೆಗೆದುಕೊಳ್ಳಕೂಡದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ 18(b) ಸೆಕ್ಷನ್ನಲ್ಲಿ ಸೆಟಲ್‌ಮೆಂಟ್ ಆಗದಿರುವ ಗ್ರಾಮಗಳಲ್ಲಿ 1 1/3 ರಷ್ಟನ್ನು ಲೆಕ್ಕಾಚಾರ ಹಾಕಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅಲ್ಲಿಗೆ ಯಾವ ಮನುಷ್ಯನು ರೈತರ ಹಿತದೃಷ್ಟಿಯಿಂದ ಸರ್ವೆ ಸೆಟಲ್‌ಮೆಂಟ್ ಮಾಡಿಸಿದ್ದನೋ ಅವನಿಗೆ ಕಡಮೆ ಪರಿಹಾರ ಕೊಡುವುದು, ಯಾವನು ರೈತರಿಗೆ ಏನೂ ಅನುಕೂಲ ಕಲ್ಪಿಸಿಕೊಡದೆ ಕಿರುಕುಳ ಕೊಡುತ್ತಿದ್ದನೋ ಅಂಥವನಿಗೆ ಹೆಚ್ಚಿಗೆ ಕೊಡುವುದು—ಎಂದು ಮಾಡಿರುವುದು ಖಂಡಿತ ಸಾಧುವಲ್ಲವೆಂದು ಹೇಳಬೇಕಾಗಿದೆ. ಅವನಿಗೆ ಕೊಡತಕ್ಕದ್ದನ್ನೂ 18 (a) (i) ಪ್ರಕಾರವೇ ಪರಿಗಣಿಸಬೇಕೆಂದು ನಾನು ಹೇಳುತ್ತೇನೆ.

ಮೂರನೆಯದಾಗಿ, ಜೋಡಿ ಮತ್ತು ವಾರ್ಷಿಕ ಮೊತ್ತವನ್ನು ನಿರ್ಧರಿಸುವಾಗ ಯಾವ ದೊಡ್ಡನ್ನು ಅದರಲ್ಲಿ ಹಿಡಿಯಬೇಕೆಂದು ಹೇಳಿದ್ದೀರೊ ಇದರಲ್ಲಿ ನ್ಯಾಯವಾಗಿ ಸರ್ವೆ ಮತ್ತು ಸೆಟಲ್‌ಮೆಂಟ್ ಚಾರ್ಜುಗಳಿಗಾಗಿ 103ನೆಯ ಸೆಕ್ಷನ್ ಪ್ರಕಾರ ಜೋಡಿ ಮತ್ತು ಇನಾಂದಾರರುಗಳು ಸರ್ಕಾರಕ್ಕೆ ಹಣ ಕಟ್ಟಬೇಕಾಗಿರುತ್ತದೆಯೋ ಅದನ್ನು ಕೂಡ ಮುರಿದುಕೊಳ್ಳಬೇಕೆಂದು ಹೇಳುವುದು ಸಾಧುವಾಗಿದೆ.

ಆಮೇಲೆ 19 (c) ನಲ್ಲಿ ಗ್ರಾಮ ನೌಕರರುಗಳಿಗೆ ಏನು ಪರಿಹಾರ ಕೊಡಬೇಕೆಂದಿದೆಯೋ ಒಂದುವೇಳೆ ಜೋಡಿದಾರರುಗಳೇ ಈಗ್ಗೆ ಆ ಕೆಲಸವನ್ನು ನೋಡಿಕೊಳ್ಳುತ್ತಿದ್ದರೂ, ಇನ್ನುಮುಂದೆ ಆ ಗ್ರಾಮಗಳಲ್ಲಿ ಗ್ರಾಮ ನೌಕರರುಗಳನ್ನು ಇಡಬೇಕಾಗುವುದರಿಂದ ಆ ಬಗ್ಗೆಯೂ ಸ್ವಲ್ಪ ಹಣವನ್ನು ಮುರಿದುಕೊಳ್ಳುವುದು ಅವಶ್ಯಕವೆಂದು ಹೇಳುತ್ತೇನೆ.

ಇನ್ನು ಇನಾಂದಾರರುಗಳಿಗೆ ಮತ್ತು ಜೋಡಿದಾರರುಗಳಿಗೆ ಪರಿಹಾರ ಎಷ್ಟರಮಟ್ಟಿಗೆ ಕೊಡಬೇಕೆಂಬುದರ ವಿಷಯ. 20ನೆಯ ಸೆಕ್ಷನ್ ಪ್ರಕಾರ ನಿಗದಿ ಮಾಡಿರುವ ಮೊಬಲಗು ಬಹಳ ಹೆಚ್ಚು ಎಂದು ನಾನು ಹೇಳುತ್ತೇನೆ. ಸಾವಿರ ರೂಪಾಯಿಗಳವರೆಗೆ ಅಲ್ಲಿಯ ವಾರ್ಷಿಕ ವರಮಾನವಿರುವವರಿಗೆ ಅದರ 20 ರಷ್ಟು ಕೊಡಬೇಕೆಂದು ಹೇಳಿದ್ದೀರಿ. ಯಾರು ಜೋಡಿದಾರರು ಅಥವಾ ಇನಾಂದಾರರುಗಳಾಗಿದ್ದರೋ ಅವರುಗಳಿಗೆ ಹಿಂದೆ ಆ ಗ್ರಾಮಗಳು ಯಾವರೀತಿ ವಶಕ್ಕೆ ಬಂತು ಎಂಬುದೆಲ್ಲಾ ಕಳೆದ ಅಧಿವೇಶನದಲ್ಲಿ ವಿಪುಲವಾಗಿ ಚರ್ಚೆಯಾಗಿರುವುದರಿಂದ ನಾನೀಗ ಮತ್ತೆ ಹೇಳಬೇಕಾಗಿಲ್ಲ. ಈ ಇನಾಂದಾರರುಗಳು ಸಾಮಾನ್ಯವಾಗಿ ಅನುಕೂಲಸ್ಥಿತಿಯಲ್ಲಿದ್ದಾರೆ. ದೇಶದ ಹಿತದೃಷ್ಟಿಯಿಂದ ಅವರುಗಳೂ ಹೆಚ್ಚು ಪರಿಹಾರವನ್ನು ಕೇಳುವುದು ಸೂಕ್ತವಲ್ಲ. ಕಾಶ್ಮೀರ ಮುಂತಾದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಆಗಿರುವುದನ್ನು ನೋಡಿದರೆ, ಇಷ್ಟು ಹೆಚ್ಚಿಗೆ ಪರಿಹಾರವನ್ನು ಕೊಟ್ಟು ಹಳ್ಳಿಗಳನ್ನು ತೆಗೆದುಕೊಳ್ಳಬೇಕೆಂದು ಇಲ್ಲಿ ಹೇಳಿರುವುದು ಅಷ್ಟು ಸೂಕ್ತವಲ್ಲ. ಆದ್ದರಿಂದ ಸಾವಿರ ರೂಪಾಯಿಗಳವರೆಗೆ ವರಮಾನವಿದ್ದರೆ ಅದರ ಹತ್ತರಷ್ಟು, 3,000 ರೂಪಾಯಿಗಳವರೆಗಿದ್ದರೆ ಅದರ ಏಳರಷ್ಟು, 3,000 ರೂಪಾಯಿಗಳಿಗೆ ಮೇಲ್ಪಟ್ಟಿದ್ದರೆ ಅದರ ಐದರಷ್ಟು ಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನೊಂದು ವಿಷಯವಿದೆ, ಈ ಮಸೂದೆಯ ಸಂಬಂಧದಲ್ಲಿ ಅದನ್ನು ಚರ್ಚೆ ಮಾಡುವುದು ಪ್ರಕೃತವೋ ಅಪ್ರಕೃತವೋ ಗೊತ್ತಿಲ್ಲ. ಸರ್ಕಾರದವರು ಈ ಜೋಡಿ, ಇನಾಂ ಗ್ರಾಮಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡ ಮೇಲೆ ಅವರು ಒಂದು ಕರ್ತವ್ಯ ನೆರವೇರಿಸಿಕೊಡಬೇಕಾದುದಿದೆ. ಏನೆಂದರೆ, ಜೋಡಿಗ್ರಾಮಗಳಲ್ಲಿ ನೀರಾವರಿ ಕಾಮಗಾರಿಗಳನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕು. ಏಕೆಂದರೆ ಇದುವರೆಗೂ ಅಲ್ಲಿ ಕೆರೆ ಕಟ್ಟಿಸಬೇಕಾದರೆ ಇನಾಂದಾರರುಗಳು ತಮ್ಮ ಭಾಗವಾಗಿ ಕೊಡಬೇಕಾದ ಹಣವನ್ನು ಕೊಟ್ಟು ಸೌಕರ್ಯವನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನಪಟ್ಟಿಲ್ಲ. ಆದ್ದರಿಂದ ಈಗ ಈ ಗ್ರಾಮಗಳು ಸರ್ಕಾರಕ್ಕೆ ಬಂದಮೇಲೆ ಆ ರೈತರಿಗೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕೆ ನೀರಾವರಿ ಯೋಜನೆಗಳನ್ನು ಕೈಕೊಂಡು ಸಹಾಯಮಾಡಬೇಕೆಂದು ಹೇಳುತ್ತೇನೆ.

ಒಟ್ಟಿನಲ್ಲಿ ಈ ಮಸೂದೆ ಅಷ್ಟು ಸಮರ್ಪಕವಾಗಿದೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕಾರಣ, ಇಲ್ಲಿ ಪ್ರಧಾನವಾಗಿ ಜೋಡಿಗ್ರಾಮಗಳನ್ನು ತಮ್ಮ ಅಡಳಿತಕ್ಕೆ ತೆಗೆದುಕೊಳ್ಳುವ ಕಾಲದಲ್ಲಿ ಜೋಡಿದಾರರುಗಳ ಹಿತದೃಷ್ಟಿಯಿಂದಲೇ ಹೋಗಿದ್ದಾರೆಯೇ ಹೊರತು ಅಲ್ಲಿರುವ ಖಾಯಂ ಟೆನೆಂಟುಗಳ ದೃಷ್ಟಿಯನ್ನಿಟ್ಟುಕೊಂಡು ಮುಂದುವರಿದಿಲ್ಲವೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಅಧ್ಯಕ್ಷರೇ, 1948ನೆಯ ಇಸವಿಯಲ್ಲಿ ಕಾಂಗ್ರೆಸ್ ಸರ್ಕಾರ ಏರ್ಪಟ್ಟರೂ ಕೂಡ ಈಗಲಾದರೂ ನಮ್ಮ ಮುಂದೆ ಈ ಮಸೂದೆ ಬಂದದ್ದಕ್ಕಾಗಿ ನಾನು ಸಂತೋಷಪಡುತ್ತೇನೆ. ಆದರೆ ಈ ಮಸೂದೆಯಲ್ಲಿ ಅನೇಕ ನ್ಯೂನಾತಿರೇಕಗಳಿವೆ. ಮೊದಲನೆಯದಾಗಿ ಇದು ಭೂಸುಧಾರಣೆಯಲ್ಲಿ ಒಂದು ಹೆಜ್ಜೆಯಾದರೂ ಕೂಡ, ಮುಂದೆ ಹೋಗಿಲ್ಲ. ಭೂಸುಧಾರಣೆಯಲ್ಲಿ ಯಾವ ಒಂದು ಗುರಿಯಿರಬೇಕೋ ಆ ಗುರಿ ಈ ಭೂಸುಧಾರಣಾ ಕಾನೂನಿನಲ್ಲಿ ಇಲ್ಲವೆಂದು ಹೇಳಬೇಕಾಗಿದೆ. ಇದರಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಇನಾಂತಿಗಳು ಮತ್ತು ಸರ್ವಿಸ್ ಇನಾಂತಿಗಳನ್ನು ಪೂರ್ಣವಾಗಿ ಕೈಬಿಟ್ಟಿದ್ದಾರೆ. ದೇಶದಲ್ಲಿ ಇಂದು ಹೆಚ್ಚಿಗೆ ಇರತಕ್ಕಂಥಾದ್ದೇ ಈ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಇನಾಂತಿಗಳು ಮತ್ತು ಸರ್ವಿಸ್ ಇನಾಂತಿಗಳು. ಭೂಸುಧಾರಣೆಯ ಮುಖ್ಯ ಉದ್ದೇಶವೇನೆಂದರೆ, ಭೂಮಿಯಲ್ಲಿ ಎಷ್ಟು ಉತ್ಪತ್ತಿ ಬರಬೇಕೋ ಅಷ್ಟೂ ಉತ್ಪತ್ತಿಯನ್ನು ಪಡೆಯುವುದಕ್ಕೆ ನಾವು ಪ್ರಯತ್ನಮಾಡಬೇಕು, ಇದಕ್ಕಾಗಿ ಯಾರು ಭೂಮಿಯ ಮೇಲೆ ದುಡಿಯುತ್ತಾನೋ ಆ ರೈತನಿಗೆ ಸರಿಯಾದ ಪ್ರತಿಫಲ ಬರುವಂತೆ ಮಾಡಬೇಕು ಎಂಬುದು. ಈ ದೃಷ್ಟಿಯಿಂದ ಈ ಧಾರ್ಮಿಕ ಇನಾಂತಿಗಳೂ, ಸರ್ವಿಸ್ ಇನಾಂತಿಗಳೂ ಹೋಗಬೇಕೆಂದು ಹೇಳುತ್ತಿರುವುದು. ಆದರೆ ಧರ್ಮಸಂಸ್ಥೆಗಳ ಇನಾಂತಿಗಳನ್ನೂ ಸರ್ವಿಸ್ ಇನಾಂತಿಗಳನ್ನೂ ವಜಾಮಾಡದೆ ಈ ಬಿಲ್ಲನ್ನು ತಂದಿದ್ದೀರಿ. ಆದುದರಿಂದ ಅದು ನಿಮ್ಮ ಮೊದಲನ ಗುರಿಯನ್ನು ಮುಟ್ಟದೆ ಅರ್ಧಂಬರ್ಧದಲ್ಲಿ ಬಿಟ್ಟು, ದೊಡ್ಡ ಲೋಪವಾದಂತಾಗಿದೆ. ಈಗ ನೀವು ಈ ಧಾರ್ಮಿಕ ಸಂಸ್ಥೆಗಳ ಇನಾಂತಿಗಳಿಂದ ಮತ್ತು ಸರ್ವಿಸ್ ಇನಾಂತಿಗಳಿಂದ ಬರುವ ಉತ್ಪತ್ತಿಯನ್ನು ಪಕ್ಕದ ಜಮೀನುಗಳಿಂದ ಬರುವ ಉತ್ಪತ್ತಿ ಗೆ ಹೋಲಿಸಿದರೆ ಅವು ನಿಜವಾಗಿಯೂ ಬಹಳ ಹೀನಸ್ಥಿತಿಯಲ್ಲಿವೆ ಎಂಬುದು ಗೋಚರವಾಗುವುದು. ಇದಕ್ಕೆ ಕಾರಣವೇನೆಂಬುದು ಸ್ಪಷ್ಟವಾಗಿದೆ. ಸಾಮಾನ್ಯವಾಗಿ ಧರ್ಮಸಂಸ್ಥೆಗೆ ಕೊಟ್ಟಿರುವ ಇನಾಂ ಆಗಲಿ ಅಥವಾ ಸರ್ವಿಸ್‌ಗಾಗಿ ಕೊಟ್ಟಿರುವ ಇನಾಂ ಎಂದರೆ ಪಟೇಲ ಶಾನುಭೋಗರಿಗೆ ಕೊಟ್ಟಿರುವ ಇನಾಂ, ಆಗಲಿ ಅದರಿಂದ ಇನಾಂದಾರರು ಬಹಳ ಹೆಚ್ಚಾಗಿ ಪ್ರತಿಫಲವನ್ನು ಪಡೆದುಕೊಳ್ಳುತ್ತಾರೆಯೇ ವಿನಾ, ಯಾರು ದುಡಿಯುತ್ತಾರೋ ಅವರಿಗೆ ಹೆಚ್ಚು ಭಾಗದ ಫಲ ಹೋಗುತ್ತಿಲ್ಲ. ಆದಕಾರಣ ಆ ಜಮೀನುಗಳನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಂಡಿರುವುದು ಸಾಧ್ಯವಾಗಿಲ್ಲ. ಆದುದರಿಂದ ಇನಾಂ ರದ್ದು ಮಾಡುತ್ತೇವೆ ಎನ್ನುವುದಾದರೆ ಪ್ರತಿಯೊಂದು ಇನಾಮತಿಯನ್ನೂ ಪೂರ್ತಿಯಾಗಿ ರದ್ದುಮಾಡಬೇಕು. ಅರ್ಧಂಬರ್ಧ ಮಾಡುವುದರಿಂದ, ಏನು ಫಲ ಪಡೆಯಬೇಕೆಂಬ ಉದ್ದೇಶದಿಂದ ಮಾಡಿದ್ದೇವೋ ಅದು ಸಾಧನೆಯಾಗುವುದಿಲ್ಲ.

ಎರಡನೆಯದಾಗಿ, ಖದೀಂಟೆನೆಂಟ್, ಪರ್ಮನೆಂಟ್ ಟೆನೆಂಟ್ ಮತ್ತು ಕ್ವಾಸಿಪರ್ಮನೆಂಟ್ ಟೆನೆಂಟ್ ಎಂದು ಮೂರು ಭಾಗವಾಗಿ ವಿಂಗಡಿಸಲಾಗಿದೆ. ಖದೀಂ ಟೆನೆಂಟಿಗೆ ತಕ್ಕ ದಾಖಲೆಗಳಿರುತ್ತವೆ. ಆದರೆ ಇತರ ಎರಡು ಗುಂಪಿನ ರೈತರಿಗೆ ಸಾಧಾರಣವಾಗಿ ಏನೂ ದಾಖಲೆಗಳಿರುವುದಿಲ್ಲ. ಅವರು ತಕ್ಕ ದಾಖಲೆಗಳನ್ನೂ ಆಧಾರಗಳನ್ನೂ ಕೊಡಬೇಕಾಗುತ್ತದೆ. ಇದನ್ನು ರೈತರು ಕೊಡಲಾರರೆಂದು ಹೇಳಬೇಕಾಗಿದೆ. ಅದರಲ್ಲಿಯೂ ಇನಾಂದಾದರೂ ಜೋಡೀದಾರರೂ ತಿಳುವಳಿಕೆಯುಳ್ಳವರೂ ಬುದ್ಧಿವಂತರೂ ಆಗಿರುತ್ತಾರೆ; ಅವರ ಆಶ್ರಯದಲ್ಲಿರುವ ಪರ್ಮನೆಂಟ್ ಟೆನೆಂಟುಗಳೂ, ಕ್ವಾಸಿ ಪರ್ಮನೆಂಟ್ ಟೆನೆಂಟುಗಳೂ, ಹಿಂದುಳಿದ ಜನರೂ, ತಿಳುವಳಿಕೆಯಿಲ್ಲದವರೂ ಆಗಿರುತ್ತಾರೆ. ಹೀಗಿರುವಾಗ ಇವರು ರುಜುವಾತು ಕೊಡುವುದೇ ಕಷ್ಟವಾಗುತ್ತದೆ. ಆದುದರಿಂದ ಇದನ್ನು ಪರಿಹಾರಮಾಡುವುದಕ್ಕೆ ಇನ್ನಾವುದಾದರೂ ರೀತಿ ಅವಕಾಶ ಮಾಡಿಕೊಡಬೇಕು.

ಮೂರನೆಯದಾಗಿ, ಜೋಡಿದಾರರಿಗೂ ಇನಾಮ್‌ದಾರರಿಗೂ ಹೆಚ್ಚು ಪರಿಹಾರಕೊಡಬೇಕೆಂದು ಇದರಲ್ಲಿ ನಮೂದು ಮಾಡಿದ್ದಾರೆ. ಅಲ್ಲದೆ, ಇದೇ ಸಂದರ್ಭದಲ್ಲಿ ಪರ್ಮನೆಂಟ್ ಟೆನೆಂಟುಗಳು ಮತ್ತು ಕ್ವಾಸಿ ಪರ್ಮನೆಂಟ್ ಟೆನೆಂಟುಗಳು ತಮ್ಮ ಅಧೀನದಲ್ಲಿರುವ ಜಮೀನುಗಳಿಗೆ ಏನು ಮೊತ್ತವನ್ನು ಕೊಡಬೇಕೆಂದು ನಿರ್ಧಾರ ಮಾಡುವಾಗ ಅವುಗಳ ಮಾರ್ಕೆಟ್ ಬೆಲೆಯಲ್ಲಿ ಅರ್ಧ ಮತ್ತು ಮುಕ್ಕಾಲು ಭಾಗದಷ್ಟು ಕೊಡಬೇಕೆಂದು ವಿಧಾಯಕವಾಡಿದ್ದಾರೆ. ಆದರೆ ಮಾರ್ಕೆಟ್ ಬೆಲೆ ಯಾವ ರೀತಿ ನಿಗದಿ ಮಾಡತ್ತಾರೆಂಬುದನ್ನು ನಿರ್ಧರಿಸಿಲ್ಲ. ಖದೀಮ್ ಟೆನೆಂಟ್‌ಗಳಿಗೆ ಯಾವ ರೀತಿ ನಿರ್ಧಾರ ಮಾಡಿದ್ದಾರೋ ಅದೇ ರೀತಿ ಇವರಿಗೂ ಇವರೇನು ಕೊಡಬೇಕೆಂಬುದನ್ನು ಖಚಿತವಾಗಿ ನಿರ್ಧರ ಮಾಡಬೇಕಾಗಿತ್ತು. ಈಗ ಮುಕ್ಕಾಲು ಭಾಗ ಇನಾಂ ಗ್ರಾಮಗಳಲ್ಲಿ ಸರ್ವೆಸೆಟ್ಲ್‌ಮೆಂಟ್ ಆಗಿಲ್ಲ. ಪಕ್ಕದ ಜಮೀನುಗಳಿಗೆ ಯಾವ ದರದಲ್ಲಿ ಕಂದಾಯ ವಿಧಿಸಿದ್ದರೆ ಅದೇ ರೀತಿ ಇಡಬೇಕೆಂದು ವಿಧಾಯಕ ಮಾಡಿದ್ದಾರೆ. ಕೋಲಾರ ಜಿಲ್ಲೆಯ ಉದಾಹರಣೆಯನ್ನು ತೆಗೆದುಕೊಂಡರೆ, ಭೂಸುಧಾರಣಾ ಸಮಿತಿಯು ವರದಿಯ ಮೇಲೆ ಈ ಮಸೂದೆಯನ್ನು ಮಾಡಿದ್ದಾರೆ; ಆ ಸಮಿತಿಯವರು ಕೋಲಾರ ಜಿಲ್ಲೆಯಲ್ಲಿ ಬಹಳ ಹೆಚ್ಚು ಕಂದಾಯ ಹಾಕಿದ್ದಾರೆಂದು ಅಭಿಪ್ರಾಯಪಟ್ಟಿದ್ದಾರೆ. ಹೀಗಿರುವಾಗ ಇನಾಂ ಗ್ರಾಮಗಳಲ್ಲಿ ಸರ್ವೆಸೆಟ್ಲ್‌ಮೆಂಟ್ ಆಗದೇಯಿರುವಾಗ, ಈ ಜಮೀನುಗಳ ಕಂದಾಯ ನಿರ್ಧರಿಸುವಾಗ ಹೆಚ್ಚು ಕಂದಾಯ ವಿಧಿಸಿದರೆ, ಆಗ ಜೋಡಿ ಮತ್ತು ಇನಾಂದಾರರಿಗೆ ಹೆಚ್ಚು ಪರಿಹಾರ ದ್ರವ್ಯಕೊಡಬೇಕಾಗುತ್ತದೆ. ಅಲ್ಲದೆ ಜಾಸ್ತಿ ಮಾರ್ಕೆಟ್ ಬೆಲೆಯನ್ನೂ ಹಾಕಿ ಪರ್ಮನೆಂಟ್ ಮತ್ತು ಕ್ವಾಸಿ ಪರ್ಮನೆಂಟ್ ಟೆನೆಂಟ್‌ಗಳಿಂದ ವಸೂಲು ಮಾಡಬೇಕಾಗುತ್ತದೆ. ಆದುದರಿಂದ ಕೋಲಾರ ಜಿಲ್ಲೆಗಾದರೂ ವಿನಾಯಿತಿಕೊಡಬೇಕೆಂದು ಸೂಚಿಸುತ್ತೇನೆ.

ಮತ್ತೊಂದು ವಿಷಯವೇನೆಂದರೆ, ಪರ್ಮನೆಂಟ್ ಟೆನೆಂಟ್‌ಗಳೂ ಮತ್ತು ಕ್ವಾಸಿ ಪರ್ಮನೆಂಟ್‌ಗಳೂ ಸರ್ಕಾರದವರು ಅವರ ಜಮೀನಿಗೆ ಏನು ಮಾರ್ಕೆಟ್ ಬೆಲೆಯನ್ನು ನಿಗದಿ ಮಾಡುತ್ತಾರೋ ಅದನ್ನು ನಿಗದಿ ಮಾಡುವ ಕಂತುಗಳಲ್ಲಿ ಸರ್ಕಾರಕ್ಕೆ ಪಾವತಿಮಾಡಬೇಕಾಗುತ್ತದೆ. ಒಂದುವೇಳೆ ಹಾಗೆ ಅವರು ನಿಗದಿ ಮಾಡಿದ ಕಂತುಗಳಲ್ಲಿ ಪಾವತಿಮಾಡದಿದ್ದಲ್ಲಿ ಆ ಜಮೀನನ್ನು ವಶಪಡಿಸಿಕೊಳ್ಳುವುದಕ್ಕೆ ಈ ಮಸೂದೆಯಲ್ಲಿ ಅವಕಾಶಮಾಡಿದ್ದಾರೆ. ಹೀಗೆ ಮಾಡುವಾಗ ಈ ಟೆನೆಂಟುಗಳ ಸ್ಥಿತಿಯನ್ನು ಗಮನಿಸಬೇಕು. ಇವರು ಕೇವಲ ಬಡವರು. ಜೋಡಿ ಇನಾಮ್ ಹಳ್ಳಿಗಳಲ್ಲಿ ಇವರು ಸಣ್ಣ ಸಣ್ಣ ಗುಡಿಸಲುಗಳಲ್ಲಿ ವಾಸಮಾಡಿಕೊಂಡು ಅಲ್ಲೇ ದನಗಳನ್ನೂ ಕಟ್ಟಿಕೊಂಡು ಕಷ್ಟದಲ್ಲಿರುತ್ತಾರೆ. ಇಂಥವರು ಮಾರ್ಕೆಟ್ ಬೆಲೆಯನ್ನು ಗೊತ್ತು ಮಾಡಿದ ತಕ್ಷಣವೇ ಹಣವನ್ನು ಕೆಲವೇ ಖಿಸ್ತುಗಳ ಕೊಡಬೇಕೆಂದರೂ ಅವರು ಕೊಡುವುದಕ್ಕೆ ಸಾಧ್ಯವೆ ಎಂಬುದನ್ನು ಯೋಚನೆ ಮಾಡಬೇಕು. ಈ ರೀತಿ ಮಾಡಿರುವುದರಿಂದ ಒಂದು ಕೈಯ್ಯಲ್ಲಿ ಅವರಿಗೆ ಕೊಟ್ಟು

(ಶ್ರೀ ಜಿ. ಪಾಪಣ್ಣ.)

ಇನ್ನೊಂದು ಕೈಯ್ಯಲ್ಲಿ ಕಿತ್ತುಕೊಂಡಂತಾಗುತ್ತದೆ. ಈ ಹೊತ್ತು ಅವರು ಸಾಲ ಸೋಲ ಮಾಡಿ ತೀರಿಸಬೇಕೆಂದರೂ ಅವರಿಗೆ ಚೈತನ್ಯವಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಈ ರೀತಿ ರೈತನಿಗೆ ಜಮೀನಿನ ಮೇಲಿನ ಹಕ್ಕನ್ನು ಉಳಿಸಿಕೊಡುವಾಗ ಅವನು ಮುಂದೆ ಆ ಜಮೀನನ್ನು ಉಳಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಈ ಕಾರಣಗಳಿಂದ ಜೋಡಿದಾರರಿಗೆ ಕೊಡುವ ಪರಿಹಾರವನ್ನೂ, ರೈತರು ಕೊಡಬೇಕಾದ ಜಮೀನಿನ ಮಾರ್ಕೆಟ್ ಬೆಲೆಯನ್ನೂ ಕಡಮೆಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ಈ ಇನಾಂ ರದ್ದಿಯಾತಿ ಮಸೂದೆ ಈಗಾಗಲೆ 1948ನೆಯ ಇಸವಿಯಿಂದಲೂ ಪರಿಗಣನೆಯಲ್ಲಿದೆ. ಹೀಗಿದ್ದು ಹಿಂದಿನ ವಿಧಾನ ಸಭೆಯಲ್ಲೇ ಇದು ಅಂಗೀಕಾರವಾಗಬೇಕಾಗಿತ್ತು. ಆದರೆ ಒಂದೇ ಒಂದು ಕಾರಣಕ್ಕಾಗಿ, ಎಂದರೆ ಶೃಂಗೇರಿಯನ್ನು ಇನಾಂ ಬಿಲ್ಲಿಗೆ ಸೇರಿಸಬೇಕೆ ಅಥವಾ ಬೇಡವೆ ಎನ್ನುವ ವಿಷಯದಲ್ಲಿ ವಾರಗಟ್ಟಲೆ ಚರ್ಚೆಯಾಗಿ, ಅದನ್ನು ಇದ್ದಕ್ಕಿದ್ದಹಾಗೆ ಕೈಬಿಟ್ಟು ಈ ಹೊತ್ತಿನ ದಿವಸ ಈರೂಪದಲ್ಲಿ ಈ ಮಸೂದೆ ನಮ್ಮ ಕೈಗೆ ಬಂದಿದೆ. ಆದರೂ ಈ ಹೊತ್ತು ಅಂದಿಗಿಂತ ಒಂದು ಹೆಜ್ಜೆ ಹಿಂದೆಹೋಗಿದೆ ಎಂದು ಹೇಳಬೇಕಾಗಿದೆ. ನಮ್ಮ ಮಾನ್ಯ ಮಂತ್ರಿಗಳೇ ಈ ಮಸೂದೆಯನ್ನು ನಮ್ಮ ಮುಂದೆ ಮಂಡಿಸುವಾಗ ಇದರಲ್ಲಿ ಅನೇಕ ಲೋಪ ದೋಷಗಳಿವೆಯೆಂದು ಒಪ್ಪಿದ್ದಾರೆ.........

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಅಲ್ಲ, ಕೆಲವು ಎಂದು ಹೇಳಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಂತೂ ಈ ಮಸೂದೆಯಲ್ಲಿ Religious and Service Inams ಕೈಬಿಟ್ಟಿದ್ದೇವೆಂದು ಹೇಳಿದ್ದಾರೆ. ಶ್ರೀ ಗಳಾದ ಸಿಂಗರಿಗೌಡರೂ ಪಾಪಣ್ಣನವರೂ ಈ ವಿಷಯ ಎಷ್ಟು ಪ್ರಾಮುಖ್ಯವಾದುದು ಎಂಬುದನ್ನು ಚೆನ್ನಾಗಿ ತಿಳಿಸಿದ್ದಾರೆ. ಇದರಲ್ಲಿ ಒಂದು ಮುಖ್ಯವಾದ ಅಂಶವೇನೆಂದರೆ, ಯಾವ ಜಮೀನುಗಳನ್ನು ಸರ್ಕಾರ ಪಡೆಯಬೇಕಾಗಿದೆಯೋ ಆ ಜಮೀನುಗಳ ಬಹುಭಾಗ ಕೈಬಿಟ್ಟು ಹೋಗಿದೆ. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆಯೆಂದು ಹೇಳಿದ್ದಾರೆ. ಆದರೂ ಇದರಲ್ಲಿರುವ ಲೋಪದೋಷಗಳೇನೆಂಬ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ.

ಮೊದಲು 1946ನೆಯ ಇಸವಿಯಿಂದೀಚೆಗೆ 1953ನೆಯ ಇಸವಿಯವರೆಗೆ ನಮ್ಮ ಭಾರತದಲ್ಲಿ ಈ ಜಮೀನು ಸುಧಾರಣೆ ಎಷ್ಟುಮಟ್ಟಿಗೆ ನಡೆಯುತ್ತಿದೆ ಎಂಬುದನ್ನು ಯೋಚನೆಮಾಡಿ ಅನಂತರ ಈ ಮಸೂದೆಯನ್ನು ಪರಿಶೀಲಿಸಬೇಕು. ಆಚಾರ್ಯವಿನೋಭಾವೆಯವರ ಭೂದಾನಯಜ್ಞ ಎಷ್ಟುಮಟ್ಟಿಗೆ ಫಲಕಾರಿಯಾಗಿದೆ, ಫಲಕಾರಿಯಾಗುತ್ತಿದೆ, ಇನ್ನೊಂದೆರಡು ವರ್ಷಗಳಲ್ಲಿ ಇನ್ನೂ ಎಷ್ಟು ಮಟ್ಟಿಗೆ ಪರಿಣಾಮಕಾರಿಯಾಗಬಹುದು ಎಂಬುದನ್ನು ಯೋಚನೆಮಾಡಬೇಕು. ಈ ಇನಾಂ ಮತ್ತು ಜೋಡಿ ರದ್ದುಮಾಡುವ ವಿಚಾರವನ್ನು ತರುವಾಗ ದೇಶದ ವಾತಾವರಣ ಹೇಗಿದೆ, ಯಾವ ರೀತಿ ಮುಂದೆ ಹೋಗುವುದು ಎಂಬುದನ್ನೆಲ್ಲಾ ಗಮನಿಸಿಕೊಂಡು ಮುಂದುವರಿದರೆ ಒಳ್ಳೆಯದೆಂದು ಕಾಣುತ್ತದೆ. ಇನಾಂದಾರರೂ ಜೋಡಿದಾರರೂ ಇದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಇಂಥ ಒಂದು ವಾತಾವರಣ ದೇಶದಲ್ಲಿ ಬೆಳೆಯುತ್ತಿರುವಾಗ ಹೀಗೆ ಈ ಕೆಲವು ಸಂಸ್ಥೆಗಳಿಗೆ ಸೇರಿದ ಇನಾಂ ಮತ್ತು ಜೋಡಿಗಳನ್ನು ಬಿಟ್ಟುಬಿಟ್ಟರೆ ಅವುಗಳಿಗೆ ಉಪಕಾರವಾಗುವುದಕ್ಕಿಂತ ಅವುಗಳ ಹಿತಕ್ಕೆಧಕ್ಕೆ ಬರುವುದಕ್ಕವಕಾಶವಾಗುತ್ತದೆ. ಅವುಗಳ ಹಿತದೃಷ್ಟಿಯಿಂದಲೇ ಅವುಗಳನ್ನು ಹಾಗೆಯೇ ಬಿಡುವುದು ಒಳ್ಳೆಯದಲ್ಲವೆಂದು ನನ್ನ ಅಭಿಪ್ರಾಯ. ಆ ಸಂಸ್ಥೆಗಳಿಗೆ ಸಹಾಯಮಾಡಬೇಕಾಗಿದ್ದರೆ, ಯಾವ ರೀತಿ ಸಹಾಯಮಾಡಬೇಕು ಎಂಬುದನ್ನು ಯೋಚನೆ ಮಾಡೋಣ. ಅದು ಬಿಟ್ಟು, ಇವುಗಳನ್ನು ಹಾಗೆಯೇ ಬಿಟ್ಟುಬಿಟ್ಟರೆ ಯಾವು ಉದ್ದೇಶವನ್ನಿಟ್ಟುಕೊಂಡು ಬಿಡುತ್ತೇವೆಯೋ ಆ ಉದ್ದೇಶ ಸಫಲವಾಗುವುದಿಲ್ಲ, ಇದರಿಂದ ಅವುಗಳಿಗೆ ಸಹಾಯವಾಗಲಾರದೆಂದು ತಿಳಿಸಬೇಕಾಗಿದೆ. ಈ ವಿಷಯವನ್ನು ಇಲ್ಲಿಗೆ ಕೈಬಿಡುತ್ತೇನೆ.

ವೈಯಕ್ತಿಕ ಅನುಭವವನ್ನು ಹೇಳುವುದಾದರೆ, ಇನಾಂ ಗ್ರಾಮಗಳಲ್ಲಿರುವ ರೈತರ ಸ್ಥಿತಿಯನ್ನು ನೋಡಿದರೆ, ಇವರು ನಮ್ಮ ರಾಜ್ಯಾಂಗದಲ್ಲಿ ಹಿಲ್ ಟ್ರೈಬ್ಸ್ ಎಂದು ಏನು ಹೇಳುತ್ತಾರೋ ಹಾಗಿದ್ದಾರೆ. ಈ ಜನರಿಗೆ ವಿದ್ಯಾಭ್ಯಾಸವಿಲ್ಲ, ಕುಡಿಯುವ ನೀರಿನ ಸೌಕರ್ಯವಿಲ್ಲ, ರಸ್ತೆಯ ಅನುಕೂಲವಿಲ್ಲ, ಯಾವ ಅನುಕೂಲವೂ ಇಲ್ಲ. ಬಾಕಿಯ ಗ್ರಾಮಗಳಲ್ಲಿರುವ ಪ್ರಜೆಗಳು ಯಾವ ಸೌಕರ್ಯಗಳನ್ನನುಭವಿಸುತ್ತಿದ್ದಾರೋ ಅವು ಯಾವವೂ ಇವರಿಗೆ ದೊರೆಯುತ್ತಿಲ್ಲ. ಆ ರೈತರು ಅನೇಕ ವರ್ಷಗಳಿಂದ ಇನಾಂ ಗ್ರಾಮಗಳ ಜಮೀನನ್ನು ಅಭಿವೃದ್ಧಿಪಡಿಸಿಕೊಂಡು ಬಂದು ವಂಶಪಾರಂಪರ್ಯವಾಗಿ ಕಷ್ಟಪಟ್ಟುಕೊಂಡು ತಮ್ಮ ಹೊಟ್ಟೆ ಹೊರೆದುಕೊಂಡು ಬಂದಿದ್ದಾರೆ. ಈ ಜನರ ಸ್ಥಿತಿ ಹೇಗಿದೆಯೆಂಬುದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ನಾನು ಕಂಡ ಹಾಗೆ ಒಂದು ಇನಾಂ ಗ್ರಾಮದಲ್ಲಿರತಕ್ಕ ನೂರು ಜನರಲ್ಲಿ 99 ಜನರು ಅವಿದ್ಯಾವಂತರು. ಇಂಥ ಒಂದು ಮಸೂದೆ ಬರುತ್ತದೆ, ಕಾನೂನಾಗುತ್ತದೆ ಎಂಬ ಅರಿವು ಕೂಡ ಅವರಿಗಿಲ್ಲ. ಅವರು ವಂಶಪಾರಂಪರ್ಯವಾಗಿ ಜಮೀನು ಮಾಡಿಕೊಂಡು ಬಂದಿದ್ದರೂ ಅವರಲ್ಲಿ ಒಂದು ಚೀಟಿ ಅಥವಾ ಕಾಗದ ಕೂಡ ಇಲ್ಲ. ಅವರು ಕಂದಾಯವನ್ನು ತಪ್ಪದೆ ಕೊಟ್ಟುಕೊಂಡು ಬಂದಿದ್ದರೂ, ಎಷ್ಟು ಕೊಟ್ಟಿದ್ದಾರೆ, ಯಾವುದಕ್ಕೆ ಕೊಟ್ಟಿದ್ದಾರೆ ಎಂಬುದಕ್ಕೆ ದಾಖಲೆ ಕೂಡ ಅವರಲ್ಲಿಲ್ಲ. ಹಾಗೆಯೇ ಇಂಥ ನ್ಯೂನತೆಗಳಿರುವ ನೂರಾರು ಗ್ರಾಮಗಳಿವೆ. ಇಂಥ ಜನರಿಗೆ ಯಾವ ರಕ್ಷಣೆಯನ್ನೂ ಕೊಟ್ಟಿಲ್ಲ. ಅವರು ಎಷ್ಟೋ ವರ್ಷಗಳಿಂದ ಅನುಭವಿಸಿಕೊಂಡು ಬಂದಿದ್ದಾರೆಂಬುದಕ್ಕೆ ದಾಖಲೆ ತೋರಿಸಬೇಕೆಂದು ಹೇಳಿದರೆ ಅದು ಹೇಗೆ ಸಾಧ್ಯ? ಒಂದು ಮಾತನ್ನು ಕೇಳಿದರೆ ಅದಕ್ಕೆ ಉತ್ತರ ಹೇಳುವುದಕ್ಕೂ ಗೊತ್ತಿಲ್ಲದೆಯಿರುವ ರೈತ ದಾಖಲೆಗಳನ್ನೆಲ್ಲಾ ಹೇಗೆ ಒದಗಿಸಬೇಕೆಂಬುದನ್ನು ತಾವು ಯೋಚನೆ ಮಾಡಬೇಕು. ಇದಕ್ಕೆ ಒಬ್ಬ ಅಧಿಕಾರಿಯನ್ನು ಗೊತ್ತುಮಾಡುವುದಕ್ಕಿಂತ ಒಂದು ಟ್ರಿಬ್ಯುನಲ್ ಅಥವಾ ಸಮಿತಿಯನ್ನು ನೇಮಕಮಾಡುವುದು ಸೂಕ್ತವೆಂದು ನನಗೆ ಮನವರಿಕೆಯಾಗುತ್ತಿದೆ. ರೈತನ ಹತ್ತಿರ ದಾಖಲೆ ಇರಲಿ, ಇಲ್ಲದೇಯಿರಲಿ, ವಿಚಾರಣೆಯಿಂದ ಆ ಟ್ರಿಬ್ಯುನಲ್ಲಿಗೆ ಅವನು ಜಮೀನನ್ನನುಭವಿಸುತ್ತಿದ್ದಾನೆಂಬುದೂ ಅವನಿಗೆ ಹಕ್ಕನ್ನು ಕೊಡಬೇಕೆಂಬುದೂ ಮನದಟ್ಟಾದರೆ, ಆ ರೀತಿ ತೀರ್ಮಾನಿಸಲು ಅವಕಾಶವಿರುವಂತೆ ಮಾಡುವುದು ಒಳ್ಳೆಯದು. ಇದು ಅವಶ್ಯಕವೆಂದು ನಾನು ಸೂಚಿಸುತ್ತೇನೆ.

2-30 P. M.

ಇನ್ನು ನಾನು ಪರ್ಮನೆಂಟ್ ಮತ್ತು ಕ್ವಾಸಿಪರ್ಮನೆಂಟ್ ರೈತರುಗಳಿಗೆ ಕೊಟ್ಟಿರತಕ್ಕ ಸೌಲಭ್ಯಗಳ ವಿಚಾರವಾಗಿ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ನಿನ್ನೆಯ ದಿವಸ ಈ ಸಭೆಯ ಮುಂದೆ ಗ್ರಾಮ ನೌಕರರ ಎಂದರೆ Village Offices (Amendment) Bill ನ್ನು ತಂದಿದ್ದಾಗ ಇದ್ದ ವಾತಾವರಣಕ್ಕೂ ಈ ದಿವಸ ಈ ಬಿಲ್ಲಿನ ಬಗ್ಗೆ ಚರ್ಚೆಗಳಾಗುತ್ತಿರುವ ವಾತಾವರಣಕ್ಕೂ, ಈ ಎರಡಕ್ಕೂ ಹೋಲಿಕೆ ಹಾಕಿಕೊಂಡು ನೋಡುವುದಾದರೆ, ಈ ಪಟೇಲಿ ಹಕ್ಕೆಂಬುದು ಯಾವುದೋ ಒಂದು ಬಹಳ ಹಳೆಯ ಕಾಲದಿಂದಲೂ, ಹಿಂದಿನ ರಾಜಮಹಾರಾಜರುಗಳ ಕಾಲದಿಂದಲೂ ನಡೆದುಕೊಂಡು ಬಂದಿರತಕ್ಕಂಥ ಒಂದು ಹಕ್ಕಾಗಿದೆ, ಅವರು ಸರ್ಕಾರಕ್ಕೆ ಸಲ್ಲಿಸಿರತಕ್ಕ ಒಂದು ಘನತರ ಸೇವೆಗಾಗಿ ಅವರಿಗೆ ಹಾಕಿಕೊಟ್ಟಿರುವಂಥ ಒಂದು ಹಕ್ಕಾಗಿರುತ್ತದೆ. ಆದರೆ ಈಗ ಮಾತನಾಡುತ್ತಾ ಕೆಲವು ಸದಸ್ಯರು ಅಂಥ ಹಕ್ಕುಗಳೆಲ್ಲವನ್ನೂ ಈಗ ತಳ್ಳಿಹಾಕಬೇಕೆಂದೂ, ಆ ಹಿಂದಿನ ಹಿನ್ನೆಲೆಗಳನ್ನೆಲ್ಲಾ ಈಗ ಗಮನಕ್ಕೆ ತಗೆದುಕೊಳ್ಳತಕ್ಕದ್ದು ಸರಿಯಲ್ಲವೆಂದೂ ತಿಳಿಸಿರುತ್ತಾರೆ. ಹೀಗೆ ಅವರಿಂದ ಒಂದು ಹಕ್ಕನ್ನು ಕಿತ್ತುಕೊಳ್ಳುವಾಗ ನಾವು ಅವರಿಗೆ ಯಾವ ವಿಧವಾದ ಪರಿಹಾರವನ್ನೂ ಕೂಡ ಕೊಡಬೇಕಾದ್ದಿಲ್ಲ ಎನ್ನತಕ್ಕ ವಾದ ಕೂಡ ಬಂದಿದೆ. ಹೀಗೆ ಒಂದು ರೀತಿಯ ವಾದವನ್ನು ಮಾಡುತ್ತಿರುವಂಥ ಕಾಲದಲ್ಲಿಯೇ ಈ ದಿವಸ ನಾವು ಇನಾಂದಾರರಿಗೆ ಯಾವುದೋ ಕಾಲದಲ್ಲಿ, ಯಾವುದೋ ಒಂದು ಕಾರಣಕ್ಕಾಗಿ—ಯಾರೋ ಒಬ್ಬರು ಹೇಳುತ್ತಿದ್ದರು, "ನಶ್ಯ ತಿಕ್ಕಿ ಕೊಟ್ಟಿದ್ದಕ್ಕೆ ಅವನಿಗೊಂದು ದೊಡ್ಡ ಜಮೀನನ್ನೇ ಇನಾಂತಿ ಹಾಕಿಕೊಡಲಾಗಿರುತ್ತೆ" ಎಂದು—ಹೀಗೆಲ್ಲಾ ಪಡೆದುಕೊಂಡಿದ್ದಂಥ ಇನಾಂತಿಗಳ ಬಗ್ಗೆ ಆ ಇನಾಂದಾರರುಗಳಿಗೆ ಈ ದಿವಸ ಒಂದು ಪರಿಹಾರ ಕೊಡಲೇಬೇಕೆಂದು ಒಂದು ದೊಡ್ಡ ವಾದ ಈಗ ನಡೆಯುತ್ತಿದೆ. ಹಾಗೊಂದು ಪರಿಹಾರ ಕೊಡಲೇಬೇಕೆಂಬ ಅಂಶವನ್ನು ಕೂಡ ಸರ್ಕಾರದವರು ಈ ಬಿಲ್ಲಿನಲ್ಲಿಯೂ ಉಲ್ಲೇಖಿಸಿದ್ದಾರೆ. ಆದರೆ ಸರ್ಕಾರದವರು ಇದೇ ದೃಷ್ಟಿಯನ್ನು ಮುಂದುವರಿಸಿ ತಾವೇಕೆ ಆ ಪಟೇಲ್ ಮತ್ತು ಶ್ಯಾನುಭೋಗರುಗಳಿಗೂ ಈ ರೀತಿಯಾಗಿ ಒಂದು ಪರಿಹಾರವನ್ನು ಕೊಡಬಾರದೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಈ ಗ್ರಾಮ ನೌಕರರುಗಳಿಂದ ವಿಶಿಷ್ಟ ಕೆಲಸಗಳನ್ನೂ ಮಾಡಿಸಿಕೊಂಡು, ಮನೆ ಸಾರಿಸತಕ್ಕ ಕೆಲಸದಿಂದ ಹಿಡಿದು ಮದುವೆ ಚಪ್ಪರ ವಗೈರೆ ನೂರಾರು ಕೆಲಸಗಳನ್ನು ಮಾಡಿಸಿಕೊಂಡು, ಮದುವೆ ಮುಂಜಿ ಇತ್ಯಾದಿಗಳಲ್ಲೆಲ್ಲಾ ಯಾರಿಂದ ಸೇವೆ ಹೊಂದಿರುತ್ತಾರೋ ಅವರಿಗೆ ಯಾವ ಪರಿಹಾರವೂ ಬೇಡ, ಈ ಇನಾಂದಾರರಿಗೆ ಮಾತ್ರ ಪರಿಹಾರ ಕೊಡಬೇಕು, ಎಂದು ವಾದಿಸುತ್ತಿರುವ ಈ ಎರಡು ವಿಧವಾದ ವಾದಗಳನ್ನೂ ನಮ್ಮ ಮುಂದಿಟ್ಟುಕೊಂಡು, ಈ ಎರಡು ವಾದಗಳಲ್ಲಿ ಯಾವುದು ಸರಿ, ಯಾವುದು ಸರಿಯಲ್ಲ ಎಂಬುದನ್ನು ನಾವೀಗ ನೋಡಬೇಕಾಗಿದೆ. ಇಷ್ಟೇ ಅಲ್ಲದೆ, ನಾವು ಮತ್ತೊಂದು ಅಂಶವನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಅದು ಯಾವುದೆಂದರೆ, ಅನೇಕ ಇನಾಂಗಳು ಹುಟ್ಟಿ ಯಾವ ಪರಿಹಾರವನ್ನೂ ಕೊಡದೆ ಆ ಜಮೀನುಗಳನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳಬೇಕೆಂಬ ಕಾಲ ಮುಂದೆ ಇರುವಾಗ ನಾವೀದಿವಸ ಈ ಇನಾಂದಾರರುಗಳಿಗೆ ಇಷ್ಟೊಂದು ಭಾರಿ ಮೊತ್ತದ ಪರಿಹಾರ ಕೊಡತಕ್ಕದ್ದು ಸರಿಯೇ ಮತ್ತು ಉಚಿತವೇ ಎಂಬುದನ್ನೂ ಸಹ ಆಲೋಚಿಸಬೇಕಾಗಿದೆ. ಈ ಇನಾಂದಾರರುಗಳೂ ಆ ಜಮೀನುಗಳಿಂದ ಎಷ್ಟೆಷ್ಟು ಪ್ರಯೋಜನ ಹೊಂದಬಹುದಾಗಿತ್ತೋ ಅಷ್ಟನ್ನೂ ಪೂರ್ಣವಾಗಿ ಈಗಾಗಲೇ ಹೊಂದಿರುತ್ತಾರೆ; ಮತ್ತು ಇನ್ನೂ ಜಾಸ್ತಿಯಾಗಿಯೇ ಪ್ರಯೋಜನ ಹೊಂದಿದ್ದಾರೆಂದರೆ ಅದೇನೂ ಒಂದು ಅತಿಶಯೋಕ್ತಿಯಾಗಲಾರದು. ಈಗ ಸರ್ಕಾರದ ಹಣಕಾಸಿನ ಸ್ಥಿತಿ ಯಾವ ಮಟ್ಟದಲ್ಲಿದೆಯೆಂಬುದನ್ನು ನೋಡಿಕೊಂಡು ನಾವು ಇವರಿಗೂ ಒಂದು ಗೌರವವನ್ನು ಸಲ್ಲಿಸಬೇಕಾಗಿದೆ. ಈಗಾಗಲೇ ನಾವು 1947ರಲ್ಲಿ ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಿದ್ದರಿಂದ ಸುಮಾರು 6-7ಕೋಟಿ ರೂಪಾಯಿಗಳ ಹೆಚ್ಚಿನ ಭಾರವನ್ನು ತಲೆಯಮೇಲೆ ಹೊತ್ತಿರುತ್ತೇವೆ. ಆದುದರಿಂದ ನಾವೀದಿವಸ ಇವರಿಗೆ ಎಷ್ಟರ ಮಟ್ಟಿಗೆ ಪರಿಹಾರ ನೀಡಬಹುದು, ಹೀಗೆ ಅಪಾರವಾಗಿ ಪರಿಹಾರ ನೀಡುವುದಕ್ಕೆ ಹೋದರೆ ನಮಗೆ ಎಷ್ಟು ಕಷ್ಟವಾಗುತ್ತದೆ, ನಮ್ಮ ಪರಿಸ್ಥಿತಿಯೇನು ಎಂಬ ಈ ವಿಚಾರಗಳನ್ನೆಲ್ಲಾ ನಿರ್ಧರಮಾಡಿಕೊಂಡು ನಾವು ಕಾಂಪೆನ್ಸೇಷನ್ ಕೊಡಬೇಕಾಗಿರುತ್ತದೆ. ಆದರೆ ಈ ಮಸೂದೆಯಲ್ಲಿ ಪರಿಹಾರವನ್ನು 10 ರಷ್ಟು, 20 ರಷ್ಟು, 25ರಷ್ಟು, 60ರಷ್ಟು ಹೀಗೆಲ್ಲಾ ಕೊಡಬೇಕೆಂದು ತಿಳಿಸಿದ್ದಾರೆ. ಇದನ್ನು ಇನ್ನೂ ಬಹಳವಾಗಿ ಆಲೋಚನೆ ಮಾಡಬೇಕು. ನಮ್ಮ ಪರಿಸ್ಥಿತಿ ತುಂಬ ಕಷ್ಟಕ್ಕೀಡಾಗಬಹುದು. ಹಾಗೆಯೇ ನೋಡುತ್ತಾ ಹೋದರೆ ಈ ಬಿಲ್ಲಿನಲ್ಲಿ ಹೇಳಿರತಕ್ಕ ಪ್ರತಿಯೊಂದು ಅಂಶಗಳನ್ನೂ ಪೂರ್ಣವಾಗಿ ಚರ್ಚೆ ಮಾಡಿ ಅವುಗಳನ್ನು ವಿಮರ್ಶೆ ಮಾಡಬೇಕಾಗಿದೆ.

ಇದರಲ್ಲಿ ಇನ್ನೊಂದು ಬಹಳ ಪ್ರಾಮುಖ್ಯವಾದ ವಿಚಾರವೇನೆಂದರೆ ಈ ರಿಲಿಜಿಯಸ್ ಮತ್ತು ಸರ್ವಿಸ್ ಇನಾಂತಿಗಳನ್ನು ಹೇಗೆ ಪರಿಗಣಿಸಬೇಕೆಂಬ ವಿಚಾರದಲ್ಲಿ ಕೂಡ ಎಚ್. ಬಿ. ಗುಂಡಪ್ಪಗೌಡರ ಸಮಿತಿಯ ವರದಿಯಲ್ಲಿ ಕೆಲವು ವಿಷಯಗಳನ್ನು ನಮೂದಿಸಲಾಗಿದೆ. ಈ ತೋಟಿ ತಳವಾರರ ವಿಚಾರವಾಗಿ ಅವರಿಗೆ ಕೊಟ್ಟಿರತಕ್ಕ ಇನಾಂತಿಗಳನ್ನೆಲ್ಲಾ ತೆಗೆದುಕೊಂಡು ಅವರಿಗೆ ಸಂಬಳ ಸಾರಿಗೆ ಕೊಡಬಹುದೆಂದು ಸಹ ತಿಳಿಸಿದ್ದಾರೆ. ಆದರೆ ತಾವೀಗ ಅವರ ಬಗ್ಗೆ ಕೈಹಾಕುವುದಕ್ಕೆ ಹೋಗಿಲ್ಲ. ಹಾಗೆ ಮಾಡಿದರೆ ಇನ್ನೂ ಹೆಚ್ಚಿನ ತೊಂದರೆಗಳಿಗೆ ಅವಕಾಶವಾಗುತ್ತದೆ. ಆದರೆ ತಾವು ಮತ್ತೊಮ್ಮೆ ಈ ರಿಲಿಜಿಯಸ್ ಮತ್ತು ಸರ್ವಿಸ್ ಇನಾಂತಿಗಳ ಬಗ್ಗೆ ತೀವ್ರಾಲೋಚನೆ ಮಾಡಬೇಕೆಂದು ತಿಳಿಸಿ, ಈ ನನ್ನ ಕೆಲವು ಸಲಹೆಗಳನ್ನು ತಮ್ಮ ಮುಂದಿಟ್ಟು, ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.ನರಸೀಪುರ):— ಸ್ವಾಮಿ, ಈ ದಿವಸ ಈ ಮಾನ್ಯ ಸಭೆಯ ಮುಂದೆ ಇಟ್ಟಿರುವ The Mysore (Personal and Miscellaneous) Inams Abolition Bill, 1953 ಬಿಲ್ಲಿನಮೇಲೆ ಮಾತನಾಡಿದ ಕೆಲವು ಸದಸ್ಯರು ಅವರ ಅಭಿಪ್ರಾಯಗಳನ್ನಾಗಲೇ ಸೂಚಿಸಿದ್ದಾರೆ. ಆದರೆ ಈ ಬಿಲ್ಲಿನ ಬಗ್ಗೆ ನನ್ನ ಅಭಿಪ್ರಾಯಗಳೇನಿರತಕ್ಕವೆಂಬ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಈ ಬಿಲ್ಲನ್ನು ಮಂಡಿಸುವಾಗ ಈಗಾಗಲೇ ಮಾನ್ಯ ರೆವೆನ್ಯೂ ಸಚಿವರು ಹೇಳಿರುವ ಹಾಗೆ ಈ ಮಸೂದೆಯಲ್ಲಿ ಅನೇಕ ನ್ಯೂನಾತಿರೇಕಗಳಿರುತ್ತವೆ.

ಶ್ರೀ ಕಡಿದಾಳ್ ಮಂಜಪ್ಪ.— ನಾನು ಅಲ್ಲಲ್ಲೇ ಕೆಲವು ದೋಷಗಳಿರುತ್ತವೆಂದು ತಿಳಿಸಿದ್ದೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.— ಈಗ ಈ ಮಸೂದೆಯ (3)ನೆಯ ಸೆಕ್ಷನ್ (ಡಿ)ನಲ್ಲಿ ಹೇಳಿರುವ ಪ್ರಕಾರ ಈ ಇನಾಂ ಗ್ರಾಮಗಳಲ್ಲಿರತಕ್ಕ ಜಮೀನುಗಳನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡ ಮೇಲೆ, ಆ ಇನಾಂದಾರರಿಗೆ ಆ ಜಮೀನುಗಳ ಮೇಲೆ ಯಾವ ಹಕ್ಕೂ ಇರುವುದಿಲ್ಲವೆಂದು ಇದರ next clause ಎಂದರೆ (ಇ) ನಲ್ಲಿ ಹೇಳಿರುವ ಪ್ರಕಾರ ಒಂದುವೇಳೆ ಸರ್ಕಾರಕ್ಕೆ ಇನಾಂ, ಇನಾಂತಿ ಮತ್ತು ಈ ಜೋಡಿ ಬಗ್ಗೆ ಬರಬೇಕಾಗಿರತಕ್ಕ ಸೆಸ್ಸು ವಗೈರೆ ಇತ್ಯಾದಿ ಬಾಕಿಗಳನ್ನೆಲ್ಲಾ ಇನಾಂದಾರನ ಸ್ವಂತ ಆಸ್ತಿಯಿಂದ ವಸೂಲು ಮಾಡಿಕೊಳ್ಳಬಹುದೆಂದು ಹೇಳಿದೆ. ಹೀಗಿರುವುದರಿಂದ ಯಾರಾದರೊಬ್ಬ ಇನಾಂದಾರನಿಗೆ ಆತನ ಗ್ರಾಮದಲ್ಲಿ ಕೆಲವು ಕುಳಗಳಿಂದ ಬಾಕಿ ಬರಬೇಕಾಗಿದ್ದ ಕಾರಣದಿಂದ ಆತನು ತಾನು ಸರ್ಕಾರಕ್ಕೆ ಕೊಡತಕ್ಕ ಕಂದಾಯದ ಬಾಕಿಯನ್ನು ನಿಲ್ಲಿಸಿಕೊಂಡಿದ್ದರೆ ಆ ಬಾಕಿಯನ್ನೆಲ್ಲಾ ಈ ಇನಾಂದಾರನಿಂದ ವಸೂಲ್ಮಾಡಬೇಕೆಂದು ಪುಟ 6 ಪ್ಯಾರಾ 2ರಲ್ಲಿ ತಿಳಿಸಲಾಗಿದೆ. ತಾವು ಸರ್ಕಾರದವರೇನೋ ತಮಗೆ ಬರಬೇಕಾದ ಬಾಕಿಯನ್ನು ಆ ಇನಾಂದಾರನಿಂದ ವಸೂಲ್ಮಾಡಿಕೊಳ್ಳುತ್ತೀರಿ. ಆದರೆ ಆ ಇನಾಂದಾರನಿಗೆ ಯಾವಾಗ ಆ ಇನಾಂತಿ ಕೈಬಿಟ್ಟುಹೋಗುತ್ತದೆಯೋ ಅನಂತರ ಆತನಿಗೆ ಒಂದು ಕಾಸು ಬಾಕಿ ಸಹ ವಸೂಲ್ಮಾಡಿಕೊಳ್ಳಲು ಆಗುವುದಿಲ್ಲ. ರೆಕಾರ್ಡ್ ಆಫ್ ರೈಟ್ಸ್ ಸರ್ವೆ ಅಂಡ್ ಸೆಟಲ್‌ಮೆಂಟ್ ಪ್ರಕಾರ ಈ ಇನಾಂ ಜಮೀನುಗಳಿಗೆ ಎಷ್ಟು ಕಂದಾಯ, ಏನು ಎಂಬುದೊಂದೂ ನಿಗದಿಯಾಗಿಲ್ಲ. ಪ್ರತಿಯೊಂದು ಜಮೀನಿನ ಬಗ್ಗೆ ಇರಬೇಕಾದ ಖಾತೆ ಕಿರದಿಗಳೊಂದೂ ಇರುವುದಿಲ್ಲ. ಸರ್ಕಾರಿ ಗ್ರಾಮಗಳಲ್ಲಿರತಕ್ಕ ಜಮೀನುಗಳಂತೆ ಈ ಗ್ರಾಮಗಳಲ್ಲಿ ಡಿ. ಸಿ. ಬಿ. ತಃಖ್ತೆಗಳು ಸಿದ್ಧವಾಗಿರುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.— ತಾವೇನು ಈ ಇನಾಂ ಜಮೀನುಗಳಿಗೂ ಈ ಛಾರ್ಜುಗಳನ್ನು ಹಾಕಬೇಕೆಂದು ಹೇಳುತ್ತಿದ್ದೀರಾ?

Sri S. SRINIVASA IYENGAR.—In villages where Survey, Settlement and Record of Rights Schemes have been introduced proper accounts will have been maintained by an inamdar at the time of handing over the village. The Government also get a certain amount from the people whose rights have been recorded. My point is that when the rights have been recorded under the Record of Rights Scheme, and when you know definitely what the amount is due to the inamdar at the time of taking over the village from him, it is but right that you also take the responsibility of collecting arrears on the lands. Even though they may be due to the inamdar, they are due on the lands which you are going to take possession of. As it is provided in the Bill, you do not want to recognise that. You want to penalise the inamdar by bringing his properties to sale. Not only he loses the inam village but there is the risk of losing the property on account of the sale even though he has a lot of money to be collected in the village. In addition to that sub-clause (2) of Clause 3 drags him to a court of law. That means, even though the inamdar has handed over the village, he will have to go to a Civil Court and file several cases of civil suits and be a court bird rather than live in peace in his house. I believe it is a hard thing for an inamdar.

Sri KADIDAL MANJAPPA.—What is your suggestion ?

Sri S. SRINIVASA IYENGAR.—As the Hon'ble Minister himself has proposed, the Bill is to go before a Select Committee and it is for the Select Committee just to weigh these things unbiassed. If the report of the Select Committee is just, let them accept ; if not, let them reject, and it is not my business to suggest anything.

With regard to the fixing of value of the land in the case of permanent tenants whose rights you are going to register after taking over the inam village, sub-clause (2) (*a*) of Clause 5 lays down that the market value of the land shall be determined in such a manner as may be prescribed. So it is not definite. At this time we do not know how you are going to fix the market value. These days, the market value of the dry land or the wet land or the bagayet land fluctuates. It directly depends upon the demand and supply. There are a number of inam lands of a very high value ; for example, Yelandur Jahagir ; in Mysore Vokkalageri. These are inam villages where we have a number of channels running so that the irrigation facilities given are in

plenty and the lands are highly valued. In such cases, if the market value of the land is taken into consideration even in respect of a permanent tenant who applies for his name being registered as occupant of that land to the extent of only two acres, the market value of the land may quite probably be in the order of Rs. 4,000 to Rs. 5,000. The Bill says that he has to pay fifty per cent of the market value in five instalments. I believe that it is a very heavy assessment for a man of that type considering the fact that he has applied to get his name registered in respect of land to the extent of two acres only. He is a small holder. The valuation as provided under this Bill is too heavy. In the same clause it is said that unless he completes the repayment of this valuation, any contract or, if he raises a loan with any other person, that loan, or any transaction shall be considered as void and as of no effect. I am putting it to you: you want money to be paid by the tenant; he has a small holding; whatever is produced in the holding is not enough for himself; how can he repay the money? He has to raise a loan with somebody else. But no moneylender will ever advance him money by virtue of the existence of this clause. He knows definitely that in case he has to go to a court of law, the document will be treated as null and void. You will be unnecessarily placing the tenant in a predicament. He will not have surplus money and you will not redeem him until he pays back the amount. To that extent this Bill is not helpful.

Coming to the next point, my friend Sri Singari Gowda has raised an issue that in determining the gross revenue, the provision made under this Act for an enhanced assessment of land revenue in respect of villages wherein revenue and survey settlement has not been introduced is excessive. But I feel that the provision in the Bill is quite correct, because, in a village where survey and revenue settlement has been introduced, you know definitely the Land Revenue Demand; but in a village where it is not introduced, the Land Revenue Demand is based on the old method of assessing the land by *kolaga* and *kandaga*. So there will be indefinite assessment and therefore, it is but right that you give one and one-third the assessment; that is correct.

The next thing that I wanted to place before you is as regards the basic value. Section 18 (1) lays down the procedure for determining the basic value on which compensation is to be fixed. For the purpose of determining the basic value, you have taken into consideration the gross land revenue. Sri Singari Gowda thought that most of the Inamdars hold a number of acres in their khas khata and therefore that amount of land revenue that refers to their personal holding should be deducted from the gross. I believe it is unjust because he continues to pay that land revenue to the exchequer of the village and out of that total sum, the jodi is paid and therefore there is no reason why that should be excluded I have no objection in taking the gross revenue of an inam village into consideration, but I submit one important item has been omitted in this clause. You have taken into consideration all other sources of revenue derived by the Inamdar except the shop rentals of excise shops that he gets every year. The excise contractor will be running shops for the sale of toddy in most of the inam villages and in turn the Government will be giving the inamdar a toddy-refund bill for the use of a place for locating the shop as shop rent in most of the villages. I feel this shop rent amounts to nearly Rs. 600 or 700 a year while the jodi amount in that village that is liable to be paid to Government amounts to the same; it equates to that value. Therefore, while taking into consideration the gross revenue or the total revenue that an Inamdar may possibly get in

(SRI S. SRINIVASA IYENGAR.)

that village, the gross revenue on account of the land revenue assessment, the revenue from other sources and the revenue from the shop rentals on account of the toddy refund bill, have to be taken into consideration.

As regards the compensation amount, I have one thing to place before this House. The rate of compensation that is fixed to-day works very hard on certain class of people. It may not work hard in my case because I don't depend on the proceeds of an inam village, but there are certain class of people who entirely depend on the proceeds of inam village. They have inherited from father to son from the time of Mummadi Krishnaraja Wadeyar. It is quite probable that the amount calculated will not be enough if invested outside to enable the inamdar to make an honest livelihood. That means you will be depriving that inamdar of completely earning his livelihood by investing the compensation amount. Further, the compensation amount will not be paid in a lumpsum but you want him to receive it in a period of 10-12 years; much more difficult will be the position of the inamdar. After all, why do you think of penalising the Inamdar? He is a subject of the State. What you want is that the land in an Inam Village which is cutivated by the raiyats of the village over which the right vests with the inamdar should be transferred to the tenants. That is all your object. Why do you unnecessarily penalise the inamdar who has held that inam village for several years?

Sri M. PALANIYAPPAN (Ulsoor).—Nobody is advocating the cause of the raiyats.

Sri S. SRINIVASA IYENGAR.—Sri T. N. Mudlagiri Gowda was referring to the living condition of the people in the villages. I submit that in almost all the villages we have village panchayets constituted and the village panchayet has nothing to do with the inamdar. The inamdar has absolutely no hand in the constitution of the village panchayet or its administration, except taking revenue and paying it to the treasury in the shape of jodi and retaining perhaps one-fourth of what he collects. Now you want to penalise him. That is what is implied in this Bill.

As regards repayment, the provisions in this Bill are not in the interests of the inamdar in this sense. He is also a man like you, perhaps he has inherited the land for some service rendered previously. Now you deprive him of the inam land. I am not standing in that way. Here the interest that the Government propose to pay under this Act is $2\frac{7}{8}$ per cent. It is too low an interest. If you want to see that he does not exist, if you want to introduce land reforms, pay it striaghtaway. Let him have a negotiable bond. Let him invest in some other place where he can easily get a revenue—a permanent fixed revenue to augment his existing resources to live upon and therefore this belated payment I am not in a position to recommend.

The most important thing that I consider is, you seem to create the Deputy Commissioners as official liquidators so far as the inamdars are concerned. I think the inamdars do not deserve this attitude at your hands. You are humiliating the inamdars. You want to notify in each village, stating "all those people that have advanced to the inamdars, all those people that have an interest in this land and all those people that have financial commitment with this man, may please apply to the Deputy Commissioner. Your amount will be paid back." Is that the thing that you intend? That is what this Bill says. That means, whatever status he might have enjoyed, you will be making him a criminal; is that the object? At the same time you are appropriating to yourself the position of an arbitrator. Suppose he has a debt of Rs. 80 lakhs and your compensation amount works out to only

Rs. 20 lakhs. Then are you repaying all the creditors, just like the Gopala Rao Committee, by giving 4 annas or 6 annas in the rupee and discharging all his debts proportionately. He deserves a better treatment.

I am glad charitable and religious inams are excluded. The Bill deals with personal and miscellaneous inams. I have represented what all I have to say about it and I know that the Bill will be referred to a Select Committee and I believe that wisdom will dawn on the members of the Select Committee so that justice will be meted out both to the person who has now the enthusiasm of having the land and the person who loses it. Thank you.

ಶ್ರೀ ಬಿ. ಟಿ. ಕೆಂಪರಾಜ್—(ಬೆಂಗಳೂರು ದಕ್ಷಿಣ ತಾಲ್ಲೂಕು, ಅನುಸೂಚಿತ ಜಾತಿಗಳು)—ಅಧ್ಯಕ್ಷರೇ, ಈ ಸಭೆಯ ಮುಂದೆ ಸರ್ಕಾರದವರು ತಂದಿರುವ ಈ ಮಸೂದೆಯನ್ನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ಹೇಳಬೇಕೆಂದು ಬಯಸುತ್ತೇನೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಸೂಚಿಸಿರುವಂತೆ ಮಠಗಳು, ದೇವಸ್ಥಾನಗಳು ಇವುಗಳಿಗೆ ಸೇರಿದ್ದ ಜೋಡಿ ಇನಾಂತಿಗಳನ್ನು ವಜಾಮಾಡದೆ ಇರುವುದು ಬಹಳ ವ್ಯಸನವನ್ನುಂಟುಮಾಡತಕ್ಕಂಥ ಪ್ರಸಂಗ. ಎಲ್ಲಿಯವರೆಗೆ ಉಳುವ ರೈತನ ಹಿತದೃಷ್ಟಿಯನ್ನು ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ದೇಶಕ್ಕೆ ಒಂದಲ್ಲ ಒಂದು ದಿವಸ ಯಾವುದಾದರೊಂದು ರೀತಿಯಲ್ಲಿ ಧಕ್ಕೆಯು ಬರುವುದು ಸಹಜವೆಂದು ನಾನು ಹಲವು ಬಾರಿ ಇದೇ ಸಭೆಯಲ್ಲಿ ಹೇಳಿದ್ದೇನೆ. ಏಕೆಂದರೆ ಉಳುವ ರೈತನ ದೃಷ್ಟಿಯೇ ನಮಗೀಗ ಪ್ರಾಧಾನ್ಯವಾಗಿದೆ. ಆದ್ದರಿಂದ ನಾವೀಗ ಯಾವ ರಾಜ್ಯಾಂಗವನ್ನು ಕಾರ್ಯರೂಪಕ್ಕೆ ತರಬೇಕೆಂದಿದ್ದೇವೆಯೋ ಆ ರಾಜ್ಯಾಂಗದ ವಿಧಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯಸಾಧನೆ ಮಾಡದೆ ಇದ್ದಲ್ಲಿ ಬಹುಶಃ ನಮ್ಮ ಆಶೆಯೇನಿದೆ, ಮಹಾತ್ಮಾಗಾಂಧಿಯವರು ಹೇಳಿದ ತತ್ವವೇನಿದೆ ಅದನ್ನು ನಾವು ಸಾಧಿಸದೆ ಕರ್ತವ್ಯ ವಿಮುಖರಾಗುತ್ತೇವೆಂದು ನನ್ನ ಮನಸ್ಸಿಗೆ ನ್ನಿಸುತ್ತದೆ. ಮಹಾತ್ಮಾಗಾಂಧಿಯವರು ಹೇಳಿರುವ ಒಂದು ವಾಕ್ಯವನ್ನು ಈ ಸಂದರ್ಭದಲ್ಲಿ ನಾವು ಜ್ಞಾಪಕಕ್ಕೆ ತ ದುಕೊಳ್ಳಬೇಕು. ಎಲ್ಲಿಯವರಗೂ ಬೀದಿಯಲ್ಲಿ ಹೋಗತಕ್ಕ ಥ ಒಬ್ಬ ಬಡ ಭಿಕ್ಷುಕನಿಗೂ ತನಗೆ ಸ್ವರಾಜ್ಯ ದೊರಕಿದೆಯೆಂಬ ಭಾವನೆ ಮನಸ್ಸಿನಲ್ಲಿ ಉದ್ಭವಿಸುವಂತಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಸ್ವರಾಜ್ಯವೆಂದು ಯಾವುದನ್ನು ಹೇಳುತ್ತಿದ್ದೇವೋ ಅದು ಬರೀ ಹಗಲುಗನಸು ಎಂದು ಹೇಳಿದ್ದಾರೆ. ಈ ರೀತಿಯಾಗಿ ಒಂದು ವೇದವಾಕ್ಯವನ್ನು ನಮ್ಮ ಮುಂದಿಟ್ಟಿರತಕ್ಕಂಥ ಮಹಾತ್ಮಾಗಾಂಧಿಯವರ ಆತ್ಮಕ್ಕೆ ಮಾಡಬೇಕಾದ ಶಾಂತಿಯನ್ನು ಈ ರೀತಿಯ ಅರ್ಧಂಬರ್ಧ ಮಸೂದೆಗಳನ್ನು ತರುವುದರಿಂದ ಸಾಧಿಸುತ್ತವೆಯೋ ಎಂಬುದನ್ನು ನಾವು ನಮ್ಮನ್ನೇ ಪ್ರಶ್ನಿಸಿಕೊಳ್ಳಬೇಕಾದ ಸಂದರ್ಭವಿದೆಯೆಂದು ನಾನು ಹೇಳುತ್ತೇನೆ. ಒಂದು ವಿಷಯವನ್ನು ನಾವು ಯೋಚನೆಮಾಡಬೇಕು. ಸರ್ವೇಸಾಧಾರಣವಾಗಿ ಈಗಿರತಕ್ಕ ಇನಾಂತಿಗಳು ಜೋಡಿಗಳು ಯಾವುದೋ ಒಂದು ಕಾಲದಲ್ಲಿ ಯಾವುದೋ ಒಂದು ವ್ಯಕ್ತಿಯು ಮಾಡಿದ ಸೇವೆಗಾಗಿ ಕೊಟ್ಟಂಥ ಬಹುಮಾನಗಳು. ಇವುಗಳನ್ನು ಯಾವತ್ತಾದರೂ ಹೆಚ್ಚುತ್ತಿರುವ ಜನ ಸಂಖ್ಯೆಯ ದೃಷ್ಟಿಯಿಂದ ಮತ್ತು ದಿನೇ ದಿನೇ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳನ್ನು ಅರಿತುಕೊಳ್ಳುತ್ತಿರುವಂಥ ರೈತರ ದೃಷ್ಟಿಯಿಂದ, ಈ ರೀತಿಯಾಗಿ ಬಹುಮಾನವಾಗಿ ಕೊಡಲ್ಪಟ್ಟಂಥ ಭೂಮಿಗಳು ನಮಗೆ ಕೊಡಿಸಿಕೊಡಬೇಕು ಎಂಬ ವಾದವನ್ನು ತಾವಾಗಿ ದೇಶದ ಮುಂದೆ ಇಡುತ್ತಿರುವ ಕಾಲದಲ್ಲಿ ಇಂಥ ಮಸೂದೆಗಳು ಅಗತ್ಯವಾಗಿ ತರಲ್ಪಡಬೇಕಾಗುತ್ತವೆ. ಈ ದೃಷ್ಟಿಯಿಂದ ಈ ಮಸೂದೆ ಸರ್ಕಾರದ ಮುಂದೆ ಬಂದಿದ್ದರೂ ಸಹ ಇದು ಇನ್ನೂ ಯಾವ ಒಂದು Revolutionary Reforms ಎಂದೇನು ಕರೆಯುತ್ತೇವೆಯೋ ಆ ರೀತಿ ಬಂದಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ನಾವು ತರುವ ಸುಧಾರಣೆಗಳು ಯಾವ ರೀತಿ ರೈತರಿಗೆ ತೃಪ್ತಿಕರವಾಗಿರಬೇಕೋ ಆ ರೀತಿ ಯೋಚಿಸಿ ತರಬೇಕಾದದ್ದು ಅತ್ಯಗತ್ಯ. ಯಾವುದನ್ನು ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರು ಕ್ರಾಂತಿಕಾರಕವಾದ ಬದಲಾವಣೆಯೆಂದು ಹೇಳಿ ಒಂದೇ ದಿವಸದಲ್ಲಿ ಇರುವ ಸ್ಥಿತಿಗಳನ್ನೆಲ್ಲಾ ಏಕದಂ ಬದಲಾಯಿಸಬೇಕೆಂದು ತಮ್ಮ ವಾದಗಳಲ್ಲಿ ಹೇಳುತ್ತಾರೋ ಆ ರೀತಿಯ ಬದಲಾವಣೆಗಳನ್ನು ನಾವು ಏರ್ಪಡಿಸಬೇಕೆಂದಿದ್ದೇವೆ. ನಿಜವಾಗಿಯೂ ರೈತರಿಗೆ ಯಾವ ರೀತಿ ಸುಲಭವಾಗಿ ಜಮೀನಿನ ಒಡೆತನವನ್ನು ಕಲ್ಪಿಸಿಕೊಡಬೇಕೋ ಆ ರೀತಿ ಎಲ್ಲರಿಗೂ ಕಲ್ಪಿಸಿಕೊಡಬೇಕಾದದ್ದು ನಮ್ಮ ಆದ್ಯ ಕರ್ತವ್ಯ. ಈ ದೃಷ್ಟಿಯಿಂದ ಹೇಳುವುದಾದರೆ, ಇನಾಂದಾರರಿಗೂ ಜೋಡಿದಾರರಿಗೂ ಪರಿಹಾರಕೊಡಬೇಕಾದ ಅಗತ್ಯವುಂಟೇ ಅಥವಾ ಕೊಡಬಾರದೇ ಅನ್ನುವುದನ್ನೂ ಸಹ ನಾವು ಕೂಲಂಕಷವಾಗಿ ಪರಿಶೀಲಿಸಬೇಕಾಗಿದೆ. ನಮ್ಮ ಮಿತ್ರರಾದ ಶ್ರೀ ಮರ್ಕ ಮೂಡಲಗಿರಿಗೌಡರು ಹೇಳಿರುವಂತೆ, ಅನೇಕ ವರ್ಷಗಳಿಂದ ಈ ಒಂದು ಉಪಯೋಗವನ್ನು ಅನುಭವಿಸುತ್ತಿದ್ದಂಥ ಈ ಇನಾಂದಾರರಿಗೂ ಜೋಡಿದಾರರಿಗೂ ಪರಿಹಾರ ಕೊಡಬೇಕಾದ ಅಗತ್ಯವೇನಿದೆಯೆಂಬುದನ್ನು ನಾವು ಪ್ರಶ್ನಿಸಬೇಕಾಗಿದೆ.

3 P. M.

ಈ ಮಸೂದಾಕಾನೂನಿನಲ್ಲಿ ನಮೂದಾಗಿರುವ ಪರಿಹಾರದ ಮೊತ್ತ ಬಹಳ ಹೆಚ್ಚಿನ ಮೊತ್ತವಾಗಿದೆ. ಆದುದರಿಂದ ಇದನ್ನು ಕಡಮೆಮಾಡಿ ಒಂದು ಸೂಕ್ತವಾದ ರೂಪದಲ್ಲಿರುವಂತೆ ಮಾಡಬೇಕು.

ರೈತರಿಗೆ ಇದರಿಂದ ಎಷ್ಟರಮಟ್ಟಿನ ಉಪಯೋಗವಾಗುತ್ತದೆಂಬುದನ್ನು ನೋಡೋಣ. ರೈತರ ಹಕ್ಕು ಬಾಧ್ಯತೆಗಳನ್ನು ಗೊತ್ತುಮಾಡಬೇಕಾದರೆ ಖದೀಂ ಟೆನೆಂಟ್, ಪರ್ಮನೆಂಟ್ ಟೆನೆಂಟ್, ಕ್ವಾಸಿ ಪರ್ಮನೆಂಟ್ ಟೆನೆಂಟ್ ಎಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಖದೀಂಟೆನೆಂಟುಗಳಲ್ಲಿ ಬಹುಶಃ ಕೆಲವು ದಾಖಲೆಗಳಿರುತ್ತವೆ. ಆದರೆ ಪರ್ಮನೆಂಟ್ ಮತ್ತು ಕ್ವಾಸಿ ಪರ್ಮನೆಂಟ್ ಟೆನೆಂಟುಗಳಲ್ಲಿ ಯಾವ ವಿಧವಾದ ದಾಖಲಾತಿಗಳೂ ಇರುವುದಿಲ್ಲ. ಇನಾಂದಾರರು ಜೋಡೀದಾರರು ಇವರಿಂದ ಕಂದಾಯವನ್ನು ಪಡೆಯುತ್ತಾರೆ. ಆದರೆ ಇವರಿಗೆ ರಶೀತಿಗಳನ್ನು ಕೊಡು

(ಶ್ರೀ ಬಿ. ಟಿ. ಕೆಂಪರಾಜ್.)

ವುದಿಲ್ಲ. ಇಂಥ ನಿದರ್ಶನಗಳು ಅನೇಕವಾಗಿವೆ. ಅನೇಕ ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರಿಂದ ಜಮೀನನ್ನು ತೆಗೆದುಕೊಂಡು ಅವರನ್ನು ತಪ್ಪಿಸಿ ಬೇರೆಯವರಿಗೆ ಕೊಡತಕ್ಕ ಸಂದರ್ಭಗಳು, ಪ್ರಸಂಗಗಳು ಬೇಕಾದಷ್ಟು ನಡೆದಿವೆ. ಆದುದರಿಂದ ಈ ವಿಚಾರವನ್ನು ವಿಮರ್ಶೆಮಾಡುವಾಗ ಬಹಳ ಕೂಲಂಕಷವಾಗಿ ಸರ್ಕಾರದವರು ಯೋಚನೆಮಾಡಿ ಈ ರೀತಿ ಅನ್ಯಾಯಕ್ಕೊಳಗಾಗತಕ್ಕ ರೈತರ ಕಷ್ಟವನ್ನುವನ್ನು ತಪ್ಪಿಸಲು ಸೂಕ್ತಕಾರ್ಯಕ್ರಮವನ್ನು ಕೈಕೊಳ್ಳಬೇಕಾದುದು ಅಗತ್ಯ.

ಕೊನೆಯದಾಗಿ, ಈ ಜೋಡಿ ಮತ್ತು ಇನಾಂ ಗ್ರಾಮಗಳಲ್ಲಿರತಕ್ಕ ರೈತರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಈ ಗ್ರಾಮಗಳ ಸ್ಥಿತಿಯನ್ನು ನೋಡಿದರೆ, ಇವು ಕಣ್ಣಿಗೆ ಕಾಣುವ ನರಕಗಳೋ ಎನ್ನುವಂತಿವೆ. ಈ ಹಳ್ಳಿಗಳಲ್ಲಿ ವಾಸಮಾಡುವ ರೈತರಿಗೆ ಯಾವ ವಿಧವಾದ ಅನುಕೂಲಗಳನ್ನೂ ಸೌಕರ್ಯಗಳನ್ನೂ ಪಡೆಯುತಕ್ಕ ಮಾರ್ಗಗಳಿಲ್ಲ. ಅಲ್ಲದೆ ಜೋಡಿದಾರರ ಮತ್ತು ರೈತರ ನಡುವೆ ಇರತಕ್ಕ ಸೌಹಾರ್ದಭಾವನೆ ಖೋತಾ ಆಗುತ್ತಿದೆ. ಏಕೆಂದರೆ, ಸರ್ಕಾರದವರು ಇಂಥ ಒಂದು ಮಸೂದೆಯನ್ನು ತರುತ್ತಾರೆಂದು ರೈತರ ಗಮನಕ್ಕೆ ಬಂದು ರೈತರೂ ಕೂಡ ನಾವು ಒಂದಲ್ಲ ಒಂದು ವಿಧದಲ್ಲಿ ಈ ಜಮೀನಿನ ಒಡೆಯರು ಎಂಬ ಭಾವನೆಯಿಂದ ಜಮೀನ್‌ದಾರರ ಮೇಲೆ ಕಹಿ ವಾತಾವರಣವನ್ನು ಕಲ್ಪಿಸುವ ಪ್ರಸಂಗವನ್ನುಂಟುಮಾಡಿದ್ದಾರೆ. ಉದಾಹರಣೆಗೆ, ಬೆಂಗಳೂರು ಜಿಲ್ಲೆಯ ಅನೇಕಲ್ ತಾಲ್ಲೂಕು ಜಿಗಣಿ ಹೋಬಳಿಯ ಬಿಂಗೀಪುರ ಜೋಡಿಗ್ರಾಮದಲ್ಲಿ ರೈತರಿಗಾಗುತ್ತಿರುವ ಕಿರುಕುಳ ನನ್ನ ಗಮನಕ್ಕೆ ಬಂದು ಸಂಬಂಧಪಟ್ಟ ರೆವಿನ್ಯೂ ಅಧಿಕಾರಿಗಳಲ್ಲಿ ಅವರ ಕುಂದುಕೊರತೆಗಳನ್ನು ಅರ್ಜಿಯ ಮುಖಾಂತರ ಕೊಟ್ಟಿದ್ದಾಯಿತು. ಆದರೂ ಸಹ ಆ ರೆವಿನ್ಯೂ ಅಧಿಕಾರಿಗಳು ಈಗಿರತಕ್ಕ ಸರ್ಕಾರಿ ಕಾನೂನಿನ ಪ್ರಕಾರ ಅವರ ಕುಂದುಕೊರತೆಗಳನ್ನು ಪರಿಶೀಲಿಸಿ ಸೂಕ್ತಕಾರ್ಯಕ್ರಮ ಕೈಕೊಳ್ಳುವುದಕ್ಕೆ ನಮಗೆ ಅಧಿಕಾರವಿಲ್ಲವೆಂದು ಹೇಳಿದರು. ಹೀಗೆ, ಇನಾಂಗ್ರಾಮಗಳಲ್ಲಿ ವಾಸಮಾಡುವ ರೈತರ ಕುಂದುಕೊರತೆಗಳನ್ನು ನಿವಾರಿಸುವುದು ಬಹಳ ದುಸ್ತರವಾಗಿದೆ. ಆದುದರಿಂದ ಈ ಕಾನೂನನ್ನು ಜಾರಿಗೆ ತರುವಾಗ ಇನ್ನೂ ಇದಕ್ಕೆ ಸೇರಿಸತಕ್ಕದ್ದನ್ನು ಸೇರಿಸಿ ಇದಕ್ಕೆ ಒಂದು ಪೂರ್ಣರೂಪವನ್ನು ಕೊಡಬೇಕು. ರೈತರ ಹಕ್ಕು ಬಾಧ್ಯತೆಗಳನ್ನು ಯಾವ ರೀತಿ ಸಂರಕ್ಷಣೆಮಾಡಬೇಕೆಂಬುದನ್ನು ಆಮೂಲಾಗ್ರವಾಗಿ ಯೋಚಿಸುವುದಲ್ಲದೆ, ಜೋಡಿದಾರರು ಮತ್ತು ಇನಾಂದಾರರಿಗೆ ಪರಿಹಾರವನ್ನು ಯಾವ ರೀತಿ ಕೊಡಬೇಕೆಂಬುದನ್ನೂ ಯೋಚಿಸಿ ಅಪೂರ್ಣವಾಗಿ ತಂದಿರುವ ಈ ಕಾನೂನನ್ನು ಪರಿಪೂರ್ಣಮಾಡಿ ತಂದು ರೈತರ ಹಿತವನ್ನು ಸಾಧಿಸಬೇಕೆಂದು ನಾನು ಹೇಳುತ್ತೇನೆ.

Mr. SPEAKER.—The House will ow rise for lunch and meet again at -35.

The House adjourned at Five Iinutes past Three of the Clock and iet again at Thirty-five Minutes past hree of the Clock.

[Mr. SPEAKER in the Chair.]

ಶ್ರೀ ಟಿ. ಹನುಮಯ್ಯ (ಹಿರಿಯೂರು ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೆ, ಸ್ವಾಮಿ, ನಮ್ಮ ಮುಂದಿಟ್ಟಿರತಕ್ಕ ಈ ಇನಾಂ ರದ್ದಿಯಾತಿ ಮಸೂದೆಯನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದಾಶಿಸುತ್ತೇನೆ. ಈ ಮಸೂದೆ ನಮ್ಮ ಮುಂದೆ ಬಂದ ಸಮಯದಲ್ಲಿ ಇನಾಂ ಗ್ರಾಮಗಳು ಹೇಗೆ ಆದವೆಂಬ ಬಗ್ಗೆ ಮೂಲ ತತ್ವಗಳೇನೆಂಬುದು ನಮ್ಮ ಮುಂದಿಲ್ಲ. ಇನಾಂ ಗ್ರಾಮಗಳ ಮೂಲಕ ತತ್ವಗಳು ನಮಗೆ ಗೊತ್ತಾಗಿದ್ದಿದರೆ ಮುಂದೆ ಏನು ಮಾಡಬೇಕೆಂಬುದನ್ನು ಸರಿಯಾಗಿಯೋಚನೆಮಾಡಬಹುದಾಗಿತ್ತು. ಹೀಗೆ ಆ ತತ್ವಗಳು ನಮಗೆ ಗೊತ್ತಾಗಿದ್ದಿದ್ದರೆ, ಅವರಿಗೆ ಆ ಇನಾಂಗ್ರಾಮಗಳು ಯಾವರೀತಿ ಬಂದವುಎಂಬುದೂ ಗೊತ್ತಾಗುತ್ತಿತ್ತು. ಆದರೂ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಹಿಂದೆ ಪ್ರಜಾಪ್ರಭುತ್ವವಿಲ್ಲದೇ ಇದ್ದ ಕಾಲದಲ್ಲಿ ರಾಜಾಧಿರಾಜರೂ ರಾಜರುಗಳೂ ತಮ್ಮ ಮುಂದೆ ಸ್ವಲ್ಪ ಹೊತ್ತು ಯಾರಾದರೂ ಸಂಗೀತ ಹೇಳಿಯೋ ಅಥವಾ ಬೇರೆ ಯಾವುದಾದರೂ ರೀತಿಯಲ್ಲೋ ಅವರನ್ನು ಸಂತೋಷಪಡಿಸಿದ ಮಾತ್ರಕ್ಕೇ ಇನಾಂಗಳನ್ನು ಪಡೆಯುತ್ತಿದ್ದರು. ಹೀಗಿರುವಾಗ ಇವುಗಳಿಗೆ ಸರ್ಕಾರ ಹಣ ಕೊಟ್ಟು ತೆಗೆದುಕೊಳ್ಳುವುದರಲ್ಲಿ ಅರ್ಥವಿಲ್ಲವೆಂದು ನನ್ನ ಭಾವನೆ. ಒಂದು ವೇಳೆ ನಿಜವಾಗಿ ಹೀಗೆ ಪರಿಹಾರ ಕೊಡದೆ ತೆಗೆದುಕೊಳ್ಳಲು ನಮ್ಮ ರಾಜ್ಯಾಂಗ ಅಡ್ಡಿ ಬರುವುದಾದರೆ ಒಂದು 'ನಾಮಿನಲ್' ಆಗಿ ಸ್ವಲ್ಪ ಪರಿಹಾರ ಕೊಡಬಹುದೇ ವಿನಾ ಅವರು ಕೇಳತಕ್ಕಷ್ಟು ಹಣವನ್ನು ಕೊಡುವುದು ನ್ಯಾಯವಲ್ಲವೆಂದು ನನ್ನ ಭಾವನೆ.

ಅಧ್ಯಕ್ಷರು.—ನೀವು ಈ ಪರಿಹಾರದ ಸಂಬಂಧವಾಗಿ ತಿದ್ದುಪಡಿಯನ್ನೇನೂ ಕಳುಹಿಸಿಲ್ಲ.

ಶ್ರೀ ಟಿ. ಹನುಮಯ್ಯ.—ಹಿಂದೆ ನಾನೂ ಸೆಲೆಕ್ಟ್ ಕಮಿಟಿಯಲ್ಲಿದ್ದೆ. ಆಗ ಯಾವ ಉದ್ದೇಶವಿತ್ತೋ ಆ ಉದ್ದೇಶವನ್ನು ಈಗ ನೆರವೇರಿಸಿಲ್ಲವೆಂದು ನನ್ನ ಭಾವನೆ. ಆ ಮಸೂದೆ ಲ್ಯಾಪ್ಸ್ ಆಯಿತು. ಆದರೂ ಇದರಿಂದ ನಮಗೆ ನಿಜವಾದ ಫಲ ಬರುವುದಿಲ್ಲವೆಂದು ನನ್ನ ಭಾವನೆ.

ಈಗಿನ ಮಾರ್ಕೆಟ್ ಬೆಲೆಯ ಪ್ರಕಾರ ಲೆಕ್ಕ ಹಾಕಿ ಅದರ ಅರ್ಧದಷ್ಟು ಅಥವಾ ಮುಕ್ಕಾಲರಷ್ಟು ಪರಿಹಾರಕೊಡಬೇಕೆಂದು ಹೇಳುತ್ತಿದ್ದಾರೆ. ಈಗಾಗಲೇ ಅನೇಕ ಇನಾಂದಾರರು ಈ ಮಸೂದೆ ಬರುವುದಕ್ಕಿಂತ ಮುಂಚಿತವಾಗಿಯೇ ತಮ್ಮಲ್ಲಿರುವ ಜಮೀನುಗಳನ್ನು ಮಾರಾಟಮಾಡಿ ಅನೇಕ ರೈತರು ದಿಕ್ಕಾಪಾಲಾಗಿದ್ದಾರೆಂಬುದರಲ್ಲಿ ಅನುಮಾನವಿಲ್ಲ, ಹೀಗೆ ಹೇಳಿದರೆ ತಪ್ಪಲ್ಲ. ಈ ಹೊತ್ತು ಜೋಡಿದಾರರೂ ಇನಾಂದಾರರೂ ಏನುಮಾಡಿದ್ದಾರೆಂದು ನೋಡಿದರೆ, 25 ವರ್ಷ ಮೂವತ್ತು ವರ್ಷಗಳಿಂದ ತಮ್ಮ ಜೊತೆಗೆ ಕೆಲಸ ಮಾಡಿಕೊಂಡು ಜಮೀನು ಸಾಗುವಳಿ ಮಾಡಿಕೊಂಡಿದ್ದ ರೈತರಿಗೆ ಅನೇಕ ವಿಧವಾಗಿ ಆಶೆಗಳನ್ನು ಹುಟ್ಟಿಸಿದ್ದು, ಈ ಮಸೂದೆ ಬಂದ ಕೂಡಲೆ ರೈತರಿಗೆ ಜಮೀನೇ ಇಲ್ಲದಂತೆ ಮಾಡಲು, ಸ್ಥಾನವೇ ಇಲ್ಲದಂತೆ ಮಾಡಲು ಅವರಿ ದಕಾಗದ ಪತ್ರಗಳನ್ನೂ ತೆಗೆದುಕೊಂಡುಬಿಟ್ಟು ಜೋಡಿದಾರರು ಇತರರಿಗೆ ಅನೇಕ ಜಮೀನುಗಳನ್ನು ಮಾರಾಟಮಾಡಿದ್ದಾರೆ. ಆದುದರಿಂದ, ಮಾನ್ಯ ಮಂತ್ರಿಗಳು ಹೇಳಿದಂತೆ, ನಿಜವಾಗಿಯೂ ಈ ಮಸೂದೆ ಬಹಳ ಅಸಮರ್ಪಕವಾಗಿದೆಯೆಂದು ಹೇಳಬೇಕಾಗಿದೆ. ಈ ಹೊತ್ತು ಪಟೇಲ ಶ್ಯಾನುಭೋಗರಿಗೆ ಈ ಮಸೂದೆ ಅನ್ವಯವಾಗುವುದಿಲ್ಲವೆಂದು ಇದರಲ್ಲಿ ನಮೂದಿಸಿದೆ. ಯಾವುದೋ ಒಂದು

ದೊಡ್ಡ ಉದ್ದೇಶವನ್ನಿಟ್ಟುಕೊಂಡು ಪಟೇಲ ಶ್ಯಾನುಭೋಗರುಗಳಿಗೆ ಇದುಅನ್ವಯವಾಗುವುದು ಒಳ್ಳೆಯದಲ್ಲವೆಂದು ಮಾಡಿರಬಹುದು. ಆದರೆ ಈ ಹೊತ್ತಲ್ಲ ನಾಳೆಯಾದರೂ ಅವರಿಗೂ ಇದು ಬರಲೇ ಬೇಕಾಗುತ್ತದೆ. ಚಿಕ್ಕ ಚಿಕ್ಕ ಗ್ರಾಮಗಳಲ್ಲಿ 50 ಎಕರೆ 100 ಎಕರೆ ಇರುವ ಗ್ರಾಮಗಳ ಪಟೇಲ ಶ್ಯಾನುಭೋಗರನ್ನೇನೋ ಕೈಬಿಟ್ಟಿದ್ದೇವೆಂದು ಮಾಡಿದರೆ, ಇದೇ ರೀತಿ ದೊಡ್ಡ ದೊಡ್ಡವರನ್ನೂ ಬಿಡಬೇಕಾಗುತ್ತದೆಂದೂ ಹೇಳಿದ್ದಾರೆ. ನಿಜವಾಗಿಯೂ ಪ್ರಜಾಪ್ರಭುತ್ವವಿರುವ ದೇಶದಲ್ಲಿ ಈ ರೀತಿ ಅವರನ್ನು ಕೈಬಿಡುವುದು ಸರಿಯಲ್ಲ. ಅಲ್ಲದೆ ಮಾತ್ರೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ದೊಡ್ಡ ದೊಡ್ಡ ಜಹಗೀರಿಗಳಿವೆ. Secular State ಆಗಿರುವ ನಮ್ಮ ದೇಶದಲ್ಲಿ ಜಾತಿಯ ಭಾವನೆಯನ್ನಿಟ್ಟುಕೊಂಡು, ಒಂದು ಮಠವಾಗಲಿ, ದೇವಸ್ಥಾನವಾಗಲಿ, ಈ ರೀತಿ ಜಮೀನನ್ನಿಟ್ಟುಕೊಂಡು ಬೆಳಸಿಕೊಂಡು ಬರುವುದು ಸರಿಯಲ್ಲವೆಂದು ನನ್ನ ಭಾವನೆ. ಏಕೆಂದರೆ, ನೂರಾರು ವರ್ಷಗಳಿಂದ ಬೆಳೆಸಿಕೊಂಡು ಬಂದಿರುವುದನ್ನೇ ಈಗಲೂ ಅದೇ ಮನೋಭಾವವನ್ನಿಟ್ಟುಕೊಂಡು ಅವುಗಳನ್ನುಳಿಸಿ, ಈ ಮಸೂದೆಯಲ್ಲಿ ಕೈಬಿಟ್ಟುಬಿಡುವುದು ಸರಿಯಲ್ಲ.

ಶ್ರೀ ವಿ. ವೆಂಕಟಪ್ಪ (ಚೆನ್ನಪಟ್ಟಣ).—ಕೈಬಿಟ್ಟಿರುವುದು ಎಂದರೇನು !

ಶ್ರೀ ಟಿ. ಹನುಮಯ್ಯ.—ಅವುಗಳನ್ನು exclude ಮಾಡಿರುವುದು ಸರಿಯಲ್ಲ, include ಮಾಡಬೇಕೆಂದು ನನ್ನ ಭಾವನೆ.

ಕೊನೆಯದಾಗಿ, ಜೋಡಿದಾರರಿಗೂ ಇನಾಂದಾರರಿಗೂ ಕೊಡತಕ್ಕ ಪರಿಹಾರದ ಮೊತ್ತ ಈ ಮಸೂದೆಯಲ್ಲಿ ನಮೂದಾಗಿರುವುದು ಬಹಳ ಜಾಸ್ತಿಯಾಗಿದೆ. ಸರ್ಕಾರದವರು ಇವರಿಗೆ ಪರಿಹಾರ ಕೊಡುವಾಗ ಒಂದು 'ನಾಮಿನಲ್' ದರದಂತೆ ಲೆಕ್ಕಾಚಾರ ಹಾಕಿ ಕೊಟ್ಟರೆ ಸಾಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಈ ಮಸೂದೆಯನ್ನು ಸ್ವಾಗತಿಸುತ್ತಾ ಇದು ಈಗಿನ ಕಾಲಕ್ಕೆ ಎಷ್ಟರಮಟ್ಟಿಗೆ ಮತ್ತು ಈಗಿನ ಪ್ರಜಾ ಸರ್ಕಾರದ ತತ್ವಗಳಿಗೆ ಎಷ್ಟರಮಟ್ಟಿಗೆ ಅನುಗುಣವಾಗಿದೆಯೆಂಬುದನ್ನು ತಿಳಿಸಲು ನಾನೀಗ ಎದ್ದು ನಿಂತಿರುತ್ತೇನೆ. ಈ ಇನಾಂ ಜಮೀನುಗಳ ವಿಚಾರವಾಗಿ ಈಗಾಗಲೇ ಬೇಕಾದಷ್ಟು ವಾದವಿವಾದಗಳಾಗಿವೆ. ಹೆಚ್. ಬಿ. ಗುಂಡಪ್ಪಗೌಡರ ವರದಿಯಲ್ಲಿ ಸಹ ಈ ಬಗ್ಗೆ ಅನೇಕ ಶಿಫಾರ್ಸುಗಳನ್ನು ಮಾಡಿದ್ದಾರೆ. ಅದಕ್ಕನುಗುಣವಾಗಿಯೇ ಈಗ ಈ ಮಸೂದೆಯನ್ನು ತರಲಾಗಿದೆ. ಆದರೆ ಈ ಮಸೂದೆಯನ್ನು ಒಂದು ವಿಷಯವನ್ನು ಮಾತ್ರ ವಿನಾಯಿತಿ ಮಾಡಲಾಗಿದೆ. ಅದು ಯಾವುದೆಂದರೆ, ಧರ್ಮ ಸಂಬಂಧವಾದ ಮತ್ತು ಮಠ ಸಂಬಂಧವಾದಂಥ ಕೆಲವು ಇನಾಂಗಳು ಇದರಲ್ಲಿ ಸೇರಿರುವುದಿಲ್ಲ. ಆದರೆ ಈ ವಿಷಯವಾಗಿಯೂ ಸಹ ಈ ಸಭೆಯಲ್ಲಿ ಈಗಾಗಲೇ ಸ್ವಲ್ಪ ಚರ್ಚೆಗಳಾಗಿರುತ್ತವೆ. ಆದರೆ ಇದೊಂದು ಬಹಳ ನಾಜೋಕಾದ ಸಮಸ್ಯೆಯಾಗಿದೆ. ಈ ಪ್ರಜಾ ಸರ್ಕಾರದ ಪ್ರಜಾಪ್ರಭುತ್ವ ತತ್ವಗಳ ಪ್ರಕಾರ ಧರ್ಮ ಸಂಬಂಧವಾದ ವಿಷಯಗಳಿಗೆ ಒಂದು ಮಸೂದೆಯನ್ನು ತಯಾರಿಸತಕ್ಕ ಕಾಲದಲ್ಲಿ, ಇತರ ವಿಚಾರಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಒಂದು ಮಸೂದೆಯನ್ನು ತಯಾರಿಸತಕ್ಕ ಕಾಲದಲ್ಲಿ, ಈ ಎರಡಕ್ಕೂ ಎಷ್ಟರಮಟ್ಟಿಗೆ ಒಂದು ಸಮನ್ವಯ ದೃಷ್ಟಿಯನ್ನು ಇಟ್ಟು ಮಾಡಬೇಕಾಗುತ್ತದೆಯೆಂಬುದೇ ಒಂದು ವಿವಾದಾಸ್ಪದವಾದ ಸಮಸ್ಯೆ. ಆದರೆ ಇಂಥ ಒಂದು ಧರ್ಮ ಸಂಬಂಧವಾದ ಧರ್ಮ ಸಂಸ್ಥೆಗಳು ಯಾವ ರೀತಿಯಾಗಿ ನಮ್ಮ ದೇಶದಲ್ಲಿ ಬಹು ಹಿಂದಿನ ಕಾಲದಿಂದಲೂ ಪ್ರವೃದ್ಧಮಾನಕ್ಕೆ ಬಂದಿರುತ್ತವೆ ಮತ್ತು ಈಗಲೂ ಸಹ ಯಾವ ರೀತಿಯಾಗಿ ಅಭಿವೃದ್ಧಿ ಹೊಂದುತ್ತಾ ಇರುತ್ತವೆ ಎಂಬ ಅಂಶಗಳನ್ನೆಲ್ಲಾ ನಾವು ಸ್ವಲ್ಪ ಸಾವಧಾನವಾಗಿ ಆಲೋಚನೆ ಮಾಡಿ ನೋಡುವುದಾದರೆ ಈ ವಿಚಾರದಲ್ಲಿ ಅಷ್ಟೊಂದು ಭಿನ್ನಾಭಿಪ್ರಾಯಗಳಿರುವುದಕ್ಕೆ ಅವಕಾಶವಿಲ್ಲ. ಆದರೆ ಈ ಸಂಸ್ಥೆಗಳು ನಮ್ಮ ಪ್ರಾಚೀನ ಧರ್ಮಾಚರಣೆಗಳು ಶಿಥಿಲಗೊಳ್ಳುವುದಕ್ಕೆ ಅವಕಾಶ ಕೊಡದಂತೆ ಅವುಗಳನ್ನು ಕಾದು ನೋಡಿಕೊಳ್ಳಬೇಕೆಂಬ ಒಂದು ಸದುದ್ದೇಶದಿಂದ ಇವು ಸ್ಥಾಪಿಸಲ್ಪಟ್ಟಿರುವುದರಿಂದ, ಈ ದಿವಸ ಈ ಕೆಲವು ಸಂಸ್ಥೆಗಳು ಆ ಉದ್ದೇಶ ಸಫಲಗೊಳ್ಳುವಂತೆ ಅಥವಾ ಈಡೇರಿಸುವ ಕಡೆಗೆ ಅಷ್ಟು ಗಮನ ಕೊಡುತ್ತಿಲ್ಲವೆಂದು ವಾದ ಮಾಡಲು ಸ್ವಲ್ಪಮಟ್ಟಿಗೆ ಅವಕಾಶವಿದ್ದರೂ ಇರಬಹುದು. ಆದರೆ ಅಂಥ ಯಾವ ಒಂದು ಮಠ ಅಥವಾ ಧರ್ಮ ಸಂಸ್ಥೆಯಾಗಲಿ ಅದು ಹಾಗೆ ಏತಕ್ಕಾಗಿ ತನ್ನ ಕರ್ತವ್ಯದ ಕಡೆಗೆ ಅಷ್ಟಾಗಿ ಗಮನ ಕೊಡುತ್ತಿಲ್ಲವೆಂಬ ಅಂಶವನ್ನೂ ಸಹ ನಾವು ಆಲೋಚಿಸಿ ನೋಡಬೇಕಾಗಿದೆ. ಆದರೆ ಈ ದಿವಸ ನಮ್ಮ ಹಿಂದೂ ಸಂಸ್ಕೃತಿಯ ಮತ್ತು ಸಮಾಜದ ಒಂದು ಚೌಕಟ್ಟು ಎಲ್ಲಿ ಪರ್ಯವಸಾನ ಹೊಂದುತ್ತಿದೆ, ಅದು ಸರಿಯಾಗಿ ನಡೆಯುತ್ತಿದೆಯೋ ಅಥವಾ ಇಲ್ಲವೇ ಎಂಬುದನ್ನು ಈ ಧರ್ಮ ಸಂಸ್ಥೆಗಳೂ ಮತ್ತು ಪೀಠಗಳೂ ಒಬ್ಬ ಕಾವಲುಗಾರನಂತೆ ಈ ದಿವಸ ಅವುಗಳನ್ನು ಕಾದು ನೋಡಿಕೊಳ್ಳತಕ್ಕದ್ದು ಬಹಳ ಅಗತ್ಯವಲ್ಲವೇ ಎಂಬುದನ್ನೂ ಸಹ ನಾವು ಆಲೋಚನೆಮಾಡಬೇಕಾಗಿದೆ. ಹಾಗೆ ನಾವು ಈ ಒಂದು ಅಂಶವನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ನಮಗೆ ಈ ಧರ್ಮ ಸಂಸ್ಥೆಗಳೂ ಮತ್ತು ಮಠಗಳೂ ನಮ್ಮ ಮೇಲೆ ಒಬ್ಬ ಕಾವಲುಗಾರನಂತೆ ಇದ್ದುಕೊಂಡು, ನಮ್ಮನ್ನು ಯಾವಾಗಲೂ ಒಂದು ಧರ್ಮ ಮಾರ್ಗದಲ್ಲಿ ನಡೆದುಕೊಂಡು ಹೋಗುವಂತೆ ಒಂದು ಸರಿಯಾದ ಮಾರ್ಗವನ್ನು ತೋರಿಸಿಕೊಡತಕ್ಕಂಥ ಒಂದು ಮಾರ್ಗದರ್ಶಕ ಸಂಸ್ಥೆಗಳಾಗಿರುತ್ತವೆಂದು ಭಾವಿಸುವುದಕ್ಕೆ ನಮಗೆ ಅವಕಾಶವಿದೆ. ಆದರೆ ಈಗಿನ ಕಾಲಕ್ಕೆ ತಕ್ಕಂತೆ ನಾವು ನಮ್ಮ ಬುದ್ಧಿಯನ್ನು ಕಾಲಕ್ಕೆ ಸರಿಯಾಗಿ ಓಡಿಸುತ್ತ ಅಷ್ಟು ಉಗ್ರಗಾಮಿಗಳಾಗಿ ಮುಂದೆ ನುಗ್ಗಬೇಕೇ ಅಥವಾ ಕೊಂಚ ಮಂದಗಾಮಿಗಳಾಗಿ ಹಿಂದುಳಿಯಬೇಕೇ ಎಂಬುದನ್ನೂ, ಮತ್ತು ಈ ಧರ್ಮ ಸಂಸ್ಥೆಗಳೂ ಮಠಗಳೂ ಅಳಿಯಬೇಕೇ ಅಥವಾ ಉಳಿಯಬೇಕೆ, ಅಥವಾ ಇವುಗಳಿಗೆ ಕೊಟ್ಟಿರತಕ್ಕ ಅಷ್ಟೊಂದು ಆಸ್ತಿಯನ್ನು ಅವರು ಹಿಂದಿನಂತೆ ಅನುಭವಿಸಿಕೊಂಡು ಬರಲು ಅವರಿಗೆ ಇರುವಂಥ ಒಂದು ಹಕ್ಕನ್ನು ಅವರಿಗೆ ಉಳಿಸಬೇಕೇ, ಅಥವಾ ಅದು ಅವರಿಗೆ ಇರಬಾರದೇ ಎಂಬುದೇ ಈಗ ನಮ್ಮ ಮುಂದೆ ಇರತಕ್ಕಂಥ ಒಂದು ದೊಡ್ಡ ಸಮಸ್ಯೆ. ಸಾಮಾನ್ಯ ಜನಸಮುದಾಯದಲ್ಲಿರುವ ಜನರ ಓಡುತ್ತಿರುವ ಓಟದಲ್ಲೇ ಈ ಒಂದು ದೊಡ್ಡ ಸಮಸ್ಯೆಯನ್ನು ನಾವು ಆಲೋಚನೆಮಾಡತಕ್ಕದ್ದು ಅಷ್ಟು ಹಿತಕರವಾದುದಲ್ಲವೆಂಬುದನ್ನುಗಮನದಲ್ಲಿಟ್ಟುಕೊಂಡು, ಹಾಗೆ ಓಡುವ ಬುದ್ಧಿಯಲ್ಲಿ ಆಲೋಚನೆಮಾಡುವುದನ್ನು ಬಿಟ್ಟು, ನಿಂತ ಬುದ್ಧಿಯಲ್ಲಿ ಆಲೋಚನೆ ಮಾಡಿದ್ದೇ ಆದರೆ ಆಗ ನಾವು ಯಾವುದನ್ನು ಅಷ್ಟು ಆತುರವಾಗಿ ಮಾಡಬೇಕೆಂದು ಹೇಳಿರುತ್ತೇವೆಯೋ ಅದು ಅಷ್ಟು ಉಚಿತವಾ

(ಶ್ರೀ ಪಿ. ಆರ್. ರಾಮಯ್ಯ.)

ದುದಲ್ಲ ಎಂಬ ಅಂಶ ಚೆನ್ನಾಗಿ ಮನಸ್ಸಿಗೆ ನಾಟುವುದಕ್ಕೆ ಒಂದು ಅವಕಾಶ ಉಂಟಾದರೂ ಆಗಬಹುದು. ಆದರೆ ನಾನು ಈಗ, ಈ ಸಂಸ್ಥೆಗಳು ಮತಸಂಬಂಧವಾದ ಸಂಸ್ಥೆಗಳು ಆದುದರಿಂದ ನಮಗೆ ಇಂಥ ಧರ್ಮಸಂಸ್ಥೆಗಳು ಬೇಡ ಎಂದು ಹೇಳತಕ್ಕ ಮನೋಭಾವದಿಂದ ನೋಡದೆ, ನಾನೂ ಒಬ್ಬ ಜನಸಾಮಾನ್ಯನಂತೆ ವ್ಯಾಮೋಹಗಳೊಂದನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೆ ಹೇಳುವುದಾದರೆ, ಇವುಗಳ ವಿಚಾರದಲ್ಲಿ ಇನ್ನೂ ಸ್ವಲ್ಪ ಕಾಲ ತಡೆದು ನೋಡಿ ಅನಂತರ ಇವುಗಳ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ಉತ್ತಮವಾದುದೆಂದು ಹೇಳುತ್ತೇನೆ. ಈ ರೀತಿ ನಾನು ತಿಳಿಸುವ ಉದ್ದೇಶಕ್ಕೆ ಸಾಕ್ಷಿಯಾಗಿರುವಂಥ ನಿದರ್ಶನಗಳು ಪ್ರಪಂಚದಲ್ಲಿ ಅನೇಕವಾಗಿರುತ್ತವೆ. ನಾನು ಅಂಥ ನಿದರ್ಶನಗಳನ್ನು ತಮ್ಮ ಗಮನಕ್ಕೆ ತರಬೇಕೆಂದರೆ ನೂರಾರಿರುತ್ತವೆ. ಅಷ್ಟೊಂದು ನಿದರ್ಶನಗಳು ಇಡೀ ಪ್ರಪಂಚದ ಪ್ರತಿಯೊಂದು ರಾಷ್ಟ್ರದಲ್ಲಿಯೂ ಇರುವುದರಿಂದ ಈ ವಿಷಯದಲ್ಲಿ ನಾವು ಅಷ್ಟರಮಟ್ಟಿಗೆ ಒಂದು ಓದುವ ದೃಷ್ಟಿಯಿಂದ ಇವುಗಳನ್ನು ವಿಮರ್ಶೆಮಾಡತಕ್ಕದ್ದು ನ್ಯಾಯವಲ್ಲವೆಂದು ತಿಳಿಸಿದರೆ ಇದು ತಪ್ಪಾಗಲಾರದು. ಉದಾಹರಣೆಗೆ ಹೇಳುವುದಾದರೆ, ಈ ದಿವಸ ಪ್ರಪಂಚದಲ್ಲೇ ಬಹಳ ಮುಂದುವರಿದ ರಾಷ್ಟ್ರ ಮತ್ತು ಜನಾಂಗವೆಂದು ನಾವು ಯಾರನ್ನು ಕರೆಯುತ್ತಿದ್ದೇವೆಯೋ ಅಂಥ ರೋಂನಲ್ಲಿ ಈ ದಿವಸ ಈ ಧಾರ್ಮಿಕ ಸಂಸ್ಥೆಯ ಬಗ್ಗೆ ಒಬ್ಬರ ಪೋಪ್ ಎಂಬುವರಿದ್ದಾರೆ. ಅವರಿಗೆ ಹೀಗೆ ಬರಿ ಒಂದು ಧಾರ್ಮಿಕ ವಿಚಾರದಲ್ಲೇ ಅಲ್ಲದೆ ರಾಜಕೀಯದಲ್ಲಿಯೂ ಸಹ ದೊಡ್ಡ ಗೌರವ ಇದೆ. ಅವರು ಇಡೀ ರೋಂ ರಾಜ್ಯದಲ್ಲಿರತಕ್ಕ ರೋಮನ್ ಕ್ಯಾಥೊಲಿಕ್ ಜನಗಳಿಗೆಲ್ಲಾ ಗುರುವಾಗಿದ್ದಾರೆ. ಅವರಿಗೆ ಒಂದು ದೊಡ್ಡ ಪೂಜ್ಯಸ್ಥಾನವನ್ನು ಸಮಾಜದಲ್ಲಿ ಕೊಟ್ಟಿರುತ್ತಾರೆ. ಎಂದರೆ ಯಾವ ಒಂದು ಜನಾಂಗ ಈ ದಿವಸ ಇಡೀ ಪ್ರಪಂಚದಲ್ಲಿಯೇ ಬಹಳ ನಾಗರಿಕತೆಯಲ್ಲಿ ಮುಂದೆ ಮುಂದೆ ಬಹಳ ವೇಗವಾಗಿ ಓಡುತ್ತಿದೆಯೋ ಅಂಥ ಒಂದು ಜನಾಂಗ ಸಹ ಈ ದಿವಸ ಆ ಗುರುಗಳನ್ನು ಕಿತ್ತುಹಾಕುವುದಕ್ಕಾಗಲಿ ಅಥವಾ ಬದಲಾವಣೆ ಮಾಡುವುದಕ್ಕೇ ಆಗಲಿ ಹೋಗದೆ ಅವರಿಗೆ ಒಂದು ದೊಡ್ಡ ಗೌರವ ಮತ್ತು ಸ್ಥಾನಮಾನಗಳನ್ನು ಇಡೀ ಯೂರೋಪಿನಲ್ಲೇ ಒದಗಿಸಿಕೊಟ್ಟಿದ್ದಾರೆ. ಅವರ ವಿಚಾರದಲ್ಲಿ ಅಲ್ಲಿರುವ ಜನಗಳು ಎಂದೂ ಒಂದು ಅವಾಚ್ಯ ಶಬ್ದವನ್ನು ಉಪಯೋಗಿಸುವುದಿಲ್ಲ. ಅಂಥ ಒಂದು ಸ್ಥಾನಮಾನ ನಮ್ಮ ದೇಶದಲ್ಲಿಯೂ ಸಹ ಈ ಧಾರ್ಮಿಕ ಸಂಬಂಧವಾದ ಸಂಸ್ಥೆಗಳಿಗೆ ಕೊಡಬೇಕಾದದ್ದು ಅಗತ್ಯವೆಂದು ಭಾವಿಸತಕ್ಕರಲ್ಲಿ ನಾನೂ ಒಬ್ಬನಾಗಿದ್ದೇನೆ. ಆದರೆ ನಾವು ಈ ದಿವಸ ನಮ್ಮ ಇತಿಹಾಸದಲ್ಲಿ ಶೃಂಗೇರಿ ವಿಚಾರವನ್ನೇ ಈಗ ತೆಗೆದುಕೊಳ್ಳೋಣ. ಇದಕ್ಕೆ ಒಂದು ವಿಶೇಷ ಸ್ಥಾನ ಇದೆ. ಧಾರ್ಮಿಕ ಮತ್ತು ರಾಜಕೀಯಗಳೆರಡರಲ್ಲೂ ಇದಕ್ಕೆ ಒಂದು ಗೌರವ ಇದೆ. ಆದರೆ ನಾವು ಈ ದಿವಸ ಇದಕ್ಕೆ ಅಂಥ ಒಂದು ದೊಡ್ಡ ಸ್ಥಾನವನ್ನು ಕೊಡದೆ ಹೋದಾಗ್ಗೂ, ನಮ್ಮ ಸಮಾಜದ ಸಂಸ್ಕೃತಿಗೆ ತಕ್ಕಂಥ ಒಂದು ಸ್ಥಾನವನ್ನಾದರೂ ಇದಕ್ಕೆ ಕೊಡಬೇಕಾಗಿದೆ. ಹಾಗೆ ನಾವು ಒಂದು ಸ್ಥಾನವನ್ನು ಈ ದಿವಸ ಕೊಟ್ಟರೆ ಇದಕ್ಕೆ ಐತಿಹಾಸಿಕವಾಗಿ ಬಹಳ ಹಿಂದಿನಿಂದಲೂ ಕೊಟ್ಟುಕೊಂಡು ಬಂದಿದ್ದಂಥ ಒಂದು ಗೌರವವನ್ನು-ನಾವು ಈ ದಿವಸ ಕಾಪಾಡಿಕೊಂಡು ಬಂದಂತಾಗುವುದು. ಇಂಥ ಸ್ಥಾನಮಾನ ಗೌರವಗಳನ್ನು ನಾನು ಕೇವಲ ಶೃಂಗೇರಿಗೊಂದಕ್ಕೇ ಕೊಡಬೇಕೆಂದು ಹೇಳಲು ಹೋಗದೆ, ಅಂಥ ಪ್ರತಿಯೊಂದು ಗೌರವ ಘನತೆಗಳನ್ನು ಇರತಕ್ಕ ಎಲ್ಲ ಮತೀಯರ ಧಾರ್ಮಿಕ ಸಂಸ್ಥೆಗಳಿಗೂ ಸಹ ಕೊಡಬೇಕೆಂದು ಹೇಳತಕ್ಕವನಾಗಿದ್ದೇನೆ. ಹಾಗೆ ತಾವು ಗೌರವ ಕೊಡತಕ್ಕದ್ದನ್ನು ನಾನು ಬಹಳವಾಗಿ ಗೌರವಿಸುತ್ತೇನೆ. ಈ ವಿಚಾರದಲ್ಲಿ ಪ್ರಪಂಚದ ಇತರ ಜನಾಂಗಗಳು ಹೇಗೆ ಸಾವಧಾನದಿಂದ ವರ್ತಿಸುತ್ತವೆಯೋ ಅದೇ ರೀತಿ ನಾವೂ ವರ್ತಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಇನ್ನೂ ಹತ್ತಾರು ವರ್ಷಗಳ ಕಾಲ ಇಂಥ ಒಂದು ಮಸೂದೆಯನ್ನು ಈ ಧಾರ್ಮಿಕ ಸಂಸ್ಥೆಗಳಿಗೆ ಅನ್ವಯಿಸುವುದನ್ನು ಕೊಂಚ ಹಿಂದಕ್ಕೆ ಇಟ್ಟು, ಪ್ರತಿಯೊಂದು ಮತಗಳೂ ಅವರವರ ಧಾರ್ಮಿಕ ಸಂಸ್ಥೆಗಳಿಂದ ಇನ್ನೂ ಕೊಂಚ ಕಾಲ ಧಾರ್ಮಿಕಸಂಬಂಧವಾಗಿ ಏನೇನು ಲಾಭಗಳನ್ನು ಹೊಂದಬೇಕೆಂದು ಅಪೇಕ್ಷೆ ಇಟ್ಟುಕೊಂಡಿದ್ದಾರೋ ಅವುಗಳೆಲ್ಲ ಇಲ್ಲಿ ಸಂಪೂರ್ಣವಾಗಿ ಈಡೇರುವ ತನಕ ಈ ಮಠ ಮತ್ತು ದೇವಸ್ಥಾನ, ಇತ್ಯಾದಿ ಧಾರ್ಮಿಕ ಸಂಸ್ಥೆಗಳನ್ನು ಮುಂದುವರಿಸಿಕೊಂಡು ಬಂದು, ಈ ಸಂಸ್ಥಾನ ಏನು ಒಂದು ಸೆಕ್ಯುಲರ್ ಭಾವನೆಯನ್ನು ಇಲ್ಲಿಯತನಕ ತೋರಿಸಿಕೊಂಡು ಒಂದು ಉದಾರ ಭಾವನೆಯಿಂದ ವರ್ತಿಸಿಕೊಂಡು ಬಂದಿದೆಯೋ ಅದಕ್ಕೆ ಮನ್ನಣೆಕೊಟ್ಟುಕೊಂಡು ಅನಂತರ ಬೇಕಾದರೆ ಈ ಸಂಸ್ಥೆಗಳ ವಿಚಾರ ಪರಿಶೀಲನೆ ಮಾಡೋಣ. ಈ ಮಠ ಮತ್ತು ಈ ಸಂಬಂಧವಾದ ಧಾರ್ಮಿಕ ಸಂಸ್ಥೆಗಳ ಇರುವಿಕೆಗೂ ಒಂದು ಮೂಲ ಕಾರಣವಿದ್ದೇ ಇದೆ. ಆದುದರಿಂದಲೇ ಈ ಮಸೂದೆಯ ಉದ್ದೇಶ ಮತ್ತು ವಿವರಣೆಯಲ್ಲಿ ಸಹ ಈ ಸಂಸ್ಥೆಗಳನ್ನು ಉಳಿಸುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. ಅದನ್ನು ನಾವು ಉಳಿಸಿಕೊಳ್ಳುವುದಕ್ಕೆ ಈಗ ಪ್ರಯತ್ನ ಪಡೋಣವೆಂದು ನಾನು ತಮ್ಮೆಲ್ಲರಲ್ಲೂ ವಿಜ್ಞಾಪನೆ ಮಾಡಿಕೊಂಡು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಮಾನ್ಯ ಅಧ್ಯಕ್ಷರೇ, ಈ ದಿನ ಸಭೆಯ ಮುಂದೆ ಮಾನ್ಯ ರೆವೆನ್ಯೂ ಮಂತ್ರಿಗಳು ಮಂಡಿಸಿರತಕ್ಕ The Mysore (Personal and Miscellaneous) Inam Bill, 1953, ಮಸೂದೆಯನ್ನು ನಾನು ತೀವ್ರವಾಗಿ ವಿರೋಧಿಸಬೇಕಾಗಿದೆ.

ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸತಕ್ಕ ಕಾಲದಲ್ಲಿ ಭಾಷಣಮಾಡುತ್ತ ಇದೊಂದು ಬಹಳ ಮಹತ್ತರವಾದಂಥ ದಿನ ಎಂದು ಒಂದು ಅಂಶವನ್ನು ಪ್ರಸ್ತಾಪಮಾಡಿದ್ದಾರೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸು ಸ್ವರಾಜ್ಯ ಪಡೆಯುವ ಮುನ್ನವೇ ಭೂಮಿಯನ್ನು ಉಳುವವನಿಗೂ ಮತ್ತು ಸರ್ಕಾರಕ್ಕೂ ಮಧ್ಯೆ ಇರತಕ್ಕ ಮಧ್ಯವರ್ತಿ ಜನಗಳು ಇರಬಾರದೆಂಬ ತತ್ವವನ್ನು ಒಪ್ಪಿಕೊಂಡಿತ್ತು. ಆ ಮಾರ್ಗದಲ್ಲಿ ಇಟ್ಟರತಕ್ಕ ಅನೇಕ ಹೆಜ್ಜೆಗಳಲ್ಲಿ ಈ ಬಿಲ್ಲನ್ನು ತಂದಿರತಕ್ಕದ್ದೂ ಕೂಡ ಒಂದೆ ಹೆಜ್ಜೆಯೇ ಆಗಿರುತ್ತದೆಯೆಂದು ಅಪ್ಪಣೆಕೊಡಿಸಿದ್ದಾರೆ. ಆದರೆ ಈ ಮಸೂದೆಯ ಬಗ್ಗೆ ಚರ್ಚೆಗಾರಂಭಿಸುವುದಕ್ಕೆ ಮುಂಚೆ ನಾನು ಕೆಲವು ವಿಷಯಗಳನ್ನು ಹೇಳಬೇಕಾಗಿದೆ.

ಡಾಕ್ಟರ್ ಲೋಹಿಯಾರವರು ಕಾಂಗ್ರೆಸ್ಸು ಸರ್ಕಾರ ಭೂಸಮಸ್ಯೆಯ ಬಗ್ಗೆ ತಳೆದ ನೀತಿಯನ್ನು ಕುರಿತು ಬಹು ಮುಖ್ಯವಾದ ಮಾತುಗಳನ್ನು ಹೇಳಿದ್ದಾರೆ. ಈ ಕಾನೂನು ಮುಖಾಂತರ ಕೆಲವು ಮೂಲಭೂತ ಸಮಸ್ಯೆಗಳನ್ನು ಬಡಿಸುವ ಬಗ್ಗೆ ಕಾಂಗ್ರೆಸ್ ಯಾವ ರೀತಿಯ

ಮನೋಭಾವವನ್ನು ತಾಳಿದೆಯೆಂದರೆ "ಕಾನೂನ್ ಕೆ ಜಂಗಲ್‌ಮೆ ಘುಸ್ಕರ್ ಉಸ್ಕೆ ಫೇಡ ಔರ್ ಪತ್ತೆ ಗಿನ್ನೆ ಲಗೆ" ಎಂದು ಹೇಳುವಹಾಗೆ ಇದೆ. ಎಂದರೆ ಕಾನೂನು ಎಂಬ ಕಾಡಿನೊಳಗೆ ನುಗ್ಗಿ ಕಾನೂನೆಂಬ ಮರದ ಕೊಂಬೆ, ಹರೆ, ಎಲೆ ಇತ್ಯಾದಿಗಳನ್ನು ಲೆಕ್ಕಹಾಕುವುದಕ್ಕೆ ಹೊರಟಂತೆ ಇದೆ. 1947ನೆಯ ಇಸವಿ ಆಗಸ್ಟ್ 15ನೆಯ ತಾರೀಖು ರಾತ್ರಿ 12 ಘಂಟೆ ವೇಳೆಯಲ್ಲಿ ಏನು ಒಂದು Zero hour ಬಂದಿತ್ತೋ ಅದು ಇಡೀ ಭಾರತದ ಇತಿಹಾಸದಲ್ಲೇ ಒಂದು ಮಹತ್ತರವಾದಂಥ ಕ್ಷಣವಾಗಿತ್ತು ಮತ್ತು ಒಂದು ಕ್ರಾಂತಿಕಾರಕ ಕ್ಷಣವೂ ಆಗಿತ್ತು. ಅಂಥ ಒಂದು ಮಹತ್ವಪೂರಿತವಾದಂಥ ಕ್ಷಣವನ್ನು ಕಾಂಗ್ರೆಸ್ ಸರ್ಕಾರ ವ್ಯರ್ಥವಾಗಿ ಕಳೆದುಕೊಂಡಿತು. ಆ ಒಂದು ಕ್ಷಣದಲ್ಲಿ ಎಷ್ಟೋ ಮಹತ್ತರವಾದಂಥ ಬದಲಾವಣೆಗಳನ್ನು ಕಾನೂನ್ ಮುಖಾಂತರ ಮಾಡತಕ್ಕಂಥ ಅವಕಾಶವಿತ್ತು. ಅಂಥ ಮಹತ್ವಪೂರಿತವಾದ ಕ್ಷಣವಾಗಿತ್ತು ಅದು. ಅಂಥ ಒಂದು ದಿವಸ ನಮ್ಮ ಇಡೀ ಇತಿಹಾಸದಲ್ಲೇ ಎಂದೂ ಬಂದಿರಲಿಲ್ಲ. ಇನ್ನು ಮುಂದೆಯೂಕೂಡ ಅಂಥ ಕ್ಷಣ ಬರುವುದಿಲ್ಲ. ಆದರೆ ಅಂಥ ಒಂದು ಕ್ಷಣವನ್ನು ಕಳೆದುಕೊಂಡು ಈಗ ಇಂಥ ಒಂದು ವೇಳೆಯಲ್ಲಿ ಈ ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡಬೇಕೆಂದು ಹೊರಟಿರುವಾಗ ರಾಜ್ಯಾಂಗದ ಅನೇಕ ತೊಡಕುಗಳು ಬಂದಿರುತ್ತವೆ ಎಂದು ಹೇಳಿದ್ದಾರೆ.

ನಮ್ಮ ಸಂಸ್ಥಾನದಲ್ಲಿ ಈ ಭೂಸುಧಾರಣಾ ಸಮಸ್ಯೆ ಈಗ ಎರಡನೆಯಾವರ್ತಿಗೆ ಸಭೆಯ ಮುಂದೆ ಬರುತ್ತಿದೆ. ಆದರೆ ನಾನೀಗ ಆ ಟೆನೆನ್ಸಿ ಆಕ್ಟಿನಬಗ್ಗೆ ಅಷ್ಟು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ಸಾಕಾಗಿದೆ. ಇತರ ಪ್ರಾಂತಗಳಾದ ಮದ್ರಾಸ್, ಬೊಂಬಾಯಿ ಇತ್ಯಾದಿ ಭಾಗಗಳಲ್ಲಿ ಜಾರಿಯಲ್ಲಿರತಕ್ಕ ಕಾನೂನನ್ನೂ ಈ ಕಾನೂನನ್ನೂ ಹೋಲಿಸಿನೋಡಿದರೆ ಇದು ಒಂದು ಕಾನೂನೇ ಅಲ್ಲ. ಇಂಥ ಒಂದು ಕಾನೂನನ್ನು ಮಾಡುವುದರಿಂದ ರೈತರ ಯಾವ ಹಿತರಕ್ಷಣೆಯನ್ನೂ ಮಾಡುವುದಕ್ಕಾಗುವುದಿಲ್ಲ. ಹೀಗೆ ಇಂಥ ಮಸೂದೆಯನ್ನು ತರುವುದರ ಅರ್ಥವೇನೆಂದರೆ, ತಮಗೆ ಆ ರೈತರ ಹಿತರಕ್ಷಣೆ ಮಾಡಬೇಕೆಂಬ ಬಗ್ಗೆ ಒಂದು ಅಭಿಲಾಷೆ ಅಷ್ಟಾಗಿ ಇರುವುದಿಲ್ಲವೆಂಬುದು. ಈ ಮಸೂದೆ ಎರಡನೆಯ ಆವರ್ತಿಗೆ ಈಗ ಸಭೆಯ ಮುಂದೆ ಬಂದಿದೆ. ಹಿಂದೆಯೇ ಒಮ್ಮೆ ಬಂದಿತ್ತು. ದುರದೃಷ್ಟವಶಾತ್ ಆಗಿದ್ದ ಅಸೆಂಬ್ಲಿಗೆ ತನ್ನ ಕಾಲ ಮೀರಿಹೋಗಿ ರದ್ದಾಗಿ ಹೋದ್ದರಿಂದ ಆ ಬಿಲ್ಲೂಕೂಡ ಹಾಗೆಯೇ ರದ್ದಾಗಿ ಹೋಯಿತೆಂದು ಹೇಳಲಾಯಿತು. ನನಗೆನ್ನಿಸುತ್ತಿದೆ, ನಮ್ಮ ದೇಶದಲ್ಲಿ ಇನ್ನೂ ರೈತರ ರಾಜ್ಯ ಉದಯವಾಗಿಲ್ಲ ಎಂದು. ಒಂದು ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಿಮ್ಮಿಂದ ಅಂಥ ರೈತರ ರಾಜ್ಯ ನಮ್ಮ ದೇಶದಲ್ಲಿ ಉದಯವಾಗುವ ಸಂಭವಕೂಡ ಇಲ್ಲ ಎಂದು. ಇಂಥ ಒಂದು ಕಾನೂನನ್ನು ಬಹಳ ಹಿಂದೆಯೇ ತರಬೇಕಾಗಿತ್ತು. ಹಳೆಯ ಪದ್ಧತಿಗಳು ನಾಮಾವಶೇಷವಾಗಿ ಹೋದಹೊರತು ಅಂಥ ಒಂದು ಹೊಸ ರಾಜ್ಯ ಆಗುವುದಕ್ಕೆ ಈ ದಿವಸ ಅವಕಾಶವಿರುವುದಿಲ್ಲವೆಂದೂ ನಾನು ತಿಳಿಸಬೇಕಾಗಿದೆ. ಹಿಂದಿನ ಹಳೆಯ ಸಮಾಜಪದ್ಧತಿಗಳು ಅಳಿಯಬೇಕು, ಹೊಸ ಸಮಾಜ ನಿರ್ಮಾಣವಾಗಬೇಕು ಎಂದು ವಾದಿಸತಕ್ಕ ತಾವು ಈ ದಿವಸ ಮಂಡಿಸಿರತಕ್ಕ ಈ ಮಸೂದೆಯಲ್ಲಿ ಹೇಳಿರುವುದನ್ನು ನೋಡಿದರೆ "ಅಕ್ಕಿಯಮೇಲೆ ಆಸೆ ನೆಂಟರ ಮೇಲೆ ಪ್ರೀತಿ" ಎನ್ನುವಹಾಗಿದೆ. ಈ ರೀತಿಯ ಮನೋಭಾವ ಇರುವುದರಿಂದ ತಾವು ಯಾವ ಒಂದು ಪ್ರಗತಿದಾಯಕ ಮಾರ್ಗದಲ್ಲೂ ಹೋಗುವುದಕ್ಕೆ ಸಾಧ್ಯವಿಲ್ಲ. ಇಂಥ ಒಂದು ಮನೋಭಾವವನ್ನಿಟ್ಟುಕೊಂಡು ತಾವು ಒಂದು ಹೊಸ ರಾಜ್ಯವನ್ನಾಗಲಿ ಅಥವಾ ಒಂದು ಹೊಸ ಸಮಾಜವನ್ನಾಗಲಿ ಕಟ್ಟುವುದಕ್ಕೆ ಖಂಡಿತ ಸಾಧ್ಯವಿಲ್ಲ. ಈ ಕಾಂಗ್ರೆಸ್ ಸರ್ಕಾರದ ಮನೋಭಾವವೆಲ್ಲಾ ಆ ಪಟ್ಟಭದ್ರತೆಯಕಡೆಗೆ ಇರುವಷ್ಟು ಇತ್ತಕಡೆಗಿಲ್ಲ. ಆ ಪಟ್ಟಭದ್ರತೆಗೆ ಮೂಲಾಧಾರವಾದ ಒಂದು ಪಾರ್ಟಿಯ ಕೈಗೊಂಬೆಗಳಾಗಿ ತಾವು ಇದ್ದೀರಿ. ತಾವು ತಮ್ಮ ಹೆಚ್ಚಿನ ಒಂದು ನಿಗವನ್ನೆಲ್ಲಾ ಆ ಪಟ್ಟಭದ್ರತೆಯ ಪಾರ್ಟಿಗಳ ಹಿತಚಿಂತನೆಗೆ ಇಡಬೇಕಾಗಿರುವುದರಿಂದಲೂ ಮತ್ತು ಆ ಪಟ್ಟಭದ್ರತೆಯ ಪಕ್ಷದಲ್ಲೇ ಅನೇಕರಿಗೆ ಇಂಥ ಜೋಡಿ ಮತ್ತು ಇನಾಂತಿಗಳು ಹೆಚ್ಚಾಗಿರುವುದರಿಂದಲೂ ಈ ಕಾನೂನಿಗೆ ಅಷ್ಟೊಂದು ಹೆಚ್ಚಿನ ಬೆಂಬಲವಿದೆಯೆಂದು ಹೇಳುವುದಕ್ಕಾಗುವುದಿಲ್ಲ.

4 P.M.

ನಮ್ಮ ದೇಶದಲ್ಲಿ ಪರಿಸ್ಥಿತಿ ಎಷ್ಟು ಬದಲಾವಣೆಯಾಗಿದೆ, ಈ ಬದಲಾವಣೆಯಾಗಿರತಕ್ಕ ಪರಿಸ್ಥಿತಿಗೆ ಆ ಹಳೆಯ ಪದ್ಧತಿಗಳನ್ನೂ ರೀತಿನೀತಿಗಳನ್ನೂ ಹೊಂದಿಸಿಕೊಳ್ಳುವುದಕ್ಕೆ ಸಾಧ್ಯವೇ, ಅವುಗಳನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವೇ ಎಂಬ ಮಾತು ಬಹಳ ಪ್ರಬಲವಾಗಿ ನಮ್ಮ ಮುಂದೆ ಒಂದು ಸಮಸ್ಯೆಯಾಗಿ ನಿಂತಿದೆ. ಮೊನ್ನೆ ಡಾ। ರಾಧಾಕೃಷ್ಣನ್‌ರವರು ಶೃಂಗೇರಿಗೆ ಹೋಗಿಬಂದು ಶಿವಮೊಗ್ಗೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು: 'ಇತಿಹಾಸದಲ್ಲಿ ಎಷ್ಟೋ ವಿಷಯಗಳು ಕೈಬಿಟ್ಟುಹೋಗಿರುತ್ತವೆ; ಅಂದ ಮಾತ್ರಕ್ಕೇ ಆ ವಿಷಯಗಳು, ಆ ಸಂಸ್ಥೆಗಳು ಇಲ್ಲವೇ ಇಲ್ಲವೆಂದು ಭಾವಿಸಬಾರದು' ಎಂಬ ಮಹತ್ತರವಾದ ಮಾತನ್ನು ಹೇಳಿದರು.

ಒಬ್ಬ ಸದಸ್ಯರು.– ಯಾವ ಸಂದರ್ಭದಲ್ಲಿ ಹೇಳಿದ್ದು!

ಶ್ರೀ ಎಸ್. ಗೋಪಾಲ ಗೌಡ.—ಬಹಿರಂಗ ಸಭೆಯಲ್ಲಿ ಮಾತನಾಡಿದ್ದು.

ಅದೇ ಸದಸ್ಯರು.—Context ?

ಶ್ರೀ ಎಸ್. ಗೋಪಾಲಗೌಡ—ಅದನ್ನು ಹೇಳಬೇಕಾದರೆ ಅವರ ಭಾಷಣವನ್ನು ಪೂರ್ತ ಓದಬೇಕಾಗುತ್ತದೆ. ಇದನ್ನೇಕೆ ಹೇಳಿದೆನೆಂದರೆ, ಎಷ್ಟೋ ಧರ್ಮಸಂಸ್ಥೆಗಳ ಧರ್ಮಸ್ಥಳಗಳ ವಿಚಾರವನ್ನು ಅನೇಕವೇಳೆ ಚರಿತ್ರೆಯಲ್ಲಿ ಬರೆದಿಟ್ಟಿರುವುದಿಲ್ಲ ಮತ್ತು ಆ ಚರಿತ್ರೆಗೆ ತಮ್ಮ ನಿಲುವನ್ನೂ ಹೇಳುವುದಿಲ್ಲ. ಅಂದ ಮಾತ್ರಕ್ಕೇ ಆ ಧಾರ್ಮಿಕಸಂಸ್ಥೆಗಳು ಅಥವಾ ಇನ್ನೊಂದು spiritual kingdom ಇಲ್ಲವೇಇಲ್ಲವೆಂದೂ ನಾವು ಹೇಳುವುದಕ್ಕಾಗುವುದಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ನಮ್ಮ ಇಡೀ ಭೌತಿಕ–ಲೌಕಿಕ ಪ್ರಪಂಚವೇನಿದೆ ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳದೆಹೋದರೆ ವ್ಯವಹಾರ ನಡೆಯುವುದಿಲ್ಲ. ಆದ್ದರಿಂದ plain ಆಗಿ ಹೇಳುವುದಾದರೆ ಯಾವುದೋ ಒಂದು ಕಾರಣಕ್ಕಾಗಿ ಶೃಂಗೇರಿ ಜಹಗೀರಿಯನ್ನು ಉಳಿಸಿಕೊಳ್ಳಬೇಕೆಂದು ಹೊರಟು ಇಲ್ಲಿ Statement of Objects and Reasonsನಲ್ಲಿ ಒಂದು ಮಾತು ಹೇಳಿದ್ದೀರಿ.

"The State Government have again carefully considered the question of abolition of inams; they have been advised that any

(ಶ್ರೀ ಎಸ್. ಗೋಪಾಲಗೌಡ.)

> special provision in respect of Sringeri Jahagir as recommeuded by the Select Committee of tl.e Assembly in 1952, may be discriminatory and unconstitutional unless similar provisions are made for other religious inams...."

ಎಂದು ಹೀಗೆ ಬರೆದುಕೊಂಡು, ಪಾಪ! ಹಳೆಯ ಬಿಲ್ಲಿನವರು ಮಾಡಿದ್ದನ್ನು ಹಿಂದಕ್ಕೆ ಹಾಕಿ ಈಗ ಮತ್ತೊಂದು ಬಿಲ್ಲನ್ನು ತಂದಿದ್ದೀರಿ. ಇದರಲ್ಲಿ Constitutional ಆಗಿ ವಿರೋಧವಾಗಿಯೂ ಪರಿಸ್ಥಿತಿಗೆ ವಿರೋಧವಾಗಿಯೂ ವರ್ತಿಸಿ ಹೋಗುವುದಕ್ಕೆ ಅವಶ್ಯಕತೆಯಾದರೂ ಏನಿತ್ತು ಎಂದು ಕೇಳುತ್ತೇನೆ. ಈ ಬಿಲ್ಲಿನಲ್ಲಿ ನಾವು abolish ಮಾಡಿರುವುದಕ್ಕೆ ಹೊರಟಿರುವ ಭೂಮಿ 3,69,685 ಎಕರೆಯಾಗುತ್ತದೆ. ಉಳಿದಿರುವ ಭೂಮಿ 4 23,103 ಎಕರೆಗಳು. ಆದ್ದರಿಂದ ಮಾನ್ಯಗೆಳೆಯರು ಹೇಳಿದ ಹಾಗೆ, ಅರ್ಧಂಬರ್ಧ ಮಾಡಿದಂತಾಯಿತು. ಇಂಥ ಒಂದು exemption ಕೊಡಬೇಕೆಂದು ಹೇಳಿರುವುದು ಈಗಿರುವ ಅಲ್ಲಿನ ಎಲ್ಲ ಪದ್ಧತಿಗಳಿಗೂ ವಿನಾಯಿತಿಯನ್ನೇ ಕೊಟ್ಟಂತಾಯಿತು! ಅಲ್ಲಿಗೆ, ಪ್ರಗತಿಯ ಹಾದಿಯನ್ನು ತುಳಿಯುವುದಕ್ಕೆ ಸಾಧ್ಯವಿಲ್ಲದೆ, ಹಾಗೆಯೇ ಅಲ್ಲಿಯೂ ಈಗಿರುವ ಬಿದ್ದುಹೋಗುತ್ತಿರುವ ಮನೆಗಳಿಗೇ ಗುಜ್ಜು ಕೊಟ್ಟುಕೊಂಡು ಹೋಗಬೇಕೆಂದು ಹೇಳಿ ಈ ರೀತಿ ಬಿಟ್ಟಿದೆಯೆಂದು ಕಾಣುತ್ತದೆ, ಅಂದರೆ ಪ್ರಗತಿಮಾರ್ಗವನ್ನು ಅನುಸರಿಸುವ ಮನಸ್ಸು ಕಾಂಗ್ರೆಸ್ ಸರ್ಕಾರಕ್ಕೆ ಇನ್ನೂ ಬಂದಿಲ್ಲವೆಂದು ಕಾಣುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ಪಾರ್ಟಿಗೆ ಬಂದಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಇದರಲ್ಲಿ compensation ವಿಷಯ ಬಹಳ ಮುಖ್ಯವಾದುದು. ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದಕ್ಕೆ ಕೂಡ ಸಾಧ್ಯವಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಯಾರು ಇಂಥ ಸರ್ವಮಾನ್ಯಗಳನ್ನು ಈ ರೀತಿಯಲ್ಲಿ ಅನುಭವಿಸಿಕೊಂಡು ಬಂದಿರುತ್ತಾರೋ ಅವರನ್ನೇ ನಾವು ಜನತೆಗೂ ಸರ್ಕಾರಕ್ಕೂ ಪರಿಹಾರಕೊಡಬೇಕು ಎಂದು ಕೇಳುವ ಪರಿಸ್ಥಿತಿಯೂ ಬಂದಿದೆ. ಏಕೆಂದರೆ, ತಮಗೇ ಗೊತ್ತಿರುವಹಾಗೆ, ನಾವು ಕೈಕೊಂಡಿರುವ ಯೋಜನೆಗಳೇನಿವೆಯೋ ಅವಕ್ಕೆ ಹಣ ಬಹಳವಾಗಿ ಬೇಕಾಗಿದೆ; ಮತ್ತು ದೇಶದಲ್ಲಿ ಬಡಜನರೇನಿದ್ದಾರೋ ಅವರಿಗೆ ಯಾವ ತೆರಿಗೆಯನ್ನು ಕೊಡುವುದಕ್ಕೂ ಸಾಧ್ಯವಿಲ್ಲದ ಹಾಗಾಗಿದೆ. ಅವರುಗಳು ಹೆಚ್ಚು ಎಂದರೆ ತಮ್ಮ ಕೆಲಸವನ್ನು ತಮಗಾಗಿ ಕೊಡಬಲ್ಲರು, ದೇಶಕ್ಕಾಗಿ ದುಡಿಯಬಲ್ಲರು ಅಷ್ಟೆ; ಹಣದ ರೂಪದಲ್ಲಿ ಯಾವ ವರಮಾನವನ್ನೂ ಕೊಡುವ ಪರಿಸ್ಥಿತಿಯಲ್ಲಿಲ್ಲ. ಇಂದಿಗೆ ಈ ಒಂದು ಅಂಶವನ್ನೂ ಗಮನದಲ್ಲಿಟ್ಟುಕೊಂಡು compensation ಕೊಡಬಹುದು. ಅಂದರೆ, ಯಾರು ಈ ಇನಾಂತಿಯಿಂದಲೇ ಜೀವನಮಾಡಿಕೊಂಡಿದ್ದಾರೋ, ಯಾರು ಈ ಇನಾಂತಿ ರದ್ದಾಗುವುದರಿಂದ ಜೀವನಕ್ಕೆ ಆಸ್ಪದವಿಲ್ಲದೆ ಭಿಕಾರಿಗಳಾಗತಕ್ಕ ಸ್ಥಿತಿಯಲ್ಲಿರುತ್ತಾರೋ ಅವರು ಬೇರೆ ಯಾವುದಾದರೂ ಉದ್ಯೋಗಗಳನ್ನು ಅವಲಂಬಿಸುವತನಕ ಕೆಲವು ರಿಯಾಯಿತಿ-ಪರಿಹಾರಗಳನ್ನು ಅವರಿಗೆ ಕೊಡಬಹುದು. ಅಷ್ಟುಬಿಟ್ಟರೆ, ಬೇರೆ ವಿಧದಲ್ಲಿ ಚೆನ್ನಾಗಿರುವವರಿಗೂ ಪರಿಹಾರ ಕೊಡುವುದು–ಸಾರ್ವತ್ರಿಕವಾಗಿ ಪರಿಹಾರಕೊಡುವುದು ನ್ಯಾಯವಲ್ಲ. ಇದರಲ್ಲಿ ಸೂಚಿಸಿರುವಹಾಗೆ, "maximum rate of compensation is 20 times the basic income." ಎಂಬಂತೆ ಕೊಟ್ಟರೆ, ಸುಮಾರು 180 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆಂದು ಹೇಳಬಹುದು. ಈ ರೀತಿಯಾಗಿ ಒಂದು ಪರಿಹಾರವನ್ನು ಕೊಡುವುದಕ್ಕೆ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಇಷ್ಟೊತ್ತು ಉತ್ತಮವಾಗಿಲ್ಲ. ಅಷ್ಟು ಕೊಡಬೇಕು, ಅಂದರೆ ಅವರ ವಿಶಿಷ್ಟ ಹಕ್ಕನ್ನೂ ಕಿತ್ತುಕೊಳ್ಳುವಾಗ ಕಾಗದದಲ್ಲೊ ಅಥವಾ ತಾಮ್ರದಲ್ಲೊ ಒಂದು ಶಾಸನವನ್ನು ಬರೆದು ಅವರಿಗೆ ಕೊಡಬಹುದು. ಈ ರೀತಿಯಾಗಿ ದೇಶಕ್ಕೋಸ್ಕರ ತ್ಯಾಗ ಮಾಡಿರುವಂಥವರು, ದೇಶದ ಹಿತದೃಷ್ಟಿಯಿಂದ, ತಮ್ಮ ಅಣ್ಣತಮ್ಮಂದಿರ ಹಿತದೃಷ್ಟಿಯಿಂದ ಮಾಡಿದ ಈ ತ್ಯಾಗದ ಕುರುಹಾಗಿ ಇಂಥ ಒಂದು ಸರ್ಟಿಫಿಕೇಟನ್ನು ಅಥವಾ ಟೈಟಲ್‌ನ್ನು ಕೊಟ್ಟು ಈ ಪದ್ಧತಿಯನ್ನು ಇಲ್ಲಿಗೇ ಮುಕ್ತಾಯ ಮಾಡಬಹುದು.

ಇನ್ನು ಈ ಬಿಲ್ಲಿನಲ್ಲಿ ಮಾಡಿರುವ ಭೂಸುಧಾರಣೆ. ಭೂಸುಧಾರಣೆಯ ಬಗ್ಗೆ ಮೊದಲನೆಯದಾಗಿ ಇವೊತ್ತಿನ ರೈತರು ಯಾರು ಭೂಮಿಯ ಮೇಲೆ ಉಳುತ್ತಿದ್ದಾರೋ ಅವರು ಯಾವ ಪದ್ಧತಿಯ ಅಡಿಯಲ್ಲೇ ಬರಲಿ, ಸರ್ಕಾರಿ ಅಡಿಯಲ್ಲೇ ಇರಲಿ, ಜೋಡಿ–ಇನಾಂತಿಗಳ ಜೋಡಿದಾರರ ಅಥವಾ ಇನಾಂದಾರರ ಅಡಿಯಲ್ಲೇ ಇರಲಿ, ನೇರವಾಗಿ ಜಮೀನು ಹಿಡಿದು ಮಾಡುವ ರೈತರ ಸಂಖ್ಯೆಯೆಷ್ಟು ಮತ್ತು ಅವರು ಎಷ್ಟು ದಿವಸಗಳಿಂದ ರೈತಾಪಿ ಉದ್ಯೋಗ ಮಾಡಿಕೊಂಡು ಬಂದಿದ್ದಾರೆ ಎಂಬ ರೈತಾಪಿ ಸರ್ವೆ ಮಾಡಬೇಕು. ಅವರು ಯಾರು ಯಾರಿಗೆ ಗೇಣಿ, ಗುತ್ತಿಗೆ ಅಥವಾ ಇನ್ನಾವ ಬೇರೆ ಸಲುವಳಿ ಮಾಡುತ್ತಾರೆ, ಸರ್ಕಾರಕ್ಕೆ ಕೊಡುತ್ತಾರೆಯೋ, ಖಾಸಗೀ ಜನರಿಗೆ ಕೊಡುತ್ತಾರೆಯೋ ಅಥವಾ ಧರ್ಮಸಂಸ್ಥೆಗಳಿಗೆ ಕೊಡುತ್ತಿದ್ದಾರೆಯೋ, ಅವರ ಜೀವನ ಪರಿಸ್ಥಿತಿ ಹೇಗಿದೆ–ಈ ರೀತಿಯಾಗಿ ಎಲ್ಲ ರೈತರ ಒಂದು ಸರ್ವೆ ಮಾಡಿಕೊಂಡರೆ ನಾವು ಮೊದಲನೆಯ ಹೆಜ್ಜೆ ಇಟ್ಟಂತಾಗುತ್ತದೆ. ಅನಂತರ ಅವರ ದೃಷ್ಟಿಯಿಂದಲೇ ಹೆಚ್ಚಾಗಿ ಎಲ್ಲ ಸಮಸ್ಯೆಗಳನ್ನೂ ನೋಡಬೇಕು. ಆ ಸಂದರ್ಭದಲ್ಲಿ ಇನಾಂದಾರರ ಅಥವಾ ಜೋಡಿದಾರರ ಅಥವಾ ಜಮೀನ್ದಾರರ ದೃಷ್ಟಿ ಮರೆಯಬೇಕಾಗಿಲ್ಲ. ಆದರೆ ಮೊದಲು ರೈತರನ್ನು ತೆಗೆದುಕೊಂಡು ಪ್ರಾರಂಭ ಮಾಡಬೇಕಾಗುತ್ತದೆ. ಆಗ ಅವರ ಅನಾನುಕೂಲಗಳನ್ನು ಪರಿಹಾರ ಮಾಡಿಕೊಂಡು, ಅನಂತರ ಒಬ್ಬನಿಗೆ ಎಷ್ಟು ಜಮೀನಿರಬೇಕು, ಪರಮಾವಧಿಯೆಂದರೆ ಎಷ್ಟಿರಬೇಕು ಎಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಅದಾದ ಮೇಲೆ ಭೂಮಿಯನ್ನು ಅದರಂತೆ ಪುನಃ ಹಂಚಿಕೆ ಮಾಡಬೇಕು. ಈ ಪ್ರಕಾರ ಒಂದು ನೀತಿಯನ್ನನುಸರಿಸಬೇಕು. ಅದಿಲ್ಲದೆ ಇವೊತ್ತಿನ ಹಾಗೆ ದರಖಾಸ್ತು ಕೇಳುವುದು ಅದನ್ನು ವಿಲೇವಾರಿ ಮಾಡುವುದು, ತಕರಾರು ಕೇಳುವುದು, ವಾಪಸು ತೆಗೆದುಕೊಳ್ಳುವುದು ಕೊನೆಗೆ ಎರಡು ಭಾಗ ಮಾಡಿ ಜಮೀನಿರುವವರಿಗೆ ಮತ್ತೆ ಜಮೀನು ಕೊಡುವುದು—ಈ ರೀತಿಯಾದ ಒಂದು ಕಾನೂನು ಮುಖಾಂತರ ಈ ಸಮಸ್ಯೆ ಪರಿಹಾರವಾಗುತ್ತದೆಂದು ತಿಳಿದುಕೊಂಡಿದ್ದೀರಾ? ಹಾಗೆ ಯೋಚನೆ ಮಾಡಿದ್ದರೆ, ಕೊನೆಗೆ ಆ ಸಮಸ್ಯೆಯಲ್ಲೇ ನಾವೇ ಪರಿಹಾರವಾಗಿ ಹೋಗುತ್ತೇವೆ!

ಈ ರೀತಿಯಾಗಿ ನಾನು ಇದನ್ನು ಭೂ ಸುಧಾರಣೆಗೆ ಒಂದು ಹೆಜ್ಜೆ, ಎಂದು ಕರೆದರೂ ಕೂಡ ರೈತರ ಹಿತ

ದೃಷ್ಟಿಯಲ್ಲಿ ಒಂದು ಹೆಜ್ಜೆಯಲ್ಲ. ಆದರೂ ಸರ್ಕಾರ ಈ ಒಂದು ಹೆಜ್ಜೆಯಿಡುವುದಕ್ಕೂ ವಿಮುಖವಾಗಿ ಅಧೈರ್ಯ ಪರಿಸ್ಥಿತಿಯಿಂದ ಮನಸ್ಸು ಮಾಡಿಲ್ಲ! ಇಂಥ ಮಂದಗಾಮಿ ಅಥವಾ ತಿರೋಗಾಮಿ ನೀತಿಯಿಂದ ಯಾವೊತ್ತೂ ರೈತರ ಸಮಸ್ಯೆ ಪರಿಹಾರವಾಗುವುದಿಲ್ಲ. ನಿಜವಾಗಿ ಯಾವುದನ್ನು ಮೊದಲು ತಾವು ಅಪ್ಪಣೆ ಕೊಡಿಸಿದಿರಿ—'ನಾವು ಮಧ್ಯವರ್ತಿಗಳನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಒಪ್ಪಿಗೆ ಕೊಟ್ಟಿದ್ದೇವೆ'—ಎಂದು, ಅದನ್ನು ಕಾರ್ಯತಃ ಮಾಡಬೇಕಾದರೆ, ಒಂದು Comprehensive Bill ತರಬೇಕು. ಆದ್ದರಿಂದ ಭೂಸುಧಾರಣೆಗೆ ಸರಿಯಾದ ಬಿಲ್ಲನ್ನು ತರಬೇಕೆಂದು ಹೇಳಿ ನಾನು ಈ ಇನಾಂ ರದ್ದಿಯಾತಿ ಬಿಲ್ಲನ್ನು ವಿರೋಧಿಸುತ್ತೇನೆ.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಸ್ವಾಮಿ, ಶ್ರೀ ಗೋಪಾಲಗೌಡರ ಭಾಷಣವನ್ನು ನಾನು ತೀವ್ರತೆಯಿಂದ ಕೇಳಿದೆ. ಅವರ ಭಾಷಣವನ್ನು ಕೇಳಿದ ಮೇಲೆ, ಅವರು ಈ ಬಿಲ್ಲನ್ನು ಓದಿಲ್ಲ, ಹಿಂದಿನ ಬಿಲ್ಲು ಅವರಿಗೆ ಗೊತ್ತಿಲ್ಲ, ಈಗ ಅವರು ಮಾತನಾಡಿದುದು ಅವರ ಪಕ್ಷದ ತತ್ವಕ್ಕೇ ವಿರೋಧವಾಗಿದೆ, ಎಂದು ನನಗೆನ್ನಿಸುತ್ತದೆ. ಇಷ್ಟು ನಿರ್ದಿಷ್ಟವಾಗಿ..........

ಶ್ರೀ ಎಸ್. ಗೋಪಾಲಗೌಡ.—ಅವರು ಈ ಮೂರು ಅಂಶಗಳನ್ನೂ ನನಗೆ ನಿರ್ದಿಷ್ಟವಾಗಿ ತೋರಿಸಬೇಕು.

ಶ್ರೀ ಎ ಭೀಮಪ್ಪನಾಯಕ್.—ನಾಲ್ಕನೆಯದು ಭಾರತ ರಾಜ್ಯಾಂಗ ಅವರಿಗೆ ಗೊತ್ತಿಲ್ಲ ಎನ್ನುವುದು. ಈ ನಾಲ್ಕು ಅಂಶಗಳಿಗೂ ಜವಾಬು ಕೊಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಈ ರೀತಿ ಅವರು ನೇರವಾಗಿ ನನ್ನ ಮೇಲೆ ಟೀಕೆ ಮಾಡಿ, ರಾಜ್ಯಾಂಗವೇ ಗೊತ್ತಿಲ್ಲ ಎಂದು ಹೇಳುವುದು ನ್ಯಾಯವಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

Mr. SPEAKER.—Let us wait and see whether he will substantiate that argument.

ಶ್ರೀ ಎ. ಭೀಮಪ್ಪನಾಯಕ್.—ಅವರೊಬ್ಬರು ಸೋಷಿಯಲಿಸ್ಟ್ ಆಗಿ ಇದನ್ನು ವಿರೋಧಿಸುವುದು ವಿರೋಧಾಭಾಸ. ಈ ಬಿಲ್ಲನ್ನು ವಿರೋಧಿಸುತ್ತೇನೆಂದು ಹೇಳಿದರು. ಇದರಲ್ಲಿ ಏನಿದೆ ಎಂಬುದು ಇದರ Statement of Objects and Reasons ಓದಿದರೆ ಗೊತ್ತಾಗುತ್ತದೆ. ಇದರಲ್ಲಿ ಬೇರೆ ರೀತಿಯ ಇನಾಂಗಳನ್ನು ರದ್ದುಮಾಡಲು ಮಸೂದೆಯನ್ನು ತರುವುದಿಲ್ಲವೆಂದೇನೂ ಹೇಳಿಲ್ಲ. ಬೇರೊಂದು ಮಸೂದೆಯನ್ನು ತರುತ್ತೇವೆ. ಹಿಂದೆ ತಂದಿದ್ದ ಮಸೂದೆಯಲ್ಲಿ ಶೃಂಗೇರಿ ಒಂದನ್ನು ಸೇರಿಸಲಾಗಿತ್ತು. ಅದರಿಂದ, ಅದು ಸರಿಯಾಗಿರಲಿಲ್ಲವೆಂದು ಅಂಥ ಮಿಕ್ಕೆಲ್ಲ ಸಂಸ್ಥೆಗಳ ಇನಾಂಗಳನ್ನೂ ಅಡಕಮಾಡಿ ಒಟ್ಟಿಗೆ ಒಂದು ಮಸೂದೆಯನ್ನು ತರುವುದು ಉತ್ತಮವೆಂದೂ ಅಭಿಪ್ರಾಯಪಟ್ಟು ಈ ಮಸೂದೆಯಲ್ಲಿ ಶೃಂಗೇರಿಯನ್ನು ಸೇರಿಸಲಿಲ್ಲ. ಆದುದರಿಂದ ಇನಾಂಗಳನ್ನು Personal Inams and Miscellaneons Service Inams ಮತ್ತು Religious and Charitable Inams ಎಂದು ಎರಡು ಭಾಗಗಳಾಗಿ ಮಾಡಿ ಬೇರೆ ಬೇರೆಯಾಗಿ ತರಬೇಕೆಂಬ ಉದ್ದೇಶದಿಂದ, ಮೊದಲನೆಯ ಭಾಗಕ್ಕೆ ಸಂಬಂಧಪಟ್ಟ ಹಾಗೆ ಈ ಮಸೂದೆಯನ್ನು ತರಲಾಗಿದೆ ಎಂದು Statement of Objects and Reasons ನಲ್ಲಿ ಸೂಚಿಸಿದ್ದಾರೆ. ಮಾನ್ಯ ಸದಸ್ಯರು ಇನ್ನೊಂದು ಭಾಗಕ್ಕೆ ಸಂಬಂಧಪಟ್ಟ ಮಸೂದೆಯನ್ನೂ ಬೇಗ ತನ್ನಿ ಎಂದು ಬೇಕಾದರೆ ಹೇಳಲಿ; ಅದು ಬಿಟ್ಟು, ಈಗ ತಂದಿರತಕ್ಕ ಮಸೂದೆಯನ್ನು ವಿರೋಧಿಸಿದರೆ, ಇದರಿಂದ ಅವರ ಸೋಷಿಯಲಿಸ್ಟ್ ತತ್ವ ಒಂದು ಭ್ರಮೆಯ ರಾಜ್ಯಕ್ಕೆ ಸೇರಿದ್ದೆಂದು ಗೊತ್ತಾಗುತ್ತದೆ. ಮೈಸೂರು ದೇಶದಲ್ಲಿರತಕ್ಕ ಎಲ್ಲಾ ಜಮೀನನ್ನೂ ಹಂಚಿಕೆ ಮಾಡುವುದಾದರೆ ಅದಕ್ಕೆ ಒಂದು ಕಾನೂನು ತಂದರೆ ತನ್ನಿ ಇಲ್ಲದಿದ್ದರೆ ಏನೂ ಬೇಡ ಎಂದರೆ, ಪಡೆದರೆ ದೇವೇಂದ್ರನ ಐಶ್ವರ್ಯ ಪಡೆಯೋಣ, ಇಲ್ಲದಿದ್ದರೆ ಏನೂ ಬೇಡ, ಉಪವಾಸವಿರೋಣ ಎಂದು ಹೇಳುವ ಹಾಗಾಗುತ್ತದೆ........

ಶ್ರೀ ಬಿ. ಹುಚ್ಚೇಗೌಡ.—ಹಿಂದೆ ತಂದಿದ್ದ ಬಿಲ್ಲನಲ್ಲಿ ಶೃಂಗೇರಿ ಜಹಗೀರಿಯನ್ನು ರದ್ದುಮಾಡುವುದಕ್ಕೆ ಅವಕಾಶ ಮಾಡಿತ್ತು ಎಂದು ಹೇಳಿದರು, ಅದನ್ನೇಕೆ ಇಲ್ಲಿ ಬಿಡಬೇಕಾಗಿತ್ತು?

ಶ್ರೀ ಎ. ಭೀಮಪ್ಪನಾಯಕ್.—ಹಾಗಲ್ಲ, ಆ ಬಿಲ್ಲಿನಲ್ಲಿ ಶೃಂಗೇರಿ ಒಂದನ್ನು ಮಾತ್ರ ಸೇರಿಸಿತ್ತು.........

Mr. SPEAKER.—Abolition of Inam Villages—that includes Sringeri and all other Inam Villages.

ಶ್ರೀ ಎ. ಭೀಮಪ್ಪನಾಯಕ್.—ಈ ಮಸೂದೆಯ ಧ್ಯೇಯೋದ್ದೇಶಗಳಲ್ಲಿ ಏನು ಏನು ಹೇಳಿದೆಯೆಂಬುದನ್ನು ದಯೆಯಿಟ್ಟು ನೋಡಬೇಕು.

> "The State Government have again carefully considered the question of abolition of inams; they have been advised that any special provision in respect of Sringeri Jahagir as recommended by the Select Committee of the Assembly in 1952, may be discriminatory and unconstitutional unless similar provisions are made for other religious inams...."

ಎಂದರೆ ಶೃಂಗೇರಿ ಒಂದಕ್ಕೆ special provision ಮಾಡುವುದು ನ್ಯಾಯವಲ್ಲ, ಎಲ್ಲವನ್ನೂ ಸೇರಿಸಿ ಒಂದೇ ರೀತಿ ಮಾಡಬೇಕೆಂದು ಸೂಚಿಸಿದ್ದಾರೆ. ಅದಕ್ಕೆ ಇಲ್ಲ

> "It is therefore proposed to exclude for the present religious and charitable inams and undertake legislation only for the abolition of personal inams and miscellaneous service inams other than village service inams held by shanbhogs, patels, thotis, talaris and nirgantis. This Bill has accordingly been brought forward."

ಎಂದು ಹೇಳಿದೆ. ಎಂದರೆ ಬಾಕಿ ಇನಾಂಗಳನ್ನು ಹಾಗೆಯೇ ಬಿಟ್ಟುಬಿಟ್ಟೆವು, ಎಂದೇನೂ ಅರ್ಥವಾಗುವುದಿಲ್ಲ. Personal and Miscellaneous ಇನಾಂಗಳಿಗೆ ಈ ಮಸೂದೆಯನ್ನು ತಂದು ಬಾಕಿ

(ಶ್ರೀ ಎ. ಭೀಮಪ್ಪನಾಯಕ್.)

ಶೃಂಗೇರಿ ಮತ್ತು ಇತರ Religious and Charitable ಸಂಸ್ಥೆಗಳ ಇನಾಂಗಳಿಗೆ ಬೇರೊಂದು ಬಿಲ್ಲನ್ನು ತರುತ್ತೇವೆಂಬ ಅರ್ಥ ಇದರಲ್ಲಿದೆಯೇ ಹೊರತು ಬೇರೇನೂ ಇಲ್ಲ. ಕಾಂಗ್ರೆಸ್ ಸರ್ಕಾರ ಮಾಡುವುದಿಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ.

ಇನ್ನು ಶ್ರೀ ರಾಮಯ್ಯನವರು ಧಾರ್ಮಿಕ ಸಂಸ್ಥೆಗಳ ವಿಚಾರದಲ್ಲಿ ಹೇಗಿರಬೇಕೆಂಬುದನ್ನು ಕುರಿತು ದೀರ್ಘವಾಗಿ ಆಲೋಚನೆ ಮಾಡಬೇಕೆಂದು ಹೇಳಿದರು. ಎರಡು ವರ್ಷ ಕಾಲ ಕುಳಿತು ಆಲೋಚನೆ ಮಾಡಿದ್ದೇವೆ. ಬೇಕಾದರೆ ವ್ಯಾಟಿಕಾನ್ ಸ್ಟೇಟಿನಂತೆ ಮರ್ಯಾದೆ ಕೊಟ್ಟು ನಮಸ್ಕಾರ ಮಾಡೋಣ. ಆದರೆ ಅವರು ಜೋಡಿದಾರರಾಗಿದ್ದು ಅವರ ಕೈಯಲ್ಲಿ ರೈತರ ಜುಟ್ಟನ್ನು ಇಟ್ಟುಕೊಳ್ಳುವುದಕ್ಕೆ ಬದಲು, ಸಂಸ್ಥಾನದಿಂದ ಅವರಿಗೆ ದ್ರವ್ಯರೂಪದಲ್ಲಿ ಸಹಾಯ ಕೊಡೋಣ. ಇದು ಬಿಟ್ಟು, ಅವರು ಒಂದು ಕಡೆ ದೊರೆ ಇನ್ನೊಂದು ಕಡೆ ಪುರೋಹಿತರಾಗುವುದು ಸಮಂಜಸವಾದುದಲ್ಲ. ಒಂದು ಬೇಡುವ ಕೈಯು ಇನ್ನೊಂದು ನೀಡುವ ಕೈಯು ಎನ್ನುವಂತಿರಬಾರದು. ಯಾರು ಜೋಡಿದಾರರೋ ಅವರು ಧರ್ಮ ಕೊಡಿ ಎಂದು ಕೇಳುವುದಿಲ್ಲ. ಮಠಗಳವರೂ ಧರ್ಮಸಂಸ್ಥೆಗಳವರೂ ಜನತೆಗೆ ಸೇವೆ ಸಲ್ಲಿಸುತ್ತೇವೆ, ದೇಶಕ್ಕೆ ಸೇವೆ ಸಲ್ಲಿಸುತ್ತೇವೆ ಎನ್ನುವುದಾದರೆ, ಅಗತ್ಯವಾಗಿ ಹಾಗೆ ಮಾಡಲಿ. ಸರ್ಕಾರ ಸಂಸ್ಕೃತಿ ಪ್ರಸಾರ ಮಾಡುವುದು ಬೇಡ, ಇಂಥ ಸಂಸ್ಥೆಗಳಿಗೆ ಈ ಕೆಲಸ ನಿರ್ವಹಿಸೋಣ. ನಿಜವಾಗಿ ನಾವು ಸಂಸ್ಕೃತಿ ಪ್ರಸಾರ ಮಾಡುತ್ತೇವೆ, ನಮ್ಮ ದೇಶದ ಸಂಸ್ಕೃತಿಯನ್ನುದ್ಧಾರಮಾಡುತ್ತೇವೆ, ಇದರಿಂದ ದೇಶ, ಸಮಾಜ ಉದ್ಧಾರವಾಗುತ್ತದೆ ಎನ್ನುವುದಾದರೆ, ಸಂಸ್ಥಾನದಿಂದ ಹಣವನ್ನು ಕೊಡೋಣ. ಹಾಗಿಲ್ಲದಿದ್ದರೆ ಜೋಡಿದಾರರಾಗಿ ಅವರದೇ ಒಂದು ವ್ಯಾಟಿಕಾನ್ ಸ್ಟೇಟ್ ಸ್ಥಾಪನೆ ಮಾಡುತ್ತಾರೆಯೆ ; ಜಂಗಮರು, ಜೋಯಿಸರು ಎಲ್ಲರೂ ಮಾಡುವುದು ಒಂದೇ ತರದ ಕೆಲಸ. ದೇವರ ಪೂಜೆ, ಅಗ್ನಿ ಹೋತ್ರ ಮುಂತಾದ ದೇವಕಾರ್ಯಗಳು. ಮಿಕ್ಕೆಲ್ಲ ಸಂಸ್ಥೆಗಳ ಇನಾಂಗಳನ್ನು ತೆಗೆಯುವಾಗ ಶೃಂಗೇರಿ ಒಂದನ್ನು ಮಾತ್ರ ಏಕೆ ಹಾಗೆಯೇ ಇಡಬೇಕು ! ಯಾವುದೋ ಒಂದು ಕಾರಣಕ್ಕಾಗಿ ಇದನ್ನು ಬಿಡಬೇಕೆಂದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಇಂಥ ಎಲ್ಲ Religious Institutionsಗಳನ್ನೂ ಸೇರಿಸಿ, ಕೂಲಂಕಷವಾಗಿ ವಿಮರ್ಶೆ ಮಾಡಿ, ಇದಕ್ಕೇ ಬೇರೊಂದು ಮಸೂದೆಯನ್ನು ತರುತ್ತೇವೆಂದು ಸರ್ಕಾರದವರು ಹೇಳಿರುವಾಗ 'ಸರ್ಕಾರದ ಉದ್ದೇಶ ಇದಲ್ಲ, ಆದುದರಿಂದ ವಿರೋಧಿಸುತ್ತೇವೆ' ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಇನ್ನೊಂದು ವಾದ ಬಂತು. ಈಗ ಈ ಇನಾಂಗಳನ್ನು ತೆಗೆದರೆ ಅನೇಕರಿಗೆ ಇವುಗಳಿಂದ ಈಗ ದೊರಕುತ್ತಿರುವ ಅನುಕೂಲತೆಗಳು ತಪ್ಪಿಹೋಗಿ ಅವರ ಜೀವನಕ್ಕೆ ಮಾರ್ಗವಿಲ್ಲದೆ ಹೋಗುತ್ತದೆ ಅದಕ್ಕೆ ಏನು ಮಾಡುತ್ತೀರೆಂದು ಕೇಳಿದರು. ತೋಟಿತಳವಾರರಿಗೆ ಕೊಟ್ಟಿರುವುದು ಇನಾಂ ಅಲ್ಲ ; ಅವರು ಮಾಡುವ ಕೆಲಸಕ್ಕಾಗಿ ಕೊಟ್ಟಿರುವದು. ಒಂದು ವೇಳೆ ಇದನ್ನು ವಾಪಸು ಸರ್ಕಾರಕ್ಕೆ ತೆಗೆದುಕೊಳ್ಳುವುದಾದರೆ ಅವರಿಗೆ ಸಂಬಳಗಳನ್ನು ಕೊಟ್ಟು ಸಂಬಳಗಾರರಾಗಿ ಭಾವಿಸುವ ಮಾರ್ಗವಿದ್ದೇ ಇದೆ. ಆ ಇನಾಂಗಳನ್ನೂ ರದ್ದುಮಾಡುವುದಾದರೆ, ಅದರ ಜೊತೆಗೆ ಸಂಬಳ ಕೊಡುವ ವಿಚಾರವನ್ನೂ ತರುತ್ತೇವೆ. ಯಾವಾಗ ಸರ್ಕಾರದವರು ಸರ್ವಿಸ್ ಇನಾಂಗಳನ್ನು ವಜಾಮಾಡುತ್ತಾರೋ ಆಗ ಅವರಿಗೆ ಕೊಟ್ಟಿರುವ ಜಮೀನನ್ನು personal grant ಎಂದು ಭಾವಿಸಬೇಕಾಗುತ್ತದೆ. ಆ ಜಮೀನಿಗೆ ಸುತ್ತುಮುತ್ತಲಿನ ಜಮೀನುಗಳಿಗೆ ಕೊಡುವ ಕಂದಾಯವನ್ನೇ ಅವರೂ ಕೊಡಬೇಕಾಗುತ್ತದೆ. ಅವರು ಉಳತಕ್ಕ ರೈತರಾಗಿದ್ದಾರೆ. ಅವರಿಗೆ ಜಮೀನು ಕೊಡುವುದನ್ನು ಶ್ರೀಮಾನ್ ಗೋಪಾಲಗೌಡರೂ ವಿರೋಧಿಸಲಾರರೆಂದು ನನ್ನ ಭಾವನೆ.

ದೇಶದಲ್ಲಿರುವ ಜಮೀನೆಲ್ಲಾ ಸಮಾನವಾಗಿ ಹಂಚಿಕೆಯಾಗಬೇಕೆಂದೂ ಒಬ್ಬನಿಗೆ 30 ಎಕರೆ ಅಥವಾ 50 ಎಕರೆ ಮಾತ್ರ ಇರಬೇಕೆಂದೂ ಹೇಳಿದರು. ಹೀಗೆ ಮಾಡಬೇಕಾದರೆ, ಐದು ಅಥವಾ ಹತ್ತು ಎಕರೆ ಇರುವವನಿಗೂ 50 ಎಕರೆ ಜಮೀನುಕೊಡುವುದಕ್ಕೆ ನಮಗೆ ಶಕ್ತಿ ಬರಬೇಕು. ಹಾಗಿಲ್ಲದೆ ಸುಮ್ಮನೆ ಮಾಡುವುದಕ್ಕಾಗುವುದಿಲ್ಲ ಇದಕ್ಕೆ ದೇಶದಲ್ಲಿ ಯಾರುಯಾರಲ್ಲಿ ಎಷ್ಟೆಷ್ಟು ಜಮೀನಿದೆ ಎಂಥೆಂಥ ಜಮೀನು ಎಷ್ಟೆಷ್ಟಿದೆ ಎಂಬುದನ್ನೆಲ್ಲಾ ಸರ್ವೆ ಮಾಡಿ ನೋಡಬೇಕು. ಒಂದು 'ಇಂಟೆನ್ಸಿವ್ ಸರ್ವೆ' ಆಗಬೇಕು. ಒಟ್ಟು ಜಮೀನೆಷ್ಟಿದೆ, ಜಮೀನಿಲ್ಲದೆಯಿರುವ ರೈತರ ಸಂಸಾರಗಳೆಷ್ಟಿವೆ ಎಂಬುದನ್ನು ನೋಡಬೇಕು. ಇದನ್ನೆಲ್ಲಾ ಒಂದೇ ದಿವಸದಲ್ಲಿ ಮಾಡುವುದು ಭ್ರಮ ರಾಜ್ಯದಲ್ಲಿ ಮಾತ್ರ ಸಾಧ್ಯ. ಅರಣ್ಯದಲ್ಲಿ ಹೋಗಿ ಕುಳಿತುಕೊಂಡು ಬಾಳೆಯಕಾಯಿ ಬೆಳೆಯುತ್ತೇನೆಂದು ಹೇಳಿದರೆ ಪ್ರಯೋಜನವಿಲ್ಲ. ಸುಮ್ಮನೆ ಬಾವಿಯಲ್ಲಿ ಬೀಳಬಾರದು, ರಾತ್ರಿ ಕಂಡ ಬಾವಿಯಲ್ಲಿ ಹಗಲು ಬೀಳಬಾರದು ಎಂದು ಕಾಂಗ್ರೆಸ್ ಸರ್ಕಾರ ಯೋಚನೆಮಾಡುತ್ತಿದೆ ಎಂದು ಶ್ರೀಮಾನ್ ಗೋಪಾಲಗೌಡರಿಗೆ ಹೇಳಬೇಕಾಗಿದೆ.

ಇನ್ನು ಜೋಡೀದಾರರಿಗೆ ಕಾಂಪೆನ್ಸೇಷನ್ ಕೊಡಲೇಬೇಕು. ಏಕೆಂದರೆ, ನಮ್ಮ ರಾಜ್ಯಾಂಗದಲ್ಲಿ "No property of anybody shall be acquired without any compensation ಎಂದು ಹೇಳಿರುವಾಗ ಕಾಂಪೆನ್ಸೇಷನ್ ಕೊಡದೆ ಅಕ್ವೈರ್ ಮಾಡುವುದಾದರೆ, ಈಗ ರಾಜ್ಯಾಂಗದಲ್ಲಿರುವುದನ್ನು ರದ್ದುಮಾಡಿ ಮಾಡಬೇಕಾಗುತ್ತದೆ. ಅಥವಾ ಒಂದು token compensation ಕೊಡಬಹುದೆಂದು ಹೇಳಿದರು. ಹಾಗೆ ಕೊಟ್ಟರೆ, ಅವರು ಹೈಕೋರ್ಟು, ಸುಪ್ರೀಂ ಕೋರ್ಟು ಮುಂತಾದವುಗಳಿಗೆ ಹೋಗಿ ವ್ಯಾಜ್ಯ ಹೂಡಿ ಶ್ರೀಮಾನ್ ಅನಂತರಾಮನ್ ಅವರಿಗೆ, ನನ್ನಂಥವರಿಗೆ ಕೇಸುಗಳನ್ನು ಕೊಡಬೇಕಾಗುತ್ತದೆ. ಅಲ್ಲದೆ token ಎಂಬ ಶಬ್ದ ಹೊಸದು, ಅದನ್ನು ರಾಜ್ಯಾಂಗದಲ್ಲಿ ಸೇರಿಸಿಲ್ಲ. ಅದನ್ನು ಸೇರಿಸಬೇಕಾದರೆ ಪಾರ್ಲಿಮೆಂಟಿಗೆ ಹೋಗಿ ಅಲ್ಲಿ ರಾಜ್ಯಾಂಗಕ್ಕೆ ತಿದ್ದುಪಡಿಯಾಗಿ ಸೇರಿಸಬೇಕಾಗುತ್ತದೆ.

ಆದರೆ ಈಗಿರುವುದಕ್ಕನುಗುಣವಾಗಿ ಪರಿಹಾರಕೊಡದೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಕಾಂಪೆನ್ಸೇಷನ್ ಕೊಟ್ಟರೆ 180 ಲಕ್ಷ ರೂಪಾಯಿ ಆಗುತ್ತದೆ, ಅಷ್ಟು ಹಣ ಎಲ್ಲಿ ಬರುತ್ತದೆ ಎಂದು ಕೇಳಿದರು ? ಈ ಹಣವನ್ನು ಹತ್ತು ವರ್ಷಕ್ಕೆ ಎಂದು ಕೇಳಿ ಹರಡಿದೆ. ವರ್ಷಕ್ಕೆ 15 ಲಕ್ಷಗಳಾಗುತ್ತವೆಂದು ಇದರ Financial Memorandumನಲ್ಲಿ ಸರ್ಕಾರದವರು ತಿಳಿಸಿದ್ದಾರೆ. ಹೀಗೆ ಕೊಡಬೇಕಾದರೆ, ಈಗ ಆ ಜೋಡಿಯೆಂದು ಸರ್ಕಾರಕ್ಕೆ ಎರಡಾಣೆ ಬರುತ್ತಿರುವುದು ಆಮೇಲೆ ಎರಡು ರೂಪಾಯಿ ಆಗುತ್ತದೆ. ಆದುದರಿಂದ ನಾವು ಕೊಡುವುದಕ್ಕಿಂತ ಜಾಸ್ತಿ ಬರುತ್ತದೆ. ಹತ್ತು ವರ್ಷ ಕೊಟ್ಟರೆ ಆಮೇಲೆ ಯಾವಾಗಲೂ ವರ್ಷಕ್ಕೆ ಹನ್ನೊಂದು ಲಕ್ಷದಂತೆ ಸರ್ಕಾರಕ್ಕೆ ಬರುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ವರ್ಷ ವರ್ಷವೂ ರೆವಿನ್ಯೂ 11 ಲಕ್ಷ ಬರುತ್ತದೆ.

Sri A. BHEEMAPPA NAIK.—That is true, Sir. One hundred and fifty lakhs of rupees are our liability. Our liability at the end of the tenth year will cease.

Sri S SRINIVASA IYENGAR.—The revenue every year for having taken this land will be in the order of 11 lakhs. The total compensation that has to be paid is 180 lakhs. Thirty lakhs may be deemed to be the revenue that the Government may get by way of sale of land. So the net amount that the Government has to pay is 150 lakhs in a period of ten years. Every year, the liability of Government is 15 lakhs, against which Government will get a revenue of 11 lakhs per year.

ಶ್ರೀ ಎ. ಭೀಮಪ್ಪನಾಯಕ್.—ನಾನು ಹೇಳಿದ್ದು 150 ಲಕ್ಷ ಕೊಡಬೇಕು, ಅದನ್ನು ಹತ್ತು ವರ್ಷಗಳಲ್ಲಿ ಕೊಡುತ್ತಾರೆ. ಹತ್ತು ವರ್ಷದ ಕೊನೆಯಲ್ಲಿ ಒಟ್ಟು 150 ಲಕ್ಷವಾಗುತ್ತದೆಂದು. ಈ 150 ಲಕ್ಷವನ್ನು ವರ್ಷಕ್ಕೆ 15 ಲಕ್ಷದಂತೆ ಕೊಡಬೇಕಾಗುತ್ತದೆ ; ಹತ್ತು ವರ್ಷಕಾಲದಲ್ಲಿ. ಹೀಗೆ 15 ಲಕ್ಷ ಕೊಟ್ಟರೂ, ವರ್ಷಕ್ಕೆ 11 ಲಕ್ಷ ರೂಪಾಯಿ ವರಮಾನ ಬರುತ್ತದೆಂಬುದನ್ನು ಮರೆಯಬಾರದು.

ಶ್ರೀ ಎಸ್. ಶ್ರೀನಿವಾಯ್ಯಂಗಾರ್.—ನಾನು ಹೇಳಿದ್ದೂ ಇದೇ.

ಶ್ರೀ ಎ. ಭೀಮಪ್ಪನಾಯಕ್.—ನಾನೂ ಅದೇ ಹೇಳಿದ್ದು. Would we have paid anything except nominal payment ? We will have paid a nominal sum of 4 lakhs per year for 10 years. Afterwards a regular permanent revenue of 11 lakhs per year, we will be getting.

11 ಲಕ್ಷ ವರಮಾನ ಬಂದರೆ, ಇನ್ನು ನಾಲ್ಕು ಲಕ್ಷ ಜಾಸ್ತಿ ಕೊಡಬೇಕಾಗುವುದು. ಆದ್ದರಿಂದ what we will have paid is nothing except a nominal payment. ಇದನ್ನು ಶ್ರೀಮಾನ್ ಗೋಪಾಲ ಗೌಡರಿಗೆ ಹೇಳುತ್ತಿದ್ದೆ, ಅಷ್ಟರಲ್ಲಿ ನನ್ನ ಮಿತ್ರರು ಓದಿ ನೋಡಿ ಎಂದು ಹೇಳಿದರು. ಅದಕ್ಕೆ ಓದಿದ್ದೇನೆಂದು ತೋರಿಸಲು ಹೇಳಿದೆ. 11 ಲಕ್ಷ ರೆವೆನ್ಯೂ ಬಂದು 15ಲಕ್ಷ ಕೊಡುವುದಾದರೆ ಇನ್ನು ನಾಲ್ಕು ಲಕ್ಷ ಹೆಚ್ಚು ಕೊಡಬೇಕಾಗುತ್ತದೆ, ಅಷ್ಟೆ. ಅದೂ 10 ವರ್ಷಗಳ ಕಾಲ. ಆಮೇಲೆ ಖಾಯಂ ಆಗಿ ಸರ್ಕಾರಕ್ಕೆ ವರ್ಷಕ್ಕೆ 11 ಲಕ್ಷ ವರಮಾನ ಬರುತ್ತದೆ. ಇದರಿಂದ ನಷ್ಟವೇನೂ ಆಗುವುದಿಲ್ಲ. ಇದನ್ನೆಲ್ಲಾ ಅವರು ನಿಧಾನವಾಗಿ ಯೋಚನೆ ಮಾಡಬೇಕು. ನಾವು ಒಂದು ಕಾನೂನು ತರುವಾಗ ಅದು illegal ಆಗಬಾರದು. ಕೋರ್ಟುಗಳಿಗೆ ಹೋಗುವಂತಿರಬಾರದು.

ಒಂದು ವೇಳೆ 'ಸರ್ವಿಸ್'ಗಾಗಿ ಕೊಟ್ಟಿದ್ದರೆ 'ಸರ್ವಿಸ್' ಬೇಡವೆಂದು ಹೇಳಿ ಆ ಇನಾಂ ಜಮೀನನ್ನು ತೆಗೆದುಕೊಳ್ಳಬಹುದು ; ಆಗ ಅವರ ಸರ್ವಿಸ್‌ಗೇನನ್ನಾದರೂ ಕೊಡಬೇಕೆಂದು ಹೇಳಬಹುದು. ಪಟೇಲ ಶ್ಯಾನುಭೋಗರು ಪೋಟಿಗೆಗಾಗಿ ಕೆಲಸಮಾಡುತ್ತಿಲ್ಲ, ಇನಾಂ ಜಮೀನಿನಿಂದ ಆದಾಯ ಬರುತ್ತದೆಂದು ಮಾಡುತ್ತಾರೆ, ಅದನ್ನು ಹಾಗೆಯೇ ಇಟ್ಟುಕೊಳ್ಳಬಹುದೆಂದು ಹೇಳಬಹುದು. ಇದನ್ನೆಲ್ಲಾ ನೋಡಿ, ಇದಕ್ಕೇ ಬೇರೆ ಕಾನೂನು ಮಾಡಬೇಕಾಗುತ್ತದೆ.

ಇನ್ನು Religious and Charitable Institutions. ಇವುಗಳನ್ನು ತೆಗೆದುಕೊಳ್ಳುವಾಗ, ಇವುಗಳನ್ನು ಯಾವ ಉದ್ದೇಶದಿಂದ ಕೊಟ್ಟಿದ್ದಾರೆ, ಏಕೆ ಮತ್ತು ಹೇಗೆ ಕೊಟ್ಟಿದ್ದಾರೆ, ಎಂಬುದನ್ನೆಲ್ಲಾ ನೋಡಿ, ಎಷ್ಟು ಪರಿಹಾರ ಕೊಡಬೇಕಾಗುತ್ತದೆಂಬುದನ್ನು ಗೊತ್ತುಮಾಡಬೇಕು. Personally I am not for giving any outright cash grant either to Sringeri or any other religious institution. ಏಕೆಂದರೆ, ಹೀಗೆ ಕೊಡುತ್ತಾ ಹೋದರೆ ಏನಾಗುತ್ತದೆ, ಎಲ್ಲಿಗೆ ನಿಲ್ಲುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇಂಥ ಸಂಸ್ಥೆಗಳಿಗೆ ಅವು ಸಾರೋದ್ಧಾರವಾಗಿ ನಡೆಯುವುದಕ್ಕೆಬೇಕಾದರೆ cash grant ಕೊಡಿ, ಆದರೆ ಹೀಗೆ ಕೊಡುವುದು ಅವರಿಂದ ಇನಾಂ ತೆಗೆದುಕೊಳ್ಳುವುದಕ್ಕಲ್ಲ. ಇಂಥ ಸಂಸ್ಥೆಗಳು ಮಾಡತಕ್ಕ ಕೆಲಸದ ಮೇಲೆ, ಅವರ ಸೇವೆಗಾಗಿ ಅವರಿಗೆ cash grant ನಿರ್ಧಾರ ಮಾಡಿಕೊಡುವದು ಈ ಸಭೆಯ ಕರ್ತವ್ಯ. ಸರ್ವಿಸ್ ಅಥವಾ ಸೇವೆ ಎಂದರೆ, ಹಿಂದಿನ ಹಾಗೆ ಬರಿಯ ದೇವರ ಪೂಜೆಮಾಡಿ ಕೊಂಡಿರುವುದಲ್ಲ. ಇದಕ್ಕಿಂತ ದೊಡ್ಡ ಭಾರವನ್ನು ಅವರು ಹೊರಬೇಕಾಗುತ್ತದೆ. ವಿದ್ಯಾಭ್ಯಾಸ,ಜ್ಞಾನ ಪ್ರಸಾರ ಮುಂತಾದಕಡೆ ಗಮನ ಕೊಡಬೇಕು. ಆಗ ಹಿಂದೆ ಯಾವ ಭಾವನೆಯಿತ್ತೋ ಅದರ ದೃಷ್ಟಿಕೋಣ ಈಗ ಬೇರೆ ಆಗಬೇಕಾಗುತ್ತದೆ.

4–30 P.M.

ನಮ್ಮದು ಒಂದು ಸೆಕ್ಯುಲರ್ ಸ್ಟೇಟು. ಎಲ್ಲರಿಗೂ ಸಮಾನಾವಕಾಶಗಳನ್ನು ಕೊಡಲಾಗಿದೆ. ಯಾರಿಗೂ ಯಾವ ಒಂದು ಡಿಸ್ಕ್ರಿಮಿನೇಷನ್ನನ್ನೂ ಮಾಡಿರುವುದಿಲ್ಲ. ಎಲ್ಲರಿಗೂ ಅವರವರ ನಿತ್ಯಕರ್ಮಾದಿಗಳನ್ನು ಯಾವ ಆತಂಕವೂ ಇಲ್ಲದಂತೆ ನಡೆಸಿಕೊಂಡು ಹೋಗಲು ಅವಕಾಶ ಕೊಡಲಾಗಿದೆ. ಇಂಥ ಸನ್ನಿವೇಶವಿರುವಾಗ ಒಬ್ಬರಿಗೆ ಹೆಚ್ಚು ಒಬ್ಬರಿಗೆ ಕಮ್ಮಿ ಎಂಬ ಭಾವನೆಗಳು ಮೂಡುವುದಕ್ಕೆ ಅವಕಾಶ ಕೊಡಬಾರದು. ಹಾಗೆ ಮಾಡಿದರೆ ಕೆಲವರ ಹಿತಕ್ಕೆ ಧಕ್ಕೆಯುಂಟಾಗಬಹುದೆಂದು ಅನುಮಾನ ಉದ್ಭವಿಸಬಹುದು.

ಈ ದಿವಸ ಯಾವುದಾದರೂ ಒಂದು ಸಂಸ್ಥೆ ಎಲ್ಲರ ಹಿತರಕ್ಷಣೆಯನ್ನೂ ತನ್ನ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತ, ಯಾರೊಬ್ಬರ ಹಿತವನ್ನೂ ಅಲಕ್ಷ್ಯಮಾಡುತ್ತಿಲ್ಲ ಎಂಬ ಭಾವನೆ ಸರ್ವರಿಗೂ ಕಂಡುಬರುವಂತಿದ್ದರೆ ಆಗ ಅಂಥ ಸಂಸ್ಥೆಗಳಿಗೆ ಮಾತ್ರ ಈ cash grant ಕೊಡತಕ್ಕದ್ದನ್ನು ಆಲೋಚನೆಮಾಡೋಣ. ಅಂಥಾ ಸಂಸ್ಥೆಗಳಿಗೆ ಈ ಸಭೆಯಲ್ಲಿ ಯಾರೂ ಮಾನ್ಯತೆ ಕೊಡುವುದಿಲ್ಲವೆಂದು ಹೇಳುವುದಿಲ್ಲ. ಆದರೆ ಶ್ರೀಮಾನ್ ಪಿ. ಆರ್. ರಾಮಯ್ಯನವರು ಶೃಂಗೇರಿ ವಿಚಾರವನ್ನು ಪ್ರಸ್ತಾಪಿಸುತ್ತ ಅದು ಬಹಳ ದಿವಸದಿಂದ ನಡೆದುಕೊಂಡುಬಂದಿರತಕ್ಕ ಒಂದು ಸಂಸ್ಥೆ, ಅದಕ್ಕೇ ಒಂದು ರೀತಿಯ ವೈಶಿಷ್ಟ್ಯವಿದೆ ಎಂದು ಹೇಳಿದ್ದಾರೆ. ಆದರೆ ಅದೆಂಥ ವೈಶಿಷ್ಟ್ಯ ಅದಕ್ಕಿದೆಯೋ ನನಗಂತೂ ಅರ್ಥವಾಗುವುದಿಲ್ಲ. ಯಾವ ಒಂದು ಸಂಸ್ಥೆಯೇ ಆಗಲಿ ಎಲ್ಲರ ಹಿತವನ್ನೂ ಕಾಯದೆ ಸರಿಯಾಗಿ ಕೆಲಸಮಾಡುತ್ತಿ

(ಶ್ರೀ ಎ. ಭೀಮಪ್ಪನಾಯಕ್.)

ಲ್ಲವೆಂದು ಕಂಡುಬಂದರೆ ಅಂಥಾ ಸಂಸ್ಥೆಯನ್ನು ತೆಗೆದುಹಾಕತಕ್ಕದ್ದು ನಮ್ಮ ಮತ್ತು ಸರ್ಕಾರದವರ ಮೊದಲನೆಯ ಕರ್ತವ್ಯ. ಮೊದಲು ಅಂಥಾದ್ದನ್ನು ತೆಗೆದುಹಾಕಬೇಕು. ಇಂಥ ವಿಚಾರದಲ್ಲಿ ಯಾರೂ ಹಿಂದೆಗೆಯಬಾರದು. ದೇಶದಲ್ಲಿರತಕ್ಕಂಥ ಪ್ರತಿಯೊಬ್ಬರ ಉದ್ಧಾರವನ್ನೂ ಮನಸ್ಸಿನಲ್ಲಿಟ್ಟುಕೊಂಡು ಕೆಲಸ ನಿರ್ವಹಿಸಿಕೊಂಡುಹೋಗುವುದಾಗಿದ್ದರೆ ಅಂಥಾ ಸಂಸ್ಥೆಗಳಿಗೆ ಎಲ್ಲರೂ ಮನ್ನಣೆಕೊಡತಕ್ಕದ್ದು ಅಗತ್ಯ. ಆದುದರಿಂದ ಸರ್ಕಾರದವರು ಮುಂದಿನ ಅಧಿವೇಶನದೊಳಗಾಗಿ ಇವುಗಳ ಬಗ್ಗೆ ಒಂದು ಪ್ರತ್ಯೇಕ ಲೆಜಿಸ್ಲೇಷನನ್ನು ತರುವಂಥಾ ಒಂದು ಭರವಸೆಯನ್ನು ಅವರಿಂದ ಪಡೆದುಕೊಂಡು ಈ ಕೆಲಸಮಾಡೋಣವೆಂದು ನನ್ನ ಈ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ನಮ್ಮ ಮೈಸೂರು ದೇಶದ ಚರಿತ್ರೆಯಲ್ಲಿ ಈ ದಿನ ಒಂದು ಶುಭದಿವಸವೆಂದು ನಾನು ತಿಳಿದುಕೊಂಡಿದ್ದೇನೆ. ದೇಶದಲ್ಲಿ ಬಹುಕಾಲದಿಂದಲೂ ಈ ಭೂಸುಧಾರಣೆಯಾಗಬೇಕು, ಜೋಡಿ, ಇನಾಂ ಇತ್ಯಾದಿಗಳೆಲ್ಲಾ ರದ್ದಾಗಬೇಕು, ಭೂಮಿಯನ್ನು ಉಳತಕ್ಕ ರೈತನಿಗೆ ಭೂಮಿ ಹಕ್ಕುಉಂಟಾಗಬೇಕು ಎಂಬುದಾಗಿ ನೂರಾರು ವರ್ಷಗಳಿಂದ ಸಾರ್ವಜನಿಕರು ಬಹಳ ಕಾತರತೆಯಿಂದ ಸರ್ಕಾರದವರನ್ನು ಈ ರೀತಿಯ ಒಂದು ಬದಲಾವಣೆಯನ್ನು ಬೇಗ ಜಾರಿಗೆ ತರಬೇಕೆಂದು ಒತ್ತಾಯಪಡಿಸುತ್ತಲೇ ಬಂದಿದ್ದರು. ಹಾಗೆ ಜನರು ಬಹು ಕಾಲದಿಂದಲೂ ಕೇಳುತ್ತಿದ್ದಂಥ ಅವರ ಇಷ್ಟಾರ್ಥವೊಂದು ಈ ದಿವಸ ಲಭಿಸಿದೆ. ಆದರೆ ಈ ವಿಚಾರದಲ್ಲಿ ಸಾರ್ವಜನಿಕರ ಅಭಿಪ್ರಾಯವೇನಿರುತ್ತದೆಯೆಂಬುದನ್ನು ತಿಳಿದುಕೊಳ್ಳಲು ಆ ಸಾರ್ವಜನಿಕ ಮುಖಂಡರುಗಳನ್ನೊಳಗೊಂಡಿರುವಂಥ ಈ ಮಾನ್ಯ ಸಭೆಯ ಮುಂದೆ ಈಗ ಈ ಮಸೂದೆಯನ್ನು ಮಂಡಿಸಿದ್ದಾರೆ. ಅನೇಕರು ಇದರ ಮೇಲೆ ಚರ್ಚೆಗಳನ್ನೂ ಸಹ ನಡೆಸಿರುತ್ತಾರೆ. ದೇಶಗಲ್ಲಿರತಕ್ಕ ಜನರು ಅವರಿಗಿರತಕ್ಕ ಅನೇಕ ತೊಂದರೆಗಳನ್ನೂ ಮತ್ತು ನಾನಾ ಕಷ್ಟಗಳನ್ನೂ ನಿವಾರಣೆಮಾಡಲು ಈ ದಿವಸ ಈ ಮಾನ್ಯ ಸಭೆಯ ಸದಸ್ಯರು ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಈ ಮಸೂದೆಯ ಬಗ್ಗೆ ಸಲಹೆನೀಡುತ್ತಾರೋ ಎಂಬುದನ್ನೇ ಅವರು ಬಹಳ ಆಸಕ್ತಿಯಿಂದ ಕಾದು ನೋಡುತ್ತಿದ್ದಾರೆಂದು ನಾನು ಭಾವಿಸಿದ್ದೇನೆ. ಈಗಾಗಲೇ ಮಾತನಾಡಿರತಕ್ಕಂಥ ಶ್ರೀ ಗೋಪಾಲಗೌಡರು ಈ ಬಿಲ್ಲಿನ ವಿಚಾರವಾಗಿ ಮಾತನಾಡುತ್ತ ಬಹಳ ಕ್ರಾಂತಿಕಾರಕ ವಿಷಯಗಳನ್ನು ಹೇಳಿದ್ದಾರೆ. ಆದರೆ ಅವರಿಗೆ ಇನ್ನೂ ಸ್ವಲ್ಪ ವಯಸ್ಸು ಚಿಕ್ಕದು. ಆ ಚಿಕ್ಕ ವಯಸ್ಸಿಗೆ ತಕ್ಕಹಾಗೆ ಅವರು ಹೇಳಿದ್ದಾರೆ. ಆದರೆ ಅವರ ಪಾರ್ಟಿಯವರೇ ಅವರು ತಿಳಿಸಿರತಕ್ಕ ಅಭಿಪ್ರಾಯಗಳಿಗೆ ಸಹಿ ಹಾಕುತ್ತಿಲ್ಲ. ಅವರಿಗೆ ಇನ್ನೂ ಪ್ರಾಪಂಚಿಕ ವ್ಯವಹಾರ ಮತ್ತು ಅನುಭವ ಬೇಕಾಗಿದೆ. ಅವರು ಕೇವಲ ಐಡಿಯಲ್ಸ್‌ಗಳಿಗೆ ಗಮನಕೊಡುತ್ತಿದ್ದಾರೆಯೇ ವಿನಾ ಅವುಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಎಷ್ಟೆಷ್ಟು ಎಡರುತೊಡರುಗಳು ಇವೆ, ಎಷ್ಟೆಷ್ಟು ತೊಂದರೆಗಳಾಗಬಹುದು ಎಂಬುದನ್ನು ಅಷ್ಟಾಗಿ ಯೋಚಿಸಿರುವಂತೆ ಕಾಣುವುದಿಲ್ಲ. ಆದರೆ ಈಗಾಗಲೇ ಅವರ ಪಾರ್ಟಿ ನಾಯಕರು ತಿಳಿಸಿರುವಂತೆ, ನಮ್ಮ ಕಾಂಗ್ರೆಸ್ ಪಾರ್ಟಿಯವರು ತಯಾರಿಸಿ ತಂದಿರತಕ್ಕಂಥ ಈ ರಿಫಾರಂಸ್‌ಗಳ ಬಗ್ಗೆ ಅವರ ಮನಸ್ಸಿನಲ್ಲಿ ಸ್ವಲ್ಪ ಅಂಜಿಕೆಯಿದ್ದ ಹಾಗೆ ಕಾಣುತ್ತದೆ. ಆದರೆ ಈ ಮಸೂದೆಯನ್ನು ದೇಶದಲ್ಲಿರತಕ್ಕವರೆಲ್ಲರೂ ಬಹಳ ಆದರದಿಂದ ಸ್ವಾಗತಿಸುತ್ತಾರೆ. ಆದರೆ ಈಗಾಗಲೇ ನಮ್ಮ ಮಾನ್ಯ ಸಚಿವರು ತಿಳಿಸಿರುವ ಪ್ರಕಾರ, ಇದರಲ್ಲಿ ಕೆಲವು ನ್ಯೂನತೆಗಳೂ ಸಹ ಇರುತ್ತವೆ. ಕಲವು ನಮ್ಮ ಸ್ನೇಹಿತರು ಈಗಾಗಲೇ ತಿಳಿಸಿರುವಂತೆ, ಅವರು ಸೂಚಿಸಿರುವ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅವುಗಳ ಸೂಕ್ತ ಬದಲಾವಣೆಗಳನ್ನು ಮಾಡುವುದಕ್ಕಾಗಿ ಈಗ ಈ ಮಸೂದೆಯನ್ನು ನಮ್ಮ ಮುಂದೆ ಮಂಡಿಸಿರುವುದಾಗಿ ಹೇಳಿದ್ದಾರೆ. ಈ ದಿವಸ ಇಂಥ ಒಂದು ಕಾನೂನನ್ನು ಜಾರಿಗೆ ತರುವುದರಿಂದ ದೇಶದಲ್ಲಿ ಉಳತಕ್ಕ ಜನರು ಯಾರು ಯಾರು ಇರುತ್ತಾರೋ ಅಂಥವರ ಒಂದು ಮಟ್ಟವನ್ನು ನಾವು ನಿರೀಕ್ಷಿಸಿರುವ ಮಟ್ಟಕ್ಕೆ ಏರಿಸಲಾಗದಿದ್ದರೂ, ಈಗಿನ ಸನ್ನಿವೇಶಕ್ಕೆ ತಕ್ಕಹಾಗೆ ಮತ್ತು ಈ ಹಿಂದೆ ಅವರಿಗೆ ಏನೇನು ತೊಂದರೆ ಮತ್ತು ಅವನತಿಗಳು ಉಂಟಾಗಿದ್ದವೋ ಅಂಥವನ್ನು ತಪ್ಪಿಸತಕ್ಕ ಸಲುವಾಗಿ ನಮ್ಮ ಕಾಂಗ್ರೆಸ್ ಸರ್ಕಾರ ಬಹಳ ದೂರಾಲೋಚನೆಮಾಡಿ ಈಗ ಇದನ್ನು ತಂದಿದ್ದಾರೆ. ಈ ಮಸೂದೆಯನ್ನು ಇಲ್ಲಿ ಮಂಡಿಸುವ ಮುನ್ನವೇ ಇತರ ಪ್ರಾಂತ್ಯಗಳಾದ ಬಿಹಾರ್, ಒರಿಸ್ಸ, ಮದ್ರಾಸ್ ಮತ್ತು ಬೊಂಬಾಯಿಗಳ ಪ್ರಾಂತಗಳಲ್ಲಿ ಈ ಬಗ್ಗೆ ಆ ಸರ್ಕಾರಗಳವರು ಯಾವ ಒಂದು ಕಾನೂನನ್ನು ಜಾರಿಗೆ ತಂದಿರುತ್ತಾರೋ ಆ ಎಲ್ಲ ಕಾನೂನುಗಳನ್ನೂ ಚೆನ್ನಾಗಿ ಅರ್ಥಮಾಡಿಕೊಂಡು, ಈಗ ನಮ್ಮ ಸಭೆಯ ಮುಂದಿಟ್ಟಿರತಕ್ಕ ಕಾನೂನನ್ನೂ ಮತ್ತು ಇತರ ದೇಶಗಳಲ್ಲಿರತಕ್ಕ ಕಾನೂನುಗಳನ್ನೂ ಹೋಲಿಕೆ ಹಾಕಿ ನೋಡಿಕೊಂಡು ಎಲ್ಲ ಕಾನೂನುಗಳಿಗಿಂತಲೂ ಬಹಳ ಉತ್ತಮ ರೀತಿಯಲ್ಲಿರತಕ್ಕಂಥ ಒಂದು ಕಾನೂನನ್ನು ತಯಾರಿಸಿ ಈಗ ನಮ್ಮ ಮುಂದೆ ಇಟ್ಟಿದ್ದಾರೆ. ಈ ಮಸೂದೆಯಲ್ಲಿ ಈಗ ಸದ್ಯಕ್ಕೆ ಆ ರಿಲಿಜಿಯಸ್ ಮತ್ತು ಸರ್ವಿಸ್ ಇನಾಂತಿಗಳನ್ನು ಕೈಬಿಟ್ಟಿದ್ದಾರೆ. ಆದರೆ ಈ ದಿವಸ ಅವುಗಳನ್ನು ಕೈಬಿಟ್ಟಿದ್ದಾಗ್ಯೂ, ನಾಳೆಯ ದಿವಸ ಅವು ಈ ಸಭೆಯ ಮುಂದೆ ಬಂದೇಬರಬೇಕಾಗುತ್ತದೆ. ಆದರೆ ಶ್ರೀಮಾನ್ ಪಿ. ಆರ್. ರಾಮಯ್ಯನವರು ಮಾಡಿರತಕ್ಕ ವಾದವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಅವರು ಹೇಳಿರತಕದ್ದೂ ಅಷ್ಟು ನ್ಯಾಯವಾಗಿದ್ದಂತೆ ಕಾಣುವುದಿಲ್ಲ. ಯಾವ ಪಂಗಡದ ಧರ್ಮಸಂಸ್ಥೆಗಳೇ ಆಗಿರಲಿ, ಅಥವಾ ಯಾವ ಮತದವರ ಧರ್ಮಸಂಸ್ಥೆಯೇ ಆಗಿರಲಿ, ನಾವು ಅವುಗಳಿಗೆ ಇರತಕ್ಕ ಒಂದು ಸ್ಥಾನ, ಮನ್ನಣೆ, ಗೌರವ ಇತ್ಯಾದಿಗಳನ್ನೆಲ್ಲಾ ಕೊಡೋಣ. ಆ ಬಗ್ಗೆ ಯಾರದೂ ಭಿನ್ನಾಭಿಪ್ರಾಯ ಅಷ್ಟಾಗಿ ಇರಲಾರದು. ಆದರೆ ಅವುಗಳಿಗೇ ಒಂದು ಪ್ರತ್ಯೇಕ ಸ್ಥಾನ ಕೊಡಬೇಕೆಂದು ಹೇಳಿರುವುದು ಅಷ್ಟು ಸರಿಯಾಗಿರುತ್ತದೆಯೆಂದು ನಾನು ಹೇಳಲಾರೆ. ಈಗ ಬಂದಿರತಕ್ಕ ಕಾಲ ಎಂಥದೆಂದರೆ ರಾಜಮಹಾರಾಜರುಗಳ ಸ್ಥಾನಮಾನಗಳೇ ಎಗರಿ ಹೋಗುತ್ತಿರುವಂಥ ಕಾಲ. ಹೀಗಿರುವಾಗ, ಇವುಗಳಿಗೊಂದು ಸ್ಥಾನವನ್ನು ಕಲ್ಪಿಸಬೇಕೆಂದರೆ ಬಹುಶಃ ಯಾರೂ ಇದನ್ನು ಒಪ್ಪಲಾರರು. ಆದರೆ ಈ ಹಿಂದೆ ಈ ಭೂಸುಧಾರಣೆಯ ಬಗ್ಗೆ ನೇಮಿಸಲಾಗಿದ್ದ ಎಚ್. ಬಿ. ಗುಂಡಪ್ಪಗೌಡರ ಸಮಿತಿಯ ವರದಿಯಲ್ಲಿ ಈ ಶೃಂಗೇರಿ ಜಹಗೀರಿಯ ವಿಚಾರವಾಗಿ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಅದರಲ್ಲಿ ಅವರು ಈ ಶೃಂಗೇರಿ ಜಹಗೀರಿಯ ಜಮೀನುಗಳನ್ನು ಮಾಡತಕ್ಕ ರೈತರಿಗೆ ಸರ್ಕಾರಿ ಗ್ರಾಮಗಳಲ್ಲಿರತಕ್ಕ ರೈತರಿಗೆ ಏನೇನು ಸೌಕರ್ಯ, ಸೌಲಭ್ಯಗಳು ಇವೆಯೋ ಅವು ಇರುವುದಲ್ಲವೆಂದೂ, ಅದಕ್ಕಾಗಿ ಆ ರೈತರಿಗೂ ಸಹ ಈ

ಭೂಸ್ವಾಮ್ಯ ದೊರಕಿಸುವುದು ಅಗತ್ಯವೆಂದೂ ತಿಳಿಸಿರುತ್ತಾರೆ. ಆದರೆ ಆ ಶೃಂಗೇರಿ ಯವರ ಒಂದು ಹಿರಿಮೆ, ಅವರ ಶ್ರೇಷ್ಠತೆ ಏನಿವೆಯೋ ಅವುಗಳ ಬಗ್ಗೆ ಯಾರೂ ಕೈಹಾಕುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಹೇಳತಕ್ಕದ್ದು ಇಷ್ಟೆ. ಆ ಗುಂಡಪ್ಪಗೌಡರ ಸಮಿತಿಯ ವರದಿಯಲ್ಲಿ ಇದರ ಬಗ್ಗೆ ಏನೊಂದು ಸೂಚನೆಕೊಟ್ಟಿದ್ದಾರೊ ಆ ಪ್ರಕಾರ ಮಾಡಿ ಎಂದು ಹೇಳುತ್ತೇನೆ. ಅವರೆ ಯಾರಿಗೂ ಕೊಡದೆ ಇರುವಂಥ ಒಂದು ಅನುಕೂಲವನ್ನು ಈಗ ಈ ಶೃಂಗೇರಿ ಮಠಕ್ಕೆ ಉಂಟುಮಾಡಿಕೊಳ್ಳಬೇಕೆಂಬ ವಾದವನ್ನು ಯಾರೂ ಒಪ್ಪುವುದಿಲ್ಲ; ಮತ್ತು ಅದನ್ನು ನ್ಯಾಯವೆಂದ ಸಹ ಹೇಳುವುದಕ್ಕಾಗುವುದಿಲ್ಲ. ಹೀಗೆ ಒಬ್ಬರಿಗೊಂದು ಇನ್ನೊಬ್ಬರಿಗೊಂದು ಮಾಡತಕ್ಕ ನೀತಿ ಸರಿಯಲ್ಲವೆಂದು ಹೇಳಿದರೆ ತಪ್ಪಾಗಲಾರದು

ಇನ್ನು ಈ ಪರ್ಮನೆಂಟ್ ಟೆನೆಂಟ್ಸ್, ಕ್ವಾಸಿ ಪರ್ಮನೆಂಟ್ ಟೆನೆಂಟ್ಸ್ ಮತ್ತು ಟೆನೆಂಟ್ಸ್ ಅಟ್‌ವಿಲ್ ಇವರ ವಿಚಾರದಲ್ಲಿ ಸರ್ಕಾರದವರು ಅರ್ಧ ಭಾಗದ ಹಣ ಕೊಡಬೇಕೆಂದು ಹೇಳತಕ್ಕ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ. ನನ್ನ ಅಭಿಪ್ರಾಯದಲ್ಲಿ ಇದು ಕೆಲವು ರೈತರಿಗೆ ತುಂಬ ಹೆಚ್ಚಾಯಿತೆಂದು ತೋರುತ್ತಿದೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಈ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಈಗಾಗಲೇ ಅನೇಕ ಜನ ಜೋಡಿದಾರರಿಗೆ ಈ ವಿಷಯ ಗೊತ್ತಾಗಿ ಹೋಗಿ, ಅವರೂ ಸಹ ಸರ್ಕಾರದವರು ಆ ಭೂಮಿಗಳನ್ನು ತೆಗೆದುಕೊಳ್ಳುತ್ತಾರೆಂಬ ಆಲೋಚನೆಯಲ್ಲೇ ಇದ್ದಾರೆ. ಅವರು ಸರ್ಕಾರದವರು ಕೊಡತಕ್ಕ ಒಂದು ಪರಿಹಾರವ್ಯವಸ್ಥೆಯೇನಿದೆಯೋ ಅದನ್ನು ಕೊಟ್ಟು ಅವರ ಖಾಸ್‌ಪೊಸೆಷನ್ನಿಗೆ ಬಿಟ್ಟುಕೊಡತಕ್ಕ ಜಮೀನನ್ನು ಬಿಟ್ಟುಕೊಡುವುದಾದರೆ ಅವರಿಗಿಂತಲೂ ಹೆಚ್ಚಿನ ಭಾಗ್ಯಶಾಲಿಗಳು ಇತ್ತ ಯಾರೂ ಇಲ್ಲವೆಂದು ನನಗೆ ಅನೇಕ ಜನ ಆ ಜೋಡಿದಾರರೂ ಮತ್ತು ಆ ಇನಾಂದಾರರೇ ತಿಳಿಸಿದ್ದಾರೆ.

ಕಾರಣವೇನೆಂದರೆ, ಇವೊತ್ತಿನವರೆಗೆ ಬಹಳ ಕಷ್ಟವಾಗಿದೆ. ಈ ದರದಂತೆ ಹತ್ತರಷ್ಟು, ಹದಿನೈದರಷ್ಟು compensation ಕೊಡಬೇಕಾದರೆ ಅಥವಾ ಗ್ರಾಮದಲ್ಲಿ ಏನು ವರಮಾನ ಅವರಿಗಿದೆಯೋ ಆ ವರಮಾನಕ್ಕೆ ಹತ್ತರಷ್ಟು ಹದಿನೈದರಷ್ಟು ಕೊಡಬೇಕೆಂದರೆ, ಈಗಿನ ರೆಕ್ಕಾಚಾರದ ಪ್ರಕಾರ ಮಾರ್ಕೆಟ್ ರೇಟಿಗಿಂತ ಹೆಚ್ಚಿಗೆ ಹಣ ಅವರಿಗೆ ದೊರೆಕಂತಾಗುತ್ತದೆ. ಇವೊತ್ತಿನ ದಿವಸ ಜೋಡಿದಾರರುಗಳು ಬದ್ಧಿವಂತರು ಈ ಕಾನೂನನ್ನು ಯಾರೂ ವಿರೋಧಿಸುವುದಿಲ್ಲವೆಂದು ಹೇಳಬಹುದು. ಏಕೆಂದರೆ ಇವೊತ್ತು ಲೆಗ್ಗೆ ಹಾಗೆಯೇ ರೆಕ್ಕಾಚಾರ ಹಾಕಿ compensation ಎಷ್ಟಾಗಬಹುದೆಂದು ನೋಡಿದರೆ ಕಾನೂನು ಪ್ರಕಾರ ಅವರಿಗೆ ಕೊಡತಕ್ಕ compensation ಕೆಲವು ಕಡೆಯೇನೋ ಕಮ್ಮಿಯಿರಬಹುದು ಆದರೆ ಪಟ್ಟಣಗಳ ಸಮೀಪದಲ್ಲಿರತಕ್ಕ ಅದರಲ್ಲೂ ತರೀ ಹೆಚ್ಚಾಗಿರುವ ಕಡೆ ಇದು ಬಹಳ ಹೆಚ್ಚಿನ ಮೊತ್ತವಾಗಿ ಪರಿಣಮಿಸುತ್ತದೆ. ಎಲ್ಲೋ ನಾಲ್ಕಾರು ಗ್ರಾಮಗಳಿಗೆ ತೊಂದರೆಯಾಗಬಹುದೆಂದು ಭಾವಿಸುವುದಾದರೂ, ಶೇಕಡ 98 ಗ್ರಾಮಗಳ ವಿಷಯದಲ್ಲಿ ಜೋಡಿದಾರರುಗಳಿಗೆ ಈ ಕಾನೂನು ಬಹಳ ಅನುಕೂಲವಾಗಿ ಪರಿಣಮಿಸಿದೆ. ಇನ್ನು ಹೆಚ್ಚಿಗೆ ಈ ವಿಷಯದಲ್ಲಿ ನಾನು ಹೇಳಬೇಕಾಗಿಲ್ಲ. ನಾನು ಮುಂಚೆ ಪ್ರಾರಂಭದಲ್ಲೇ ಹೇಳಿದಹಾಗೆ, ಈ ದಿವಸ ಒಂದು ಶುಭ ದಿವಸ. ಈ ಕಾನೂನು ಸರಿಗೆ ಬಂದು ಏನೇನು ರೈತರುಗಳು ಜೋಡಿದಾರರ ಕೈಕೆಳಗೆ ಕಷ್ಟನಷ್ಟಗಳನ್ನನುಭವಿಸುತ್ತಿದ್ದಾರೋ ಅವು ಕೊನೆಗಾಣಲಿ. ಜೋಡಿ ಗ್ರಾಮಗಳ ರೈತರುಗಳು ಅಕ್ಕಪಕ್ಕದ ರೈತರುಗಳಿಗಿಂತಲೂ ಕೀಳು (inferior) ಎಂಬ ಭಾವನೆಯುತ್ತು. ಆ ಭಾವನೆಗಳು ತೊಲಗಿ ಅವರಿಗೆ ಅನುಕೂಲವಾಗಲೆಂದು ಹೇಳಿ ಈ ಕಾನೂನನ್ನು ನಾನು ಅನುಮೋದಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು) ಮಾನ್ಯ ಅಧ್ಯಕ್ಷರೆ, ಜೋಡಿ ಮತ್ತು ಇನಾಂ ಗ್ರಾಮಗಳ ಬಗ್ಗೆ ಬಂದಿರತಕ್ಕ ಈ ವಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ತಿಳಿಸಬೇಕೆಂದು ಇಚ್ಛಿಸುತ್ತೇನೆ. ನಮ್ಮ ಮುಂದಿರತಕ್ಕ ಹಲವು ಸಮಸ್ಯೆಗಳಲ್ಲಿ Land Reforms—ಎಂದರೆ ಜಮೀನಿನ ಬಗ್ಗೆ ಆಗಬೇಕಾದ ಬದಲಾವಣೆಗಳೇನೇನಿದೆಯೋ ಆ ಬದಲಾವಣೆಗಳಲ್ಲಿ ಇನಾಂ ಮತ್ತು ಜೋಡಿಗ್ರಾಮಗಳ ರದ್ದಿಯಾತಿಯು ಒಂದೆಂದು ಇಟ್ಟುಕೊಳ್ಳಬಹುದಾಗಿದೆಯೆಂದು ಅಭಿಪ್ರಾಯವುಳ್ಳವನಾಗಿದ್ದೇನೆ. ಈ ಜೋಡಿಗ್ರಾಮಗಳ ಸಮಸ್ಯೆ ಬಹು ದಿವಸಗಳಿಂದ ಸರ್ಕಾರದ ಮುಂದಿದ್ದುದರಿಂದ ಅದನ್ನು ಬೇಗ ಪರಿಹಾರವಾಡಬಹುದೆಂದು ಭಾವಿಸಿದ್ದರೂ, ಬಾರದೆ ಎಂತುಹೋಗುವುದಕ್ಕೆ ಬದಲಾಗಿ, ಕೊನೆಗೆ ತಡವಾಗಿಯಾದರೂ ಈ ಬಿಲ್ಲಿನ ರೂಪದಲ್ಲಿ ಬಂದಿದ್ದಕ್ಕಾಗಿ ನಾನು ಸಂತೋಷಪಡುತ್ತೇನೆ.

ಇದರಲ್ಲಿ, ಧರ್ಮಸಂಸ್ಥೆಗಳ ಹೆಸರಿನಲ್ಲಿ ಕಾರಣಾಂತರದಿಂದ ನಮ್ಮ ದೇಶದಲ್ಲಿ ಬಂದಿರತಕ್ಕ ಇನಾಂತಿಗಳೇನಿವೆಯೋ ಅವುಗಳನ್ನು ಏನು ಮಾಡಬೇಕೆಂಬ ಸಮಸ್ಯೆ ಸ್ವಲ್ಪ ಜಿಗುಪ್ಸೆಯಿಂದ ಉಳಿದಿದೆ. ನನಗೆ ತೋರುತ್ತದೆ, ಹಿಂದೆ ಹರ್ಷ ಚಕ್ರವರ್ತಿಗಳ ಕಾಲದಲ್ಲಿ ಆಗಿನ ಕಾಲಕ್ಕೆ, ಆಗಿನ ವಾತಾವರಣಕ್ಕನುಗುಣವಾಗಿ ಈ ರೀತಿ ವಿದ್ಯಾಸಂಸ್ಥೆಗಳಿಗೆ, ಧರ್ಮಸಂಸ್ಥೆಗಳಿಗೆ ಇನಾಂತಿಗಳನ್ನು ದೇಶದ ಸರ್ವೇ ಜನರ ಹಿತದೃಷ್ಟಿಯಿಂದ ವಿದ್ಯಾಪ್ರಸಾರ, ಧರ್ಮಪ್ರಸಾರಮಾಡಲೆಂದು ಕೊಟ್ಟಿತ್ತು. ಆದರೆ ಈಗ ಈ ಧರ್ಮಸಂಸ್ಥೆಗಳ ಹೆಸರಿನಲ್ಲಿ ಬಂದಂಥ ಜೋಡಿಗ್ರಾಮಗಳಿಂದ ದೇಶಕ್ಕೆ ಬರುತ್ತಿರುವ ಕಂದಾಯ ಮತ್ತು ದೇಶಕ್ಕೆ ಸಲ್ಲತಕ್ಕ ಸೇವೆ ಸಮರ್ಪಕವಾಗಿಲ್ಲವೆಂಬ ಒಂದು ದೃಷ್ಟಿಯಿಂದ ನೋಡಿದರೆ, ಇನ್ನೊಂದು ದೃಷ್ಟಿಯಿಂದ ಆ ಧರ್ಮಸಂಸ್ಥೆಗಳಿದ್ದೂ ದೇಶಕ್ಕೆ ಅವು ಸಲ್ಲಿಸಬೇಕಾದ ಸೇವೆಯನ್ನು ಸಲ್ಲಿಸುತ್ತಿಲ್ಲವೆಂಬುದು ಬೇರೆ ಇದೆ. ಅಲ್ಲಿಗೆ, ಇದರಲ್ಲಿ ಸ್ವರ ಅಭಿವೃದ್ಧಿಗೂ ಅವಕಾಶವಿಲ್ಲವೆಂದೂ ಎಡರು ತೊಡರುಗಳಿಂದ ಕೂಡಿದೆಯೆಂದೂ ಮನಗಂಡು ಇವುಗಳನ್ನು ತೆಗೆದುಹಾಕಬೇಕು. ಒಂದುವೇಳೆ ಬಹು ದಿವಸದ ಸಂಸ್ಥೆಗಳೆಂದು ಹೇಳಿ ತೆಗೆಯುವಹಾಗಿಲ್ಲವೆಂದಿದ್ದರೆ, ಅವನ್ನು ಅವರಿಗೆ ಬಿಡಬಹುದೆಂದು ನಂಬತಕ್ಕವರಲ್ಲಿ ನಾನೊಬ್ಬ. ಆದರೆ ಗ್ರಾಮಾಧಿಕಾರಿಗಳಿಗೆ ಸಂಬಂಧಪಟ್ಟ ಇನಾಂಗಳೇನಿವೆ ಅವುಗಳನ್ನು ರದ್ದುಮಾಡಿ, ಬೇಕೆಂದರೆ ಆ ಜಮೀನುಗಳನ್ನು ಅವರಿಗೇ ಕೊಟ್ಟು ಕಂದಾಯರೂಪದಲ್ಲಿ ಹಣ ಜಮಾಡಿಕೊಂಡು, ಅವರುಗಳ ಕೆಲಸಕ್ಕೆ ಸಂಬಳವನ್ನು ಗೊತ್ತುಮಾಡಿದರೆ ಅವರುಗಳ ಕೆಲಸ ಇನ್ನೂ ಸಮರ್ಪಕವಾಗಿ ನಡೆಯುತ್ತದೆಂದು ನಾನು ಭಾವಿಸುತ್ತೇನೆ. ಏಕೆಂದರೆ ತಿಂಗಳು-ತಿಂಗಳು ಸಂಬಳ ಕೊಡದೆ ಈಗ ಅವರುಗಳಿಗೆ ಜೀವನ ಮಾಡುವುದು ಕಷ್ಟ. ಅಲ್ಲದೆ, ಗ್ರಾಮನೌಕರರಿಗೆ ಜಮೀನು ಕೊಟ್ಟು ಅವನು ಸ್ವಂತವಾಗಿ ವ್ಯವಸಾಯ ಮಾಡಿ ಜೀವನಕ್ಕೆ ಸಂಪಾದನೆ ಮಾಡುವುದೆಂಬ security of service ಅವನಿಗೆ ಜಮೀನು ಮುಂಖಾಂತರ ಇರುವುದರಿಂದ ಸರ್ಕಾರಿ ಸೇವೆಯನ್ನು ಮಾಡದೆ ಹೋದರೂ ಪರವಾಗಿಲ್ಲವೆಂದು ನಿರ್ಭಯವಾಗಿ ವರ್ತನೆಮಾಡು

(ಶ್ರೀ ಕೆ. ಪ್ರಭಾಕರ್.)

ತ್ತಾನೆ. ಈ ದೃಷ್ಟಿಯಿಂದ ಜಮೀನು ರೂಪದಲ್ಲಿರುವುದನ್ನು ತಪ್ಪಿಸುವುದು ಸೂಕ್ತವೆಂದು ನಾನು ನಂಬುತ್ತೇನೆ. ಆದ್ದರಿಂದ ಈ ಇನಾಂತಿಗಳನ್ನು ಕಂದಾಯದ ಜಮೀನುಗಳಾಗಿ ಪರಿವರ್ತನೆಮಾಡಿ ಅವರವರಿಗೇ ಕೊಟ್ಟು, ಅವರ ಸೇವೆಗೆ ಸರಿಯಾದ ಸಂಬಳ ಕೊಟ್ಟು ಮಾರ್ಪಾಟು ಮಾಡಬಹುದು. ಆದ್ದರಿಂದ ಅವರ ಇನಾಂತಿಗಳನ್ನು ಕಿತ್ತುಕೊಂಡು ಬೇರೆಯವರಿಗೆ ಕೊಡಕೂಡದು. ಏಕೆಂದರೆ ಅವರುಗಳು ಆ ಜಮೀನುಗಳನ್ನೇ ನಂಬಿಕೊಂಡಿದ್ದಾರೆ.

ಅಮೇಲೆ, ಮಿಕ್ಕ ಇನಾಂ ಮತ್ತು ಜೋಡಿಗ್ರಾಮಗಳ ಸಮಸ್ಯೆ ನೋಡುವುದಾದರೆ, ಇದೊಂದು ಆಳವಾದ ಸಮಸ್ಯೆ. ಈ ಸಮಸ್ಯೆಯನ್ನು ಬಿಡಿಸಹೊರಟಾಗ ಹಾವನ್ನು ಕೊಂದು ಹದ್ದಿಗೆ ಹಾಕಿದರು ಎಂಬಂತೆ ಮಾಡಬಾರದು. ಆದಕ್ಕೇ ಈ ವಿಚಾರವನ್ನು ನಾನು ಸ್ವಲ್ಪಮಟ್ಟಿಗೆ ನಿರ್ದಾಕ್ಷಿಣ್ಯವಾಗಿ ಹೇಳಬಯಸುತ್ತೇನೆ. ಇಂದು ಇನಾಂ ಮತ್ತು ಜೋಡಿಗ್ರಾಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುವಾಗ ಮೂರು ಬಗೆಯ ಜನರನ್ನು ಅಲ್ಲಿ ನಾವು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಖದೀಂ ಚೆನೆಂಟುಗಳೆನ್ನುವಂತೆ ಖದೀಂ ಇನಾಂದಾರರೂ ಗಳೂ ಇದ್ದಾರೆ: ನೂರಾರು ಜನರು ಮಕ್ಕಳು ಮರಿಗಳು ಒಳ್ಳೆಯ ಸ್ಥಾನಮಾನಗಳಲ್ಲಿದ್ದು ಐಶ್ವರ್ಯವಂತರಾಗಿ ಇನಾಂತಿಯನ್ನೇ ಜೀವನಕ್ಕೆ ನೆಚ್ಚಿಕೊಳ್ಳದೆ ಸುಖವಾಗಿರುವವರಾಗಿ, ಈಗ ನೀವು ಆ ಇನಾಂತಿಗಳನ್ನು Compensation ಇಲ್ಲದೆ ಕಿತ್ತುಕೊಂಡರೂ ಪೀಡೆ ಕಳೆಯಿತು ಎಂದು ಹೇಳುವವರೂ ಇದ್ದಾರೆ. ಅಂಥವರ Compensation ಪ್ರಶ್ನೆ ಬಂದಾಗ ಅಳುವವರ ಗಂಡ ಬಂದರೆ ನಗುವವರ ಗಂಡನೂ ಬರುತ್ತಾನೆಂದು ಭಾವಿಸಿ, ಅಳುವವರ ಪ್ರಶ್ನೆಯನ್ನೇ ತಮ್ಮ ಮುಂದಿಡುತ್ತಾ Compensation ಬಂದಾಗ ಸಂತೋಷದಿಂದ ತೆಗೆದುಕೊಳ್ಳುತ್ತಾರೆ. 'Death duty' ಹಾಕಿ ಸರ್ಕಾರಕ್ಕೆ ಸ್ವಲ್ಪ ಹಣವನ್ನು ವಸೂಲು ಮಾಡಿಕೊಳ್ಳಬೇಕೆನ್ನುವ ಈ ಕಾಲದಲ್ಲಿ ಈ ರೀತಿ Compensation ಕೊಡುವುದು ಉಚಿತವೇ ಎಂಬುದನ್ನು ನೋಡಬೇಕೆಂದು ಹೇಳುತ್ತೇನೆ. ಅದಿಲ್ಲದೆ ಈ ವರಮಾನವನ್ನೇ ನಂಬಿಕೊಂಡು ಮನೆಯಲ್ಲಿ ಮುಂಜಿ ಮದುವೆ ಮಾಡಬೇಕೆಂಬಿರುವವರ ವಿಷಯದಲ್ಲಿ ಸಂಸ್ಥಾನ ಸ್ವಲ್ಪ ಹೆಚ್ಚಿನ ದಯೆಯಿಂದ ವರ್ತಿಸುವುದು ಉಚಿತವಾಗಿದೆ. ಅಲ್ಲದೆ ಅವರಲ್ಲ *bona fide* ಯಾಗಿ ವ್ಯವಸಾಯ ಮಾಡುವವರಿಗೆ ಜಮೀನುಗಳನ್ನೂ ಕೊಡ ಕೊಡಬಹುದು, ಹಾಗೂ ಅವರಿಗೆ ಸಲ್ಲಬೇಕಾದ Compensation ನ್ನನ್ನೂ ಕೊಡಬಹುದು. ಇನಾಂದಾರರುಗಳಿಗೆ ಮತ್ತು ಜೋಡಿದಾರರುಗಳಿಗೆ ಸಲ್ಲತಕ್ಕ ಹಣ ಏನಿದೆಯೋ ಆ ಹಣದ ಮೇಲೆ ನಿಮ್ಮ ಹತೋಟಿಯೇನಿದೆಯೆಂಬುದನ್ನೂ ತಾವು ಸ್ವಲ್ಪ ಸೂಕ್ಷ್ಮವಾಗಿ ಯೋಚನೆ ಮಾಡಬೇಕಾಗಿದೆ. ಏಕೆಂದರೆ ಅವರು ತಮಗೆ ಕೊಟ್ಟಿರುವ ಜೋಡಿಗ್ರಾಮವನ್ನು ನಿರ್ಭಯವಾಗಿ ಕಾನೂನು ಶಿಸ್ತಿನಿಂದ ಹಿಡಿದುಕೊಂಡಿದ್ದರು. Law in Regimentation ಅಷ್ಟಾಗಿ ಜೋಡಿಗ್ರಾಮದ ರೈತರಿಗಿಲ್ಲ. ಅವರ ಸ್ಥಿತಿಗತಿಗಳು ತೀರ ಶೋಚನೀಯವಾಗಿವೆ. ಸರ್ಕಾರಿ ಗ್ರಾಮಗಳ ಅಭಿವೃದ್ಧಿಗೆ ಏನೇನು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದೀರೊ ಅಂಥ ಸೌಕರ್ಯಗಳು ಇಲ್ಲ ಇಲ್ಲದಿರುವುದರಿಂದ, ಆ ಗ್ರಾಮಗಳ ಅಭಿವೃದ್ಧಿಗೆ ಏನು ಆಗಬೇಕೆಂಬ ದೊಡ್ಡ ಜವಾಬ್ದಾರಿ ಸರ್ಕಾರದವರ ಮೇಲೆ ಬಿದ್ದಿದೆ. ಅದ್ದರಿಂದ ನಾವು Compensation ಹಣವನ್ನು ಒಂದಲ್ಲೊಂದು ರೂಪದಲ್ಲಿ ಜಮೀನನ್ನು ಪಡೆಯತಕ್ಕ ರೈತರುಗಳಿಂದ ಕಂತು ರೂಪದಲ್ಲಿ ತೆಗೆದುಕೊಂಡು ಜೋಡಿದಾರರಿಗೆ ಕೊಡುವುದರಿಂದ ಆ ಹಣದಲ್ಲಿ ಶೇಕಡ ಇಷ್ಟು ಭಾಗವೆಂದು ನಿಗದಿಮಾಡಿ ಆ ಜೋಡಿಗ್ರಾಮಗಳ 10 ವರ್ಷದ ಅಭಿವೃದ್ಧಿ ಯೋಜನೆಗೆ ಹಣವನ್ನು ಹಿಡಿದುಕೊಂಡು ಸರ್ಕಾರದವರು ಕೊಡಬೇಕು. ಇಲ್ಲದಿದ್ದರೆ, ಜೋಡಿದಾರರ ಅತ್ರದ್ಧೆಯಿಂದಲೋ ಅಥವಾ ಜೋಡಿದಾರರಿಗೂ ರೈತರಿಗೂ ಉಂಟಾದ ಸರಸವಿರಸಗಳಲ್ಲಿ ಸರ್ಕಾರದವರು ಕೈ ಹಾಕಿದ ಪರಿಣಾಮವಾಗಿಯೋ ಹಿಂದುಳಿದಿರತಕ್ಕ ಈ ಗ್ರಾಮಗಳ ಅಭಿವೃದ್ಧಿಯ ಬಗ್ಗೆ ಈ ಡಿಪಿಸಿಟ್ ಬಡ್ಜೆಟ್ಟಿನ ಕಾಲದಲ್ಲಿ ಹೆಚ್ಚಿಗೆ ಹಣವನ್ನು ಖರ್ಚುಮಾಡಬೇಕಾಗಿ ಬರುತ್ತದೆ. ಆದ್ದರಿಂದ ನಮ್ಮ ರೈತಬಾಂಧವರು ಆ ಗ್ರಾಮಗಳಿಗೆ ಸ್ಕೂಲು ಮುಂತಾದುವುಗಳನ್ನು ಕೊಡಬೇಕೆಂದು ಹೇಳುವಾಗ ಈ extra ಮೊಬಲಗನ್ನೂ ಏಕೆ ಜೋಡಿದಾರರುಗಳಿಂದ ತೆಗೆದುಕೊಳ್ಳಕೂಡದೆಂದು ನಾನು ಕೇಳುತ್ತೇನೆ. ಕಂತಿನರೂಪದಲ್ಲಿ ರೈತರಿಂದ ಹಣವನ್ನು ತೆಗೆದುಕೊಳ್ಳುವಾಗ, ಜೋಡಿಗ್ರಾಮಗಳಲ್ಲಿ ಮೂರು ಬಗೆಯ ರೈತರಿದ್ದಾರೆ ಸಣ್ಣಪುಟ್ಟ ರೈತರಿಗೆ Change of Mas ers ಆಗುತ್ತಾರೆಯೇ ವಿನಾ ಅವರ ಸ್ಥಿತಿಗತಿ ಬದಲಾವಣೆಯಾಗುವುದಿಲ್ಲ. ಸಣ್ಣ ಪುಟ್ಟ ರೈತರನ್ನು ಅಭಿವೃದ್ಧಿ ಪಡಿಸಬೇಕು. ದೊಡ್ಡವರಿಗೆ ಶಕ್ತಿಯಿರುವ ಹಾಗೆ ಚಿಕ್ಕಚಿಕ್ಕ ರೈತರಿಗೆ ಇರುವುದಿಲ್ಲ. ಜಾಸ್ತಿ ಸ್ವತ್ತಿರುವವರು ಜಾಸ್ತಿ ಕಂತು ಕೊಡುತ್ತಾರೆ. ಆದರೆ ಸಣ್ಣವರು ಕೊಡಬೇಕೆಂದರೆ ಕಷ್ಟ. ಆದುದರಿಂದ ಕಾಂಪೆನ್ಸೇಷನ್ ಹಣವನ್ನು ಕಂತು ಪ್ರಕಾರ ತೆಗೆದುಕೊಳ್ಳುವಾಗ ಸಣ್ಣಪುಟ್ಟರೈತರಿಗೆ ಕಂತುತೀರಿಸುವಾಗ ಹೆಚ್ಚಿನ ರಿಯಾಯಿತಿ ದೊರಕಿಸಬೇಕು.

ಜೋಡಿ ಗ್ರಾಮಗಳು ರದ್ದಾಗುತ್ತವೆಂಬ ವಾತಾವರಣ 1948ರಲ್ಲಿ ಹುಟ್ಟಿದಮೇಲೆ ಕೆಲವು ಜೋಡೀದಾರರು ಬಹಳ ಬುದ್ಧಿವಂತಿಕೆಯಿಂದ ಮರಗಳನ್ನು ಕಡಿದುಕೊಂಡು ಮಾರುವುದು, ಜಮೀನು ಮಾರುವುದು ಹೀಗೆಲ್ಲ ಮಾಡುತ್ತಿದ್ದಾರೆ. ಡೆಪ್ಯುಟಿ ಕಮೀಷನರುಗಳೂ ಸಂಬಂಧಪಟ್ಟ ಅಧಿಕಾರಿಗಳೂ ಕಂಡರೂ ಕಾಣದಹಾಗಿದ್ದಾರೆಂದು ನಾನು ಹೇಳುವುದಿಲ್ಲ. ರೂಲ್ಸ್ ಸರಿಯಾಗಿ ಜಾರಿಗೇ ಕೊಡುತ್ತಿಲ್ಲ. ಜೋಡೀದಾರರೆಲ್ಲರೂ ಬುದ್ಧಿವಂತರು, ತಿಳಿವಳಿಕಸ್ಥರು, ಕಾನೂನು ಬಲ್ಲವರು. ಹೀಗೆ ಒಂದು ಕಾನೂನು ಬರುತ್ತೆಂಬುದು ಗೊತ್ತಾದದಿನದಿಂದ ಒಂದಲ್ಲ ಒಂದು ರೂಪದಲ್ಲಿ ಜೋಡಿಗ್ರಾಮಗಳಲ್ಲಿ ಸೂರೆ ನಡೆದಿದೆ. ಅಲ್ಲಿ ಬಾವಿಗಳನ್ನು ತೆಗೆಸಿಲ್ಲ, ಮರಗಳನ್ನು ನೆಡಿಸುವ ಬದಲು ಕಡಿಸಿದ್ದಾರೆ, ಕೆರೆಗಳನ್ನು ರಿಪೇರಿ ಮಾಡಿಲ್ಲ, ಹೀಗೆ ಯಾವ ರೀತಿಯಿಂದಲೂ ಆ ಗ್ರಾಮಗಳ ಅಭಿವೃದ್ಧಿಗಾಗಿ ಹಣವನ್ನುಪಯೋಗ ಮಾಡಿಲ್ಲ. ಇನ್ನು ಗ್ರಾಮಗಳ ಪಿಲೇವಾರಿ ಮುಂದೆ ಏನಾಗುತ್ತದೆಯೋ. ಎಷ್ಟು ದಿವಸವಾಗುತ್ತದೆಯೋ ತೀರ್ಮಾನವಾಗಬೇಕಾದರೆ ಹೇಳುವುದಕ್ಕಾಗುವುದಿಲ್ಲ. ಅಷ್ಟರಲ್ಲಿ ಈ ಗ್ರಾಮಗಳು ಮುಂದೆ ಬರುವುದಕ್ಕೆ ಅಲ್ಲಿ ನೆಮ್ಮದಿ ಸರಿಯಾಗಿರುವಹಾಗೆ ಒಂದು ಏರ್ಪಾಡು ಮಾಡಬೇಕು, ಒಂದು ಕಾನೂನು ಮಾಡಬೇಕು. 1948 ನೆಯ ಇಸವಿಯಿಂದ ಈಚೆಗೆ ಆಗಿರತಕ್ಕ ಪತ್ರವ್ಯವಹಾರಗಳು, ರಿಜಿಸ್ಟರಾಗಿರತಕ್ಕ ಪತ್ರಗಳು ಯಾವುದು ರೈತರ ಯೋಗಕ್ಷೇಮಕ್ಕೆ ವ್ಯತಿರಿಕ್ತವಾಗಿ ನಡೆದಿರುತ್ತವೆಯೋ ಅಂಥವೆಲ್ಲವೂ ನ್ಯಾಯಬದ್ಧವಲ್ಲ, ಕ್ರಮಬದ್ಧವಲ್ಲವೆಂದು ಒಂದೇ ಸರ್ಕ್ಯುಲರ್ ಮಾಡಿದರೆ ಸರಿಯಾಗುತ್ತದೆಯೋ ಏನೋ ಎನ್ನಿಸುತ್ತದೆ. ಈಗ ಜೋಡಿಗ್ರಾಮಗಳಲ್ಲಿರುವ ರೈತರು

ನೆಮ್ಮದಿಯ ಬಗ್ಗೆ ಹೇಳುವಾಗ, ಜೋಡಿಗ್ರಾಮಗಳ ಒಟ್ಟು ಜಮೀನಿನಲ್ಲಿ ಸುಮಾರು ಕಾಲುಭಾಗವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕು. ಮುಂದೆ ಜೋಡಿಗ್ರಾಮಗಳು ಕಂದಾಯದ ಗ್ರಾಮಗಳಾಗುತ್ತವೆ. ಗೋಮಾಳಕ್ಕೆ ಜಮೀನಿರುವುದಿಲ್ಲ. ಎಷ್ಟೋ ಜೋಡಿಗ್ರಾಮಗಳಲ್ಲಿ, ಅವು ಹರಿಜನರಿಗೆ ಆಗುವುದಿಲ್ಲವೆಂದು ಸುಮಾರು ಶೇಕಡ 90ರಷ್ಟು ಜೋಡಿಗ್ರಾಮಗಳಲ್ಲಿ ಹರಿಜನರಿರುವುದಿಲ್ಲ. ಸರ್ಕಾರಿ ಕಂದಾಯದ ಗ್ರಾಮಗಳಾದಮೇಲೆ ಅಲ್ಲಿಗೆ ಅವರು ಬಂದು ನೆಲೆಸಬೇಕಾಗಿದೆ. ಆದಕಾರಣ ಶೇಕಡ 25 ರಷ್ಟು ಜಮೀನನ್ನು ಮೀಸಲಾಗಿಟ್ಟು ಹರಿಜನರಿಗೆ ಸಾರೋದ್ಧಾರವಾದ ಉಪಕಾರಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ.—(ಬೇಲೂರು-ಅನುಸೂಚಿತ ಜಾತಿಗಳು) ಸ್ವಾಮಿ, ನಮ್ಮ ಮೈಸೂರು ಸರ್ಕಾರದವರು ಸಭೆಯ ಮುಂದೆ ಮಂಡಿಸಿರುವ ಈ ಇನಾಂ ರದ್ದಿಯಾತಿ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈಗಾಗಲೇ ಈ ಸಭೆಯ ಮಾನ್ಯ ಸದಸರು ಅನೇಕ ವಿಧದಲ್ಲಿ ಸರ್ಕಾರಕ್ಕೆ ಸಲಹೆಗಳನ್ನು ನೀಡಿದ್ದಾರೆ. ನಾನು ಕೆಲವು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಜೋಡಿ ಮತ್ತು ಇನಾಂಗ್ರಾಮಗಳನ್ನು ರದ್ದುಮಾಡುವ ಮಸೂದೆಯು ಏಳೆಂಟುವರ್ಷಗಳ ಹಿಂದೆಯೇ ಬರಬೇಕಾಗಿತ್ತು. ಹಿಂದಿನಿಂದಲೂ ಇದನ್ನು ತರುತ್ತೇವೆಂದು ಹೇಳಿ ಸರ್ಕಾರದವರು ನಿಧಾನಮಾಡಿದರು. ಹೀಗೆ ಮಾಡಿದುದರಿಂದ ಸುಮಾರು ಶೇಕಡ 50 ರಷ್ಟು ಜಮೀನುಗಳನ್ನು ಜೋಡಿ ಮತ್ತು ಇನಾಂದಾರರು ಮಾರಬಿಟ್ಟಿದ್ದಾರೆ ಅನೇಕ ಪ್ರಭಾವಶಾಲಿಗಳು ಜೋಡಿ ಗ್ರಾಮಗಳಲ್ಲಿರುವ ಒಳ್ಳೆಯ ಜಮೀನುಗಳನ್ನು ಬಡ ರೈತರಿಂದ ಕಿತ್ತುಕೊಂಡು ಈಗಾಗಲೇ ಮಾರಾಟ ಮಾಡಿದ್ದಾರೆ. ಜೋಡಿಗ್ರಾಮಗಳ ಬಿಲ್ಲಿನ ಮೇಲೆ ಚರ್ಚೆಯು ಈ ಸಭೆಯಮುಂದೆ ಈ ದಿನ ಬಂದಿದೆ. ನಾಳೆ ಪ್ರತಿಕೆಗಳಲ್ಲಿ ಪ್ರಕಟವಾಗುತ್ತದೆ. ಅನಂತರ ಜೋಡಿದಾರರು ಇನ್ನೂ ಹೆಚ್ಚಾಗಿ ಮಾರಾಟಮಾಡಲು ಪ್ರಾರಂಭಿಸುತ್ತಾರೆ. ಈ ಮಸೂದೆಯನ್ನು ಮತ್ತೆ ಸೆಲೆಕ್ಟ್ ಕಮಿಟಿಯ ಮುಂದಿಟ್ಟು ಇದಕ್ಕೆ ಸರಿಯಾದ ರೂಪರೇಖೆಗಳನ್ನು ಕೊಡಬೇಕೆಂದು ಮಂತ್ರಿಗಳು ಹೇಳಿದರು. ಇದಕ್ಕೆ ಸರ್ಕಾರದವರು ಬಲವಾದ ರೂಪರೇಖೆಗಳನ್ನು ಕೊಡಬೇಕು. ಏಕೆಂಧರೆ ಮೈಸೂರು ದೇಶಕ್ಕೆ ಪ್ರಜಾಸರ್ಕಾರ ಬಂದಿದೆ. ಪ್ರಜೆಗಳ ಕೈಯ್ಯಲ್ಲಿದೆ ಸರ್ಕಾರ. ಪ್ರಜಾಸರ್ಕಾರ ಎಂಬ ಭಾವನೆ ಎಲ್ಲಾ ಪ್ರಜೆಗಳಿಗೂ ಬಂದಿದ್ದರೂ ಜೋಡಿಗ್ರಾಮಗಳಲ್ಲಿರುವ ರೈತರಿಗೆ ಮಾತ್ರ ಇನ್ನೂ ಪ್ರಜಾಸರ್ಕಾರ ಬಂದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚು ಜೋಡಿಗ್ರಾಮಗಳಿವೆ. ಆ ಗ್ರಾಮಗಳಿಗೆ ಪ್ರವೇಶಮಾಡಿ ನೋಡಿದರೆ, ಸರ್ಕಾರಿ ಗ್ರಾಮಗಳಲ್ಲಿ ಸರ್ಕಾರ ಕಲ್ಪಿಸಿರುವ ಯಾವ ಸೌಕರ್ಯಗಳೂ ಅಲ್ಲಿನ ಜನರಿಗೆ ಸಿಕ್ಕಿಲ್ಲ. ಕೆರೆಗಳು ರಿಪೇರಿಯಿಲ್ಲದೆ ಏರಿಗಳಲ್ಲಿ ಕಾಡು ಬೆಳೆದಿದೆ. ಕೆರೆಗಳ ತೂಬುಗಳು ಒಡೆದುಹೋಗಿ ಎಷ್ಟೋವರ್ಷಗಳಾಗಿದ್ದರೂ ಸರಿಪಡಿಸಿಲ್ಲ, ಸಂಚಾರಕ್ಕೆ ಸರಿಯಾದ ರಸ್ತೆಗಳಿಲ್ಲ. ಜೋಡಿದಾರರಿಗೆ ಈ ಅನುಕೂಲಗಳನ್ನು ಮಾಡಿಕೊಡುವುದರಲ್ಲಿ ಗಮನವೇ ಇಲ್ಲ. ಅವರೇನಿದ್ದರೂ ತಮಗೆ ಬರಬೇಕಾದುದನ್ನು ವಸೂಲುಮಾಡಿಕೊಂಡು ಸೊಗಸಾಗಿ ಮನೆಗಳನ್ನು ಕಟ್ಟಿಕೊಂಡು ಭೋಗಾಸಕ್ತರಾಗಿದ್ದಾರೆ ಉದಾಹರಣೆಗೆ ನಾನು ಹೇಳುವುದಾದರೆ, ಬೇಲೂರು ತಾಲ್ಲೂಕು, ಮಾದಿಹಳ್ಳಿ ಹೋಬಳಿ, ಹಿರುಗುಪ್ಪೆ ಗ್ರಾಮದಲ್ಲಿ ರೈತರು ಜೋಡೀದಾರರ ಕಿರುಕುಳವನ್ನು ಸಹಿಸಲಾರದೆ ಹೆಬ್ಬೆಟ್ಟು ಗುರುತು ಮತ್ತು ರುಜು ಹಾಕಿ ಒಂದು ವರ್ಷದ ಹಿಂದೆ ರೆವೆನ್ಯೂ ಮಿನಿಸ್ಟರಿಗೆ ಅರ್ಜಿಕೊಟ್ಟು ಖದೀಂ ಟೆನೆಂಟ್ಸ್ ಹಾಗೆ ಮಾಡಿಕೊಡಿ, ಜೋಡಿದಾರರಿಂದ ನಮಗಾಗುತ್ತಿರುವ ತೊಂದರೆಯನ್ನು ತಪ್ಪಿಸಿ ಎಂದು ಕೇಳಿಕೊಂಡಿದ್ದಾರೆ. ನಮ್ಮ ಸರ್ಕಾರದವರು ಆ ಗ್ರಾಮದ ರೈತರ ಕಷ್ಟವನ್ನು ಹೇಗೆ ಪರಿಹಾರ ಮಾಡಿದ್ದಾರೋ ಗೊತ್ತಿಲ್ಲ. ಏಕೆಂದರೆ, ಪರಿಹಾರ ಮಾಡುವುದಕ್ಕೆ ಇನ್ನೂ ಈ ಮಸೂದೆ ಅಂಗೀಕಾರವಾಗಿಲ್ಲ. ಈ ಮಸೂದೆಯನ್ನು ಜಾಗ್ರತೆ ಅಂಗೀಕಾರಮಾಡಿ ಜೋಡಿಗ್ರಾಮಗಳ ರೈತರಿಗೆ ಅನುಕೂಲವನ್ನು ಆದಷ್ಟು ಬೇಗ ನಮ್ಮ ಸರ್ಕಾರದವರು ಕಲ್ಪಿಸುತಾರೆಂದು ನಾನು ತುಂಬ ಭರವಸೆ ಇಟ್ಟಿದ್ದೇನೆ. ಅದರಲ್ಲಿಯೂ ಈ ದಿವಸ ಈ ಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಿರುವ ಮಾನ್ಯ ರೆವೆನ್ಯೂ ಸಚಿವರು ಕಾರ್ಯದಲ್ಲಿ ಬಹಳ ಛಲಸಾಧಕರೆಂದು ನಮಗೆ ಗೊತ್ತಿದೆ. ಅವರು ಆದಷ್ಟು ಜಾಗ್ರತೆ ಈ ಸಭೆಯ ಅನುಮತಿಯನ್ನು ಪಡೆದುಕೊಂಡು ಈ ಬಿಲ್ಲನ್ನು ಪಾಸುಮಾಡಿಸಿ ಕಾನೂನು ಮಾಡಿ ಬಹಳ ಜಾಗ್ರತೆ ಇದನ್ನು ಕಾರ್ಯರೂಪಕ್ಕೆ ತರುತ್ತಾರೆಂದು ನನಗೆ ನಂಬಿಕೆ ಇದೆ. ನಿನ್ನೆ ಮತ್ತು ಮೊನ್ನೆ ದಿವಸ ಈ ಸಂಬಂಧವಾದ ಮಸೂದೆಗಳು ಅಂಗೀಕಾರವಾಗಿವೆ. ಇವನ್ನು ಎಂಟು ಹತ್ತು ದಿವಸಗಳಲ್ಲೇ ಜಾರಿಗೆ ತಂದಿರುತ್ತಾರೆ. ಹಾಗೆಯೇ ಈ ಮಸೂದೆಯನ್ನೂ ಬೇಗ ಅಂಗೀಕಾರ ಮಾಡಿ ಜಾರಿಗೆ ತರಬೇಕು.

ಅಧ್ಯಕ್ಷರು ನನಗೆ ಐದು ನಿಮಿಷವಾದರೂ ಜಾಸ್ತಿ ಕೊಡಬೇಕು. ಇನ್ನೊಂದು ವಿಷಯ ಹೇಳುತ್ತೇನೆ. ಆಲೂರು ತಾಲ್ಲೂಕು, ಪಾಳ್ಯ ಹೋಬಳಿ ಜೋಡಿ ಅಜ್ಜೇನಹಳ್ಳಿ ಜೋಡೀದಾರರು ಹರಿಜನರಿಂದ ಕಳೆದ ಸಾಲಿನಲ್ಲಿ ಬತ್ತದ ಗುಡ್ಡೆಯನ್ನು ಕಿತ್ತುಕೊಂಡು ಪ್ರಭಾವಶಾಲಿಗಳಿಂದ ರೈತರಿಂದ ಗುಡ್ಡೆಯನ್ನು ಕೀಳಿಸಿ ಉಡಾಫೆಯಿಂದ ಒಕ್ಕಿಸಿ ತೆಗೆದುಕೊಂಡು ಹೋದರು. ಈ ವಿಚಾರದಲ್ಲಿಯೂ ಕೂಡ ಸ್ಥಳೀಯ ಅಧಿಕಾರಿಗಳಿಗೆ ಅವರು ಅರ್ಜಿಯನ್ನು ಕೊಟ್ಟಿದ್ದಾರೆ. ಆ ಜೋಡೀದಾರರು ಯಾರೆಂದರೆ, ಅವರಿಗೆ ಬತ್ತದಿಂದ ಸುಮಾರು ಸಾವಿರಾರು ರೂಪಾಯಿಗಳಷ್ಟು ವರಮಾನ ಬರುತ್ತದೆ. ಅವರು ಹಾಸನ ಡಿಸ್ಟ್ರಿಕ್ಟ್, ಬೇಲೂರು ತಾಲ್ಲೂಕು ಹಾಲುತೊರೆ ಗ್ರಾಮದ ಜೋಡೀದಾರರು,—ಅವರ ಹೆಸರು ನನಗೆ ಗೊತ್ತಿತ್ತು, ಈ ಸಂದರ್ಭದಲ್ಲಿ ಮರೆತು ಹೋಗಿದೆ. ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಡುತಾರೆಂದು ಎದ್ದೂ ಕುಳಿತೂ ನನ್ನಲ್ಲಿದ್ದ ಪಾಯಿಂಟ್‌ಗಳೆಲ್ಲಾ ಮರೆತು ಹೋದವು. (ನಗು !)

ಇನ್ನೊಂದು ಉದಾಹರಣೆ ಕೊಡುತ್ತೇನೆ. ಮಂಜರಾಬಾದು ತಾಲ್ಲೂಕು ಬೆಳಗೋಡು ಹೋಬಳಿ ಜೋಡಿ ರಾಜೇಂದ್ರಪುರ ಎಂಬ ಒಂದು ಜೋಡೀಗ್ರಾಮವಿದೆ. ಆ ಗ್ರಾಮದಲ್ಲಿ ಈವರೆಗೂ ಒಬ್ಬ ರೈತನಿಗೂ ಯಾವ ಒಂದು ಹಕ್ಕೂ ಇಲ್ಲ. ಪ್ರತಿ ವರ್ಷವೂ ಜೋಡೀದಾರರು ಒಬ್ಬ ರೈತನಿಂದ ಜಮೀನು ಕಿತ್ತುಕೊಂಡು ಬೇರೆಯವನಿಗೆ ಕೊಡುತ್ತಿರುತ್ತಾರೆ. ರೈತನಿಂದ ಧವಸ ಬಂದರೆ ಆ ರೈತನಿಗೆ ಒಂದು ರಸೀತಿಯನ್ನೂ ಕೂಡಾ ಕೊಡುವುದಿಲ್ಲ. ಈ ಮಸೂದೆಯ ಪ್ರಕಾರ ಎಷ್ಟೋ ವರ್ಷಗಳಿಂದ ಜಮೀನು ಸಾಗುಮಾಡಿಕೊಂಡಿದ್ದಾನೆಂಬುದನ್ನು ಗೊತ್ತುಮಾಡಿ 50-60 ವರ್ಷಗಳಿಂದ ಮಾಡುತ್ತಿದ್ದರೆ, ಖದೀಮ್ ಟೆನೆಂಟ್, ಇನ್ನೂ ಬೇರೆ ರೀತಿಯ ಟೆನೆಂಟುಗಳೆಂದು ಗೊತ್ತುಮಾಡಬೇಕೆಂಬ ವಿಧಿ ಮಾಡಿರುವ ಹಾಗೆ ಕಾಣುತ್ತದೆ. ಆದರೆ ನಿಜವಾಗಿಯೂ ಈ ಜೋಡೀ

(ಶ್ರೀ ಎಚ್. ಕೆ. ಸಿದ್ದಯ್ಯ.)

ಗ್ರಾಮಗಳಲ್ಲಿ ರೈತರು ಗುತ್ತಿಗೆ, ವಾರ, ಕಂದಾಯ ಕೊಟ್ಟಿದ್ದಕ್ಕೆ ಒಂದು ಚೂರು ರಸೀದಿಯನ್ನೂ ಕೊಡುತ್ತಿಲ್ಲ. ಆದುದರಿಂದ ಸರ್ಕಾರ ಜೋಡೀಗ್ರಾಮಗಳಲ್ಲಿರುವ ರೈತರ ಗೋಳನ್ನು ವಿಚಾರಿಸಿ ಅವರ ಕಷ್ಟವನ್ನು ನಿವಾರಣೆ ಮಾಡಬೇಕಾಗಿದೆ.

5 P. M.

ಆ ರೈತರ ಗೋಳು ನಿಜವಾಗಿಯೂ ಬಹಳ ಶೋಚನೀಯವಾದ ಸ್ಥಿತಿಯಲ್ಲಿವೆ. ಅವರ ಕಷ್ಟವನ್ನು ಹೇಳಲು ಸಾಧ್ಯವೇ ಇಲ್ಲ. ಅದಕ್ಕೋಸ್ಕರವಾಗಿ ಸರ್ಕಾರದವರು ಆದಷ್ಟು ಜಾಗ್ರತೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ಆ ಜೋಡೀದಾರರುಗಳಿಂದ ರೈತರಿಗೆ ಉಂಟಾಗಿರತಕ್ಕ ತೊಂದರೆಗಳನ್ನು ನಿವಾರಣೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಆ ತೊಂದರೆಗಳನ್ನು ನಿವಾರಣೆ ಮಾಡಿ ಅವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡಬೇಕಾಗಿದೆ.

ಇನ್ನು ಜೋಡೀದಾರರಿಗೆ ಸ್ವಲ್ಪ ರಿಯಾಯಿತಿ ತೋರಿಸಿ ಅವರಿಗೊಂದು ಪರಿಹಾರ ಕೊಡಬೇಕೆಂದು ಹೇಳತಕ್ಕ ವಿಚಾರದಲ್ಲಿ ನನಗೆ ಸ್ವಲ್ಪವೂ ಸಂತೋಷವಿಲ್ಲ. ನಾನು ಅವರಿಗೆ ಏನನ್ನೂ ಕೊಡಕೂಡದೆಂತಲೇ ಹೇಳುತ್ತೇನೆ. ಆದರೆ ನಾನು ಅವರಿಗೆ ಈ ರಿಯಾಯಿತಿಯನ್ನು ಕಿತ್ತುಕೊಳಬೇಕೆಂಬ ಅಭಿಲಾಷೆಯಿಂದ ಹೀಗೆ ಹೇಳುತ್ತಿಲ್ಲ. ನಾನು ಹೀಗೆ ಹೇಳುವುದಕ್ಕೆ ಕಾರಣವಾದವರೂ ಇಷ್ಟೇ. ಆ ಇನಾಂದಾರರು ಯಾವ ಯಾವ ಗ್ರಾಮದಲ್ಲಿರುತಾರೋ ಅವರು ಆ ಗ್ರಾಮದಲ್ಲೇ ಇರದೆ ಎಲ್ಲೆಲ್ಲಿಯೋ ಇದ್ದುಕೊಂಡು ಆ ಜಮೀನುಗಳನ್ನೆಲ್ಲಾ ಹಾಳುಗೆಡವಿ, ರೈತರಿಗೆ ವಿಶೇಷ ತೊಂದರೆಗಳನ್ನು ಕೊಟ್ಟು ಅವರನ್ನು ಕಾಡಿಸಿ, ಪೀಡಿಸಿ, ಹಿಂಸೆಪಡಿಸಿರತಕ್ಕದ್ದೆಲ್ಲಾ ಆ ದೇವರಿಗೊಬ್ಬನಿಗೇ ಗೊತ್ತು. ಇದನ್ನು ನಾನು ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರ ಅವರಿಗೆ ಒಂದು ಕಾಸನ್ನೂ ಸಹ ಕೊಡಬಾರದೆಂದು ಹೇಳಿದೆನು. ಏನೋ ಅಪೂರ್ವವಾಗಿ ಒಬ್ಬಿಬ್ಬರು ಅಂತಹ ಒಳ್ಳೆಯವರಿರಬಹುದು. ಅಂಥವರಿಗೆ ಮಾತ್ರ ಬೇಕಾದರೆ ಸ್ವಲ್ಪ ರಿಯಾಯಿತಿ ಕೊಡಬಹುದಾಗಿದೆ.

ಈ ದಿವಸ ನಮ್ಮ ಕಾಂಗ್ರೆಸ್ ಸರ್ಕಾರ ಇಂಥ ಒಂದು ಪ್ರಜೋಪಕಾರಿಯಾದ ಮಸೂದೆಯನ್ನು ತಂದಿರುವುದಕ್ಕಾಗಿ ನಮಗೆಲ್ಲರಿಗೂ ಬಹಳ ಸಂತೋಷವಾಗಿರುತ್ತದೆ. ತಾವು ಇದನ್ನು ಜಾಗ್ರತೆ ಪಾಸ್‌ಮಾಡಿಸಿ ಜಾರಿಗೆ ಬೇಗತಂದರೆ ಭೂಮಿಯನ್ನು ಉಳತಕ್ಕ ಮನುಷ್ಯನಿಗೆ ಸಮಾನವಾದ ಹಕ್ಕನ್ನು ಕೊಟ್ಟು, ಎಂದರೆ ತರಿ, ಖುಷ್ಕಿ, ಬಾಗಾಯ್ತು ಈ ಎಲ್ಲ ಜಮೀನುಗಳಲ್ಲೂ ದೊರೆಯುವಂತೆ ಮಾಡಿ ರೈತರನ್ನು ಕಾಪಾಡಬೇಕೆಂದು ಬೇಡಿಕೊಳ್ಳುತ್ತೇನೆ. ಈಗಾಗಲೇ ಆ ಜೋಡೀದಾರರಿಗೂ ಸಹ ಸರ್ಕಾರದವರು ಇಂಥ ಒಂದು ಕಾನೂನನ್ನು ತರುತ್ತಾರೆಂಬ ವದಂತಿ ಹರಡಿರುವುದರಿಂದ ಅವರು ತೋಟಗಳನ್ನು ಕೆಡಿಸಿ, ಅಲ್ಲೆಲ್ಲಾ ಕಾಡು ಬೆಳೆಸಿಕೊಂಡು ಅವನ್ನು ಸರ್ಕಾರದವರ ತಲೆಗೆ ಕಟ್ಟಬೇಕೆಂದು ಕಾದುಕೊಳಿತಿದ್ದಾರೆ. ಅದಕ್ಕಾಗಿಯೇ ನಾನೂ ತಮಗೆ ಅವರಿಗೇನೂ ಕೊಡಬಾರದು ಎಂದು ಹೇಳಿದ್ದು. ಆದರೆ ಈಗ ಇಂಥ ಒಂದು ಮಸೂದೆಯನ್ನು ಸರ್ಕಾರದವರು ತಂದಿರುವುದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು ನನಗೆ ಮಾತನಾಡಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೂ ಸರ್ಕಾರದವರಿಗೂ, ಈ ಮಾನ್ಯ ಸಭೆಯವರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise for the day and meet to-morrow at 8-30 A.M.

The House adjourned at Five Minutes past Five of the Clock to meet again at Thirty Minutes past Eight of the Clock, on Thursday, 2nd April 1953.

WD 4516—GPB—500—16-1-54